(SRI MULKA GOVINDA REDDY.)

I would very much like to know from the Minister whether any of these provisions of the article warrant notification.

MR. SPEAKER.—Article 192 is conditional. If any of these disqualifications arise under sub-clauses of article 191, then the question shall be referred to the decision of the Governor and that decision shall be final.

SRI A. G. RAMACHANDRA RAO.—I would invite the attention of the Chair to sub-clause (e) of article 191 of the Constitution.

> "if he is disqualified by or under any law made by Parliament."

The Peoples' Representation Act is the law made by the Parliament and if he has incurred any disqualification, the further procedure is laid down there. Therefore, I submit at this stage the House cannot discuss this question and no privilege has been affected.

MR. SPEAKER.—I will give the decision tomorrow.

A MEMBER.—Can the Minister continue to sit in this House?

MR. SPEAKER.—Myself and yourself are not responsible for that.

---

2 P.M.

Member's Representations.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಸಭೆಯ ಕೆಲವರು ಸದಸ್ಯರು 'ಸುದರ್ಶನ' ಅತಿಥಿ ಗೃಹದಲ್ಲಿದ್ದಾರೆ. ಇದರ ಸುತ್ತಲೂ ವಿಧಾನ ಸೌಧದ ಹತ್ತಿರದಿಂದ ಮಣ್ಣನ್ನು ತೆಗೆದುಕೊಂಡು ಬಂದು ಹಾಕುತ್ತಿದ್ದಾರೆ. ಈ ಸಂಬಂಧದಲ್ಲಿ ಮನವಿಯನ್ನು ತಮಗೂ ಒಂದು ಸಲ ಸಲ್ಲಿಸಿದ್ದೇನೆ. ಸರ್ಕಾರಕ್ಕೂ ಸಹ ಎರಡು ಸಲ ಸಲ್ಲಿಸಿದ್ದೇನೆ. ಆದರೂ ಕೂಡ ಯಾವ ವಿಧವಾದ ಪ್ರಯೋಜನವೂ ಆಗಿಲ್ಲ.

ಅಧ್ಯಕ್ಷರು.—ಕಾಗದವನ್ನು ಬರೆಯಿರಿ.

ಶ್ರೀ ಕೆ. ಪುಟ್ಟಸ್ವಾಮಿ.—ತಮಗೆ ಒಂದು ಸಲ ಸಾಕು ಎಂದು ತಿಳಿದುಕೊಂಡಿದ್ದೆ. ಸರ್ಕಾರಕ್ಕೆ ಎರಡು ಸಲ ಹೇಳಿದ್ದೇನೆ. ಈಗ ಪುನಃ ಕಾಗದ ಬರೆಯಿರಿ ಎಂದರೆ ನಾವೇನು ಅರ್ಜಿದಾರರೆ?

ಅಧ್ಯಕ್ಷರು.—ತಾವು ಹೇಳಿದ್ದುದು ನಿಜ. ಆದರೆ ವಿಷಯವನ್ನು ನಾನು ಮರೆತುಬಿಟ್ಟಿದ್ದೆ.

ADJOURNMENT MOTION

Re: Delay in Nationalization of the B.T.C.

MR. SPEAKER.—The adjournment motion will be taken up tomorrow. I will anyway read the motion for the information of the House.

> "That this House do stand adjourned to discuss a definite matter of urgent public importance and of recent occurrence, to wit, the situation arising out of the failure of the Government in nationalizing the Bangalore Transport Company on 1st April 1956 as announced by the Government previously."

STATES REORGANISATION BILL, 1956.

Motion to consider—(contd).

MR. SPEAKER.—Before taking up the discussion on the S.R. Bill, the Chair desires to announce that on the 5th, if it is possible to close the debate on the Special Resolution earlier, the discussion on the Second Five-Year Plan will be taken up and it will be continued on the 6th and 7th also. The House will adjourn on the 7th.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಸಭೆಯ ಮಾನ್ಯ ನಾಯಕರು ಈಗ ಸಭೆ ಮುಂದೆ ಮಂಡಿಸಿರುವ ಮಸೂದೆ ಅಂದರೆ ಸಂಸ್ಥಾನಗಳ ಪುನರ್ವಿಂಗಡಣೆಗೆ ಸಂಬಂಧಪಟ್ಟ ಮಸೂದೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತಿದ್ದೇನೆ. ಈ ಮಸೂದೆಯ ವಿಚಾರದಲ್ಲಿ ಹೊಸದಾಗಿ ಹೇಳಬೇಕಾದಂಥ ಅಂಶಗಳು ಹೆಚ್ಚಾಗಿರುವುದಿಲ್ಲ. ಆದುದರಿಂದ ಹೆಚ್ಚುಕಾಲ ನಾನು ಭಾಷಣ ಮಾಡುವುದಕ್ಕೆ ತೆಗೆದುಕೊಳ್ಳುವುದಿಲ್ಲ. ತಮ್ಮಲ್ಲಿ ಇನ್ನೂ ಒಂದು ಅಂಶ ಅರಿಕೆ ಮಾಡಿಕೊಳ್ಳುವುದೇನೆಂದರೆ, ಹೇಳಿದುದನ್ನೇ ಸಂದರ್ಭಾನುಸಾರ ಹೇಳಬೇಕಾಗಿದೆ. ಇದಕ್ಕೆ ನಾನು ಜವಾಬ್ದಾರನೂ ಅಲ್ಲ, ಕಾರಣನೂ ಅಲ್ಲ. ಹೇಳಿದ ಮಾತನ್ನೇ ಪುನಃ ಹೇಳುವಂಥ ಅವಕಾಶ ಉಂಟಾಗಿರುವುದರಿಂದ ಅದೇ ಮಾತನ್ನು ಉತ್ತರ ರೂಪದಲ್ಲಿ ಹೇಳಬೇಕಾದ ಅಗತ್ಯ ಉಂಟಾಯಿತು. ಈ ಮಾತನ್ನು ವಿವರಿಸಿ ಹೇಳಬೇಕಾದರೆ ಸಭಾನಾಯಕರು ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವಾಗ ಕಾನೂನು ಮತ್ತು ನ್ಯಾಯ ಇವುಗಳನ್ನು ಒತ್ತಟ್ಟಿಗೆ ಇಟ್ಟು, ಲೌಕಿಕವಾಗಿ ಮಾತನಾಡೋಣ, ಯಾರಾದರೂ ಒಬ್ಬರು ನಮ್ಮ ಮನೆಗೆ ಬಂದರೆ, ಅತಿಥಿ ಸತ್ಕಾರ ಮಾಡತಕ್ಕ ಸಂಸ್ಕೃತಿ ಇರತಕ್ಕ ಹಿಂದೂ ಜನ, ಮನೆಗೆ ಬರುವವರನ್ನು ಬರಬೇಡಿ

ಎಂದರೆ ಅಸಂಸ್ಕೃತಿಯಾಗುತ್ತದೆ ಎಂದು ಹೇಳಿದರು. ಹಿಂದೆಯೂ ಅದೇ ಮಾತು ಹೇಳಿದ್ದರು, ನಿನ್ನೆಯೂ ಸಹ ಅದನ್ನೇ ಹೇಳಿದರು. ಹಿಂದೆ ನಾನು ಒಂದು ವಿಧದಲ್ಲಿ ಉತ್ತರವನ್ನು ಹೇಳಿದ್ದೆ. ಪುನರುಚ್ಚಾರಣೆಯ ದೋಷಕ್ಕೆ ಗುರಿಯಾದರೂ ಈಗಲೂ ಸಹ ಹೇಳುತ್ತೇನೆ. ಅತಿಥಿಗಳು ಬಂದರೆ ಅವರನ್ನು ಸತ್ಕರಿಸೋಣ. ಅತಿಥಿಗಳು ಬಂದರೆ ಸಾಮಾನ್ಯವಾಗಿ ಅವರು ಖಾಯಂ permanent guests ಆಗಿ ಇರುವುದಿಲ್ಲ. ಅವರು ಬಂದರೆ ಒಂದೆರಡು ದಿನ, ತಪ್ಪಿದರೆ 8-10 ದಿನಗಳಿರುತ್ತಾರೆ, ಖಾಯಂ ಆಗಿ ನಮ್ಮ ಮನೆಯಲ್ಲೇ ಇರುತ್ತೇವೆ ಎಂದರೆ ಅಂಥವರನ್ನು ನಾವು ಅತಿಥಿಗಳೆಂದು ಭಾವಿಸುವುದಕ್ಕಾಗುವುದಿಲ್ಲ. ಮತ್ತು ಅಂಥವರನ್ನು ನಾವು ಬೇಡವೆಂದರೆ ಅದು ಸಂಸ್ಕೃತಿಯಲ್ಲ, ಧರ್ಮವಲ್ಲ ಎಂದರೆ ಹೇಗೆ? ನಿಜವಾದ ಅತಿಥಿಗಳಿಗೂ ಖಾಯಂ ಆಗಿ ಇರಲು ಬರುವವರಿಗೂ ಹೋಲಿಕೆಯೇ ಇಲ್ಲವೆನ್ನಬಹುದು. ಇನ್ನೊಂದು ವಿಷಯ. ಹೊರಗಿನಿಂದ ತಾತ್ಕಾಲಿಕವಾಗಿ ಬರುವವರಿಗೆ ಮಾತ್ರ ಮನೆಯನ್ನು ಬಿಟ್ಟುಕೊಡುವ ಅಥವಾ ಸೌಲಭ್ಯವನ್ನು ಕಲ್ಪಿಸಿಕೊಡುವ ವಿಷಯವಲ್ಲ. ಅವರು ಖಾಯಂ ಆಗಿ ಇಲ್ಲೇ ಇರುತ್ತಾರೆ. ಅವರು ನಮ್ಮ ಮನೆಗೆ ಬರುವುದೂ ಅಲ್ಲದೆ ನಮ್ಮ ಹೆಸರನ್ನೂ ತೊಡೆದು ಹಾಕಬೇಕೆಂದಿದ್ದರು. ಈಗ ನಮ್ಮ ಹೆಸರು ಮಾತ್ರ ಉಳಿದಿದೆ. ಇದು ಅತಿಥಿ ಸತ್ಕಾರಕ್ಕೆ ಸಂಬಂಧಪಟ್ಟ ವಿಚಾರವಲ್ಲ. ಬೇರೆ ಪ್ರಾಂತದ ಜನರನ್ನು ನಮ್ಮ ಜೊತೆಯಲ್ಲಿ ಸೇರಿಸಿಕೊಳ್ಳುವುದರಿಂದ ಇಲ್ಲಿನ ಆರ್ಥಿಕ ವ್ಯವಸ್ಥೆ ವ್ಯತ್ಯಾಸವಾಗುವುದು, ಇಲ್ಲಿನ ಜನಜೀವನದ ಸೌಕರ್ಯ ಸೌಲಭ್ಯಗಳನ್ನು ಕಡಿಮೆಮಾಡುವುದು, ತಲೆತಲಾಂತರದಿಂದ ಅನೂಚಾನವಾಗಿ ನಡೆದುಕೊಂಡು ಬಂದಿರುವ ಪದ್ಧತಿ, ಆಡಳಿತ ಕ್ರಮ, ಒಂದು ವ್ಯವಸ್ಥೆ ಇವುಗಳನ್ನು ತಲೆಕೆಳಗು ಮಾಡುವುದು ಇವುಗಳಿಗೆ ಅವಕಾಶವಿರಬಾರದು. ಆದುದರಿಂದ ಹೊಸ ಪ್ರಾಂತದ ಜನರು ಬೇರೆ ಎಲ್ಲಿಯೂ ಇರುವುದಕ್ಕೆ ಅವಕಾಶವಿಲ್ಲವೇ ಎಂದು ನಾನು ಕೇಳುತ್ತೇನೆ. ಅಲ್ಲಿಯೂ ನಮ್ಮಂತೆಯೇ ಜನರಿದ್ದಾರೆ, ನಮ್ಮಂತೆಯೇ ವಿಶಾಲವಾದ ಪ್ರಾಂತವಿದೆ. ಅವರೇ ಒಂದು ಹೊಸ ಪ್ರಾಂತ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಇಂಥದರಲ್ಲಿ ನಾವು ನಮ್ಮ ಮನೆಗೆ ಬಂದವರನ್ನು ಬೇಡವೆಂದರೆ ಅಸಂಸ್ಕೃತರಾಗುತ್ತೇವೆಂದು ವಾದಿಸಿದರೆ ಅದು ಅಸಂಬದ್ಧ ಪ್ರಲಾಪವೆಂದು ಮಾತ್ರ ಯತ್ನವಿಲ್ಲದೆ ಹೇಳಬೇಕಾಗಿದೆ.

ಎರಡನೆಯದಾಗಿ ಇಲ್ಲಿ ಬೇಕಾದಂಥ ವ್ಯವಸ್ಥೆ ಇದೆ, ಸಿಬ್ಬಂದಿ (establishment) ಇದೆ, ಆಡಳಿತ ಕಚೇರಿ ಇದೆ, ವಿಧಾನಸೌಧವನ್ನು ಕಟ್ಟುತ್ತಿದ್ದೀರಿ, ಎಲ್ಲವೂ ಅನುಕೂಲವಾಗಿದೆ, ಆದುದರಿಂದ ಇಲ್ಲಿಗೆ ಬಂದು ಝಾಂಡ ಊರೋಣವೆಂದರೆ ಇವರಲ್ಲಿ ಸಂಸ್ಕೃತಿ ಎಷ್ಟರ ಮಟ್ಟಿಗಿದೆ ಎಂದು ಯೋಚಿಸಬಹುದು. ಇದಕ್ಕೆ ಉಪಮಾನ ಉಪಮೇಯಗಳನ್ನು ಹೇಳಬಹುದು. ಹೀಗೆ ವಿರೋಧ ಮಾಡತಕ್ಕವರನ್ನು ಒಂದೇ ಮಾತಿನಲ್ಲಿ ತಮಾಷೆಗಾದರೂ ಸಹ ಅಸಂಸ್ಕೃತರು ಎಂದು ಕರೆಯುವುದು ಸಭಾನಾಯಕರಿಗೆ ಒಳ್ಳೆಯದಲ್ಲ. ನಾನಾ ವಿಷಯಗಳನ್ನು ಅವರು ಹೇಳಿದ್ದಾರೆ. ನಾನೂ ಅವುಗಳಿಗೆ ಉತ್ತರ ಕೊಟ್ಟಿದ್ದೇನೆ. ಇಲ್ಲಿಗೆ ಆ ವಿಚಾರ ಮುಗಿಯಿತು ಎಂದು ನನ್ನ ಅಭಿಪ್ರಾಯ.

ಈ ಪ್ರಾಂತಗಳ ವಿಂಗಡಣೆ ಏಕೆ ಬೇಡ ಎಂಬುದನ್ನು ಒಂದೆರಡು ಮಾತಿನಲ್ಲಿ ಹೇಳಬಹುದು. ನಮ್ಮಲ್ಲಿ ಒಂದು ಸುವ್ಯವಸ್ಥಿತ ಸರ್ಕಾರ, ಒಂದು ಆಡಳಿತಕ್ರಮ ಏರ್ಪಟ್ಟಿದೆ. ಬೇರೆ ಭಾಗಗಳಿಂದ ಬರತಕ್ಕವರ ಆಡಳಿತ ಕ್ರಮಕ್ಕೂ ನಮ್ಮ ಆಡಳಿತ ಕ್ರಮಕ್ಕೂ ವ್ಯತ್ಯಾಸವಿದೆ. ನಮ್ಮ ಕಾನೂನುಗಳಿಗೂ ಅವರ ಕಾನೂನುಗಳಿಗೂ ವ್ಯತ್ಯಾಸವಿದೆ. ಬೇರೆ ಕಡೆಯಿಂದ ಬರತಕ್ಕ ಜನರ ನಡೆ, ನುಡಿ, ಆಚಾರ, ವಿಚಾರ, ವ್ಯವಹಾರಗಳಿಗೂ ನಮ್ಮದಕ್ಕೂ ವ್ಯತ್ಯಾಸವಿದೆ. ಹೀಗೆ ಏರುಪೇರಾಗಿರತಕ್ಕ ಎರಡು ಭಾಗಗಳನ್ನು ಒಟ್ಟುಗೂಡಿಸುತ್ತೇವೆಂದರೆ ಹತ್ತಾರು ವರ್ಷಗಳಾದರೂ ಈ ಏರುಪೇರನ್ನು ಸಮತೂಗಿಸಿ ಒಂದು ಮಟ್ಟಕ್ಕೆ ತರುವುದಕ್ಕೆ ನಿಧಾನವಾಗುತ್ತದೆ, ಕಷ್ಟವಾಗುತ್ತದೆ. ಅದುವರೆಗೂ ಇಲ್ಲಿ ನಮಗೆ ತೊಂದರೆಯಾಗುತ್ತದೆಂಬ ಉದ್ದೇಶ ಒಂದು.

ಮತ್ತೊಂದು ವಿಷಯ. ನಮ್ಮಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಇಲ್ಲಿ ನಡೆಯುತ್ತಿರುವಂತೆ ಅಭಿವೃದ್ಧಿ ಕಾರ್ಯಗಳು ಅಲ್ಲಿ ನಡೆಯುತ್ತಿಲ್ಲ. ಬೇರೆ ಪ್ರಾಂತಗಳು ಬಂದು ಸೇರಿದಮೇಲೆ ಇಲ್ಲಿನ ಮೇಲ್ಮೆಗಾಗಿಯೇ ಕೆಲಸ ನಡೆಯುವುದಿಲ್ಲ. ಬೇರೊಂದು ಸಂದರ್ಭದಲ್ಲಿ ಮಾನ್ಯ ನಾಯಕರೇ ಹೇಳಿದ ಹಾಗೆ, ಈಗಾಗಲೇ ಆಗಿರತಕ್ಕ ಅಭಿವೃದ್ಧಿಯನ್ನು ಕಿತ್ತುಹಾಕುವುದಕ್ಕಾಗುವುದಿಲ್ಲ. ಮುಂದೆ ಇದೇ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸುವುದಕ್ಕೆ ತೊಡಕಾಗುತ್ತದೆ. ಇದೂ ಒಂದು ಕಾರಣ. ಇದಕ್ಕಿಂತಲೂ ಮುಖ್ಯವಾದ ಮತ್ತು ಪ್ರಬಲವಾದ ಕಾರಣವೇನೆಂದರೆ, ಕನ್ನಡ ಮಾತನಾಡುವವರು ಮಾತ್ರ ನಮ್ಮವರಲ್ಲ; ಅಂತೆಯೇ ತೆಲುಗು ಮತ್ತು ಇತರ ಭಾಷೆಗಳನ್ನು ಆಡುವವರೂ ನಮ್ಮವರೇ. ಹೀಗಿರಲು ಈ ಭಾಗ ನಮಗೇ ಬರಬೇಕು ಆ ಭಾಗ ಬರಬೇಕು ಎಂದು ಕಾದಾಡತಕ್ಕದ್ದು ಯೋಗ್ಯವಾದದ್ದಲ್ಲ. ಹೀಗೆ ಮಾಡುವುದರಿಂದ ಜಗಳವಾಗುತ್ತದೆ,ಹೊಟ್ಟೆಕಿಚ್ಚು ಬರುತ್ತದೆ, ಜಗಳಗಳಾದದ್ದನ್ನು ಕೂಡ ನಾವು ನೋಡಿದ್ದೇವೆ. ನೆರೆಹೊರೆಯ ರಾಷ್ಟ್ರಗಳಲ್ಲಿ ಜಗಳವಾಯಿತು, ಎಷ್ಟೋ ಜನ ಪ್ರಾಣ ನೀಗಬೇಕಾಗಿ ಬಂತು. ಇದನ್ನೆಲ್ಲಾ ನಾನು ವಿವರಿಸಬೇಕಾಗಿಲ್ಲ. ಬೊಂಬಾಯಿ, ಒರಿಸ್ಸ, ಮಹಾರಾಷ್ಟ್ರ ಮತ್ತು ಕನ್ನಡನಾಡಿನ ಗಡಿಪ್ರದೇಶಗಳಲ್ಲಿ ಆದಂಥ ಗಲಭೆಗಳನ್ನು ನಾವು ಮರೆತಿಲ್ಲ. ಇವೊತ್ತು ಕೂಡ ಬೊಂಬಾಯಿಯಲ್ಲಿ ಸ್ತ್ರೀಯರ ಮಾನಭಂಗವಾಯಿತು ಎಂದು ಕೇಳಿದೆ. ಬೊಂಬಾಯಿ ಮೇಯರರು ಈ ಸಂಬಂಧವಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಹೀಗೆ ಏನೇನೋ ಅನಾಹುತಗಳಾದವು. ಇಂಥವು ನಡೆಯುವುದಕ್ಕೆ ಅವಕಾಶ ಕೊಡಬಾರದ ಎನ್ನುವ ದೃಷ್ಟಿಯಿಂದ, ದೇಶದಲ್ಲಿ ಒಗ್ಗಟ್ಟು ಇರಬೇಕು, ಪ್ರೀತಿ ವಿಶ್ವಾಸಗಳನ್ನು ಗಳಿಸಬೇಕು ಎಂಬ ಕಾರಣದಿಂದ, ನಾವೆಲ್ಲ ಏಕಚಕ್ರಾಧಿಪತ್ಯಕ್ಕೆ ಒಳಪಟ್ಟಿದ್ದೇವೆ. ಆ ಸೇತು ಹಿಮಾಚಲ ಪರ್ಯಂತ ಏರ್ಪಾಡಾಗಿರತಕ್ಕ ಏಕ ಚಕ್ರಾಧಿಪತ್ಯಕ್ಕೆ ಪುನಃ ಧಕ್ಕೆ ಬಾರದ ರೀತಿಯಲ್ಲಿ ನಾವು ನಡೆಯಬೇಕು. ಹೀಗೆ ದೇಶದ ಹಿತದೃಷ್ಟಿಯಿಂದ ಹೇಳಿದಂಥ ಉದ್ದೇಶವನ್ನು ಬೇರೆ ಒಂದು ಉಪಮಾನ ಉಪಮೇಯ ಕೊಟ್ಟು ಅದರ ತೂಕವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನಪಡತಕ್ಕದ್ದು ಸಾಧುವಾದದ್ದಲ್ಲವೆಂದು ಮಾತ್ರ ಹೇಳುತ್ತೇನೆ.

ಹೀಗಿದ್ದೂ ದಕ್ಷಿಣ ಪ್ರದೇಶದ ಪ್ರಸ್ತಾಪ ಬಂದಾಗ ಅದಕ್ಕೆ ಬೆಂಬಲ ಕೊಟ್ಟವರ ಪೈಕಿ ನಾನೂ ಒಬ್ಬ. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ವಾದಿಸಿದವರನ್ನು ಹಿಂದೆ ಅನೇಕ ಸಾರಿ ಅವರಲ್ಲಿರುವುದು ಸಂಕುಚಿತ ಮನೋಭಾವವೆಂದೂ, ಅಸಂಸ್ಕೃತಿ ಮನೋಭಾವವೆಂದೂ, ಅವರ ಮನಸ್ಸು ವಿಶಾಲವಾಗಬೇಕೆಂದೂ, ಅವರಿಗೆ ವಿಶಾಲದೃಷ್ಟಿ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಇರಬೇಕೆಂದೂ, ಹೇಳುತ್ತಿದ್ದರು. ರಾಜ್ಯ ವಿಸ್ತರಣೆಗೆ ಯುದ್ಧ ಮಾಡುತ್ತಾರೆ, ಕಾದಾಡುತ್ತಾರೆ, ಅಂಥದರಲ್ಲಿ ತಾನಾಗಿ ತಾನು ಬಂದರೆ, ಮನೆಗೆ ಬಂದ ಲಕ್ಷ್ಮಿಯನ್ನು ಎಡಗಾಲಿನಿಂದ ಒದ್ದು ಓಡಿಸಿದರು ಎಂಬಂತೆ ಇವರು ಬೇಡವೆನ್ನುತ್ತಾರೆ—ಎಂದು ಅನೇಕ ವಿಧವಾಗಿ ಆಕ್ಷೇಪಣೆ ಮಾಡಿದ್ದಾರೆ. ಗಡಿನಾಡು ಭಾಗಗಳಾಗಿ ಒಬ್ಬರಿಗೊಬ್ಬರಿಗೆ ಜಗಳ ಬೇಡ, ಹೊಡೆದಾಟಬೇಡ. ಗಡಿನಾಡು ವ್ಯಾಜ್ಯಗಳನ್ನು ಬಗೆ ಹರಿಸಲು ಯಾವ ಒಂದು ಸಮಿತಿಯೂ ಬೇಕಾಗಿಲ್ಲ. ನಾವೆಲ್ಲರೂ ಒಂದಾಗೋಣ. ಇದರಿಂದ ಆಗತಕ್ಕ ಅನುಕೂಲ ಪ್ರತಿಕೂಲಗಳನ್ನು ತೂಕ ಹಾಕಿ ನೋಡೋಣ. ಆಗ ಯಾವ ವ್ಯಾಜ್ಯವೂ ಇರುವುದಿಲ್ಲ. ಗಡಿಯ ವಿಚಾರದಲ್ಲಿ, ಈ ಊರು ಬೇಕು, ಆ ಊರು ಬೇಕು ಎಂಬ ವ್ಯಾಜ್ಯವೇ ಇರುವುದಿಲ್ಲ. ಕಳೆದ ವಾರವೋ ಏನೋ ಶ್ರೀ ನಾಗಯ್ಯರೆಡ್ಡಿಯವರು ಪಾಲಾರ್ ನದಿಯ ನೀರಿನ ವಿಷಯದಲ್ಲಿ ಪ್ರಸ್ತಾಪ ಮಾಡುತ್ತ ಆಂಧ್ರ ಸರ್ಕಾರದವರು ಎರಡು ಕಡೆ ಅಣೆ ಕಟ್ಟಿ ಸಿದ್ಧಾರೆ, ನಾವೂ ಹಾಗೆಯೇ ಮಾಡಬೇಕು, ''ನೀನೂ ದಡ್ಡ ನಾನೂ ದಡ್ಡ'' ಎಂದು ಹೇಳುವ ಹಾಗೆ ವ್ಯಾಜ್ಯ ವಾಡಬೇಕೆಂಬ ಧೋರಣೆಯಲ್ಲಿ ಮಾತನಾಡಿದರು. ಗಡಿನಾಡಿನ ವಾಜ್ಯ, ನೀರಿನ ವಾಜ್ಯ ಹೀಗಿದೆ. ಮತ್ತು ವಿದ್ಯುಚ್ಛಕ್ತಿ ತಯಾರು ಮಾಡಬೇಕಾದರೆ "ನಮ್ಮ ದೇಶದಲ್ಲಿ ಹುಟ್ಟಿದ ನದಿ ನಿಮ್ಮ ದೇಶದಲ್ಲಿ ಬಂದು ಧುಮುಕುತ್ತದೆ, ಅದರಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿಕೊಳ್ಳಲು ನಮಗೂ ಹಕ್ಕಿದೆ' ಎಂದು ಹೀಗೆಯೇ ಅನೇಕ ವಿಚಾರಗಳಲ್ಲಿ ಒಂದು ಸಂಸ್ಥಾನಕ್ಕೂ ಮತ್ತೊಂದು ಸಂಸ್ಥಾನಕ್ಕೂ ವ್ಯಾಜ್ಯಗಳು ಪ್ರಾರಂಭವಾಗುವುದಕ್ಕೆ ಅವಕಾಶಗಳ್ ದೊಡ್ಡದಾದ ಒಂದು ಪ್ರಾಂತವಾದರೆ ಇರುವುದಿಲ್ಲ. ಮತ್ತು ದಕ್ಷಿಣ ಪ್ರದೇಶವೆಂಬ ಒಂದು ದೊಡ್ಡ ಪ್ರಾಂತವಾದರೆ, ಅಲ್ಲಿ ಒಂದೇ ಭಾಷೆ ಆಡತಕ್ಕ ಜನಗಳಿಲ್ಲದೆ ಇರುವುದರಿಂದ Composite State ಎಂದು ಏನು ಹೇಳುತ್ತೀವೆಯೋ ಅದು ಒದಗಿ, ನೀರಿನ ಅನುಕೂಲ, ವಿದ್ಯುಚ್ಛಕ್ತಿಯ ಅನುಕೂಲ ಇತ್ಯಾದಿಗಳನ್ನು ಒದಗಿಸಿಕೊಳ್ಳಲು ಉಂಟಾಗಬಹುದಾದ ಕಲಹಗಳು ಇವುಗಳೆಲ್ಲವೂ ತಪ್ಪಿ ಹೋಗುತ್ತವೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ದಕ್ಷಿಣ ಭಾರತ ಬಲವಾಗಿದ್ದರೆ, ಬಲಯುತವಾಗಿದ್ದರೆ, ಅದು ಇಂಡಿಯಾದೇಶದ, ಇಡೀ ಭಾರತದ ದೃಷ್ಟಿಯಿಂದ, ರಕ್ಷಣೆಯ ದೃಷ್ಟಿಯಿಂದ ಬಹಳ ಒಳ್ಳೆಯದೆಂದು ನನ್ನ ಅಭಿಪ್ರಾಯ. ಕಾರಣವೇನೆಂದರೆ, ಹಿಂದಿನ ಚರಿತ್ರೆಯನ್ನು ನಾವು ಸ್ವಲ್ಪ ಗಮನದಲ್ಲಿ ತಂದುಕೊಂಡರೆ, ಭಾರತ ದೇಶಕ್ಕೆ ಆಕ್ರಮಣ ನಡೆದಿದ್ದು ದಕ್ಷಿಣ ದೇಶದ ಮುಖಾಂತರ. ಉತ್ತರ ದೇಶದಲ್ಲಿ ಅಭೇದ್ಯವಾದ ಹಿಮಾಲಯ ಪರ್ವತ ಶ್ರೇಣಿಗಳಿರುವುದರಿಂದ ಅವುಗಳನ್ನು ದಾಟಿ ಬರುವುದಕ್ಕೆ ಆ ಕಾಲದಲ್ಲಿ ಬಹಳ ಕಷ್ಟವಾಗಿತ್ತು. ಆದುದರಿಂದ ಇಂಡಿಯಾ ದೇಶಕ್ಕೆ ಬರಲು ಇದ್ದ ಮಾರ್ಗವೆಂದರೆ ಸಮುದ್ರ ಮಾರ್ಗವಾಗಿ, ದಕ್ಷಿಣ ದೇಶವನ್ನು ಹೊಕ್ಕು ಬರಬೇಕಾಗಿತ್ತು. ಈಗ ಯಾವ ಮಾರ್ಗದಲ್ಲಿ ಬೇಕಾದರೂ ಬರುವುದಕ್ಕೆ ಬೇಕಾದ ಆಧುನಿಕ ಸೌಕರ್ಯಗಳು ಇರುತ್ತವೆ. ಹೇಗಾದರೂ ಇರಲಿ, ದಕ್ಷಿಣ ದೇಶದಲ್ಲಿ ಒಂದು ದೊಡ್ಡ ಸಂಸ್ಥಾನ, ಶಕ್ತಿಯುತವಾದ ರಾಜ್ಯ ಏರ್ಪಡುವುದಾದರೆ, ದಕ್ಷಿಣ ದೇಶದಲ್ಲಿ ನಾಲ್ಕಾರು ಬಂದರುಗಳೂ ಇರುವುದರಿಂದ ರಕ್ಷಣೆಗೆ ಹೆಚ್ಚು ನೌಕಾಬಲವಿದ್ದು ದೇಶದ ರಕ್ಷಣೆಯ ಜವಾಬ್ದಾರಿಯನ್ನು ಹೆಚ್ಚಿನ ರೀತಿಯಲ್ಲಿ ಹೊರುವುದಕ್ಕೆ ...ಯುಂಟಾಗುತ್ತದೆ. ಆದುದರಿಂದ ದಕ್ಷಿಣ ದೇಶದಲ್ಲಿ ಸಣ್ಣಸಣ್ಣ ಸಂಸ್ಥಾನಗಳು ಮೂರು ನಾಲ್ಕು ಇದ್ದರೆ, ಆ ಸಂಸ್ಥಾನಗಳ ಯೋಗ್ಯತೆಗೆ ತಕ್ಕ ಸಣ್ಣ ನೌಕಾಬಲವನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಶಕ್ತಿ ಮೀರಿದಂಥ ನೌಕಾಬಲವನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದು ದರಿಂದ ಶಕ್ತಿಯುತವಾದ, ದೊಡ್ಡದಾದ, ವಿಸ್ತಾರವಾದ ದಕ್ಷಿಣ ಭಾರತ ಸರ್ಕಾರ ಏರ್ಪಡುವುದಾದರೆ ಈ ಕಾರ್ಯವನ್ನು ನಾವು ಸುಲಭವಾಗಿ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಅದರ ಜೊತೆಗೆ ಕೋಟ್ಯಂತರ ರೂಪಾಯಿಗಳ ಅಭಿವೃದ್ಧಿಕಾರ್ಯಗಳನ್ನು ಮಾಡಬೇಕಾದರೂ, ಎರಡು ಮೂರು ಸಂಸ್ಥಾನಗಳಿಗೆ ಅನ್ವಯಿಸತಕ್ಕ ಯೋಜನೆಗಳನ್ನು ಕೈಗೊಳ್ಳಬೇಕಾದಲ್ಲಿ ಬಹಳ ಸುಲಭವಾಗುತ್ತದೆ ಎಂಬ ದೃಷ್ಟಿಯಿಂದಲೂ ಸಹ ಒಂದೇ ಸಂಸ್ಥಾನವಿದ್ದರೆ ಒಳ್ಳೆಯದು ಎಂದು ಆ ಸೂಚನೆಯನ್ನು ಸ್ವಾಗತ ಮಾಡಿದವರ ಪೈಕಿ ನಾನೂ ಒಬ್ಬ.

ಕೆಲವು ಸ್ನೇಹಿತರೂ ಮತ್ತು ಪತ್ರಿಕೆಗಳೂ ಟೀಕೆ ಮಾಡುತ್ತ ಇದೆಲ್ಲ ಒಂದು ಅಸಂಬದ್ಧ ಪ್ರಲಾಪ, ನೈಸರ್ಗಿಕವಾಗಿ, ಸ್ವಾಭಾವಿಕವಾಗಿ ಈ ರೀತಿ ಮಾಡುವುದು ಸೂಕ್ತವಲ್ಲವೆಂಬುದಾಗಿಯೂ, ತಮಿಳರಿಗೂ ನಮಗೂ ಏನು ಸಂಬಂಧ ಮಲೆಯಾಳದವರಿಗೂ ನಮಗೂ ಏನು ಸಂಬಂಧ ಎಂದು ಮುಂತಾಗಿ ವಾದಮಾಡಿದ್ದಾರೆ. ನಾನೂ ಸಹ ಬರೀ ಕನ್ನಡ ಮಾತನಾಡುವವರೆಲ್ಲ ಒಂದೇ ತೆರನಾಗಿದ್ದಾರೆಯೇ ಎಂದು ಯೋಚಿಸಿದೆ. ಉತ್ತರ ಕರ್ಣಾಟಕದವರಿಗೂ ನಮಗೂ ಬಹಳ ವಿಧಗಳಲ್ಲಿ ವ್ಯತ್ಯಾಸವಿದೆ. ಅದನ್ನೆಲ್ಲ ನಾನು ಹಿಂದೆಯೇ ಹೇಳಿದ್ದೇನೆ. ಉದಾಹರಣೆಗೆ, ನಮ್ಮಲ್ಲಿ ''ಒಂದೂವರೆ ಘಂಟೆ ಆಯಿತು'' ಎಂದು ಹೇಳಿದರೆ ಉತ್ತರ ಕರ್ಣಾಟಕದವರು 'ಡೇಡ್ ಘಂಟೆ ಬಡೀತು' ಎಂದೂ, ಆಂಧ್ರರು 'ಒಗಟಿನ್ನರ ಘಂಟ ಆಯ' ಎಂದೂ, ತಮಿಳರು 'ಒಣ್ಣರಮಣಿ ಆಚಿ' ಎಂದೂ ಹೇಳುತ್ತಾರೆ. ಇದರಲ್ಲಿ ಹೆಚ್ಚು ಸ್ವಾಭಾವಿಕವಾಗಿರುವುದು ಯಾವುದೆಂದು ತಾವುಗಳೇ ನೋಡಬಹುದು. ಆದುದರಿಂದ ಇವೆಲ್ಲ ಸುಮ್ಮನೆ ವಾದಕ್ಕೆ ವಾದವನ್ನು ಹೂಡಿಕೊಂಡು ಹೋಗುವ ಮಾತುಗಳೇ ಹೊರತು ದಕ್ಷಿಣ ಪ್ರದೇಶರಚನೆಯಲ್ಲಿ ಅಸ್ವಾಭಾವಿಕವಾದದ್ದು ಯಾವುದೂ ಕಾಣುವುದಿಲ್ಲ. ದಕ್ಷಿಣ ಪ್ರದೇಶವನ್ನು ಒಂದು ಸಂಸ್ಥಾನವಾಗಿ ಮಾಡಬಯಸುವುದಾದರೆ ದೇಶದ ಹಿತ ದೃಷ್ಟಿಯಿಂದ, ರಕ್ಷಣೆ ದೃಷ್ಟಿಯಿಂದ, ಒಗ್ಗಟ್ಟಿನ ದೃಷ್ಟಿಯಿಂದ, ವ್ಯಾಜ್ಯ, ಜಗಳ ಮುಂತಾದುವು ಇಲ್ಲದಿರುವಂತೆ ಮಾಡುವ ದೃಷ್ಟಿಯಿಂದ, ನಾವು ಸರ್ಕಾರವನ್ನು ಸರಿಯಾಗಿ ನಡೆಸಬಹುದು. ಇದಕ್ಕಿಂತ ಇನ್ನೊಂದು ವಿಷಯವನ್ನು ಧೈರ್ಯವಾಗಿ ಹೇಳಬೇಕೆನ್ನಿಸುತ್ತದೆ. ನಮ್ಮ ಸಭಾನಾಯಕರು ಈರೀತಿ ಹೇಳಿದ್ದಾರೆ : ದಕ್ಷಿಣ ದೇಶವನ್ನು ಕೇಂದ್ರ ಸರ್ಕಾರದವರು ಉದಾಸೀನ ಮಾಡುತ್ತಿದ್ದಾರೆ, ದಕ್ಷಿಣದೇಶ ಅನೇಕ ವಿಷಯಗಳಲ್ಲಿ ಅಭಿವೃದ್ಧಿಗೆ ಬಂದಿಲ್ಲ ಎಂದು ಅನೇಕ ಸಾರಿ ಹೇಳಿದ್ದಾರೆ. ಇದಕ್ಕೆ ಕಾರಣ ಪಾರ್ಲಿಮೆಂಟಿನಲ್ಲಿ ಉತ್ತರ ದೇಶದ ಪ್ರತಿನಿಧಿಗಳು ಹೆಚ್ಚಾಗಿದ್ದಾರೆ. ದಕ್ಷಿಣ ದೇಶದ ಪ್ರತಿನಿಧಿಗಳು ಕೇವಲ 10-15 ಜನ ಮಾತ್ರ ಲೋಕ ಸಭೆಯಲ್ಲಿದ್ದಾರೆ. ದಕ್ಷಿಣ ದೇಶದವರು ಒಟ್ಟಾಗಿ ಸೇರುವುದಕ್ಕಾಗಲಿ ಅವರು ಒಂದು ಸಂಸ್ಥಾನದವರೆಂದು ಅನ್ನಿಸಿಕೊಳ್ಳುವುದಕ್ಕಾಗಲಿ ಅವಕಾಶವಿಲ್ಲ. ದಕ್ಷಿಣ ದೇಶ ಒಂದು ಪ್ರಬಲವಾದ ಗುಂಪನ್ನು ಕಟ್ಟಿ ಅದಕ್ಕೆ ಬೇಕಾದ ಅನುಕೂಲ, ಸೌಕರ್ಯ ಮುಂತಾದುವಕ್ಕಾಗಿ ಪಾರ್ಲಿಮೆಂಟಿನಲ್ಲಿ ಹೊಡೆದಾಡಲು ಪ್ರತಿನಿಧಿಗಳ ಸಂಖ್ಯೆ ಕಡಮೆಯಿರುವುದರಿಂದ ಸಾಧ್ಯವಿಲ್ಲವಾಗಿದೆ. ಆದ್ದರಿಂದ ಈಗ ದಕ್ಷಿಣ

ದೇಶ ಒಂದು ಸಂಸ್ಥಾನವಾಗಿ ಒಂದೇ ಸರ್ಕಾರ ರಚನೆಯಾದರೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯ ಹೆಚ್ಚಿ ಅದರ ಶಕ್ತಿ ಬೆಳೆಯುತ್ತದೆ. ಉತ್ತರದೇಶ ಇದುವರೆಗೆ ಉದಾಸೀನ ಮಾಡಿರುವಂತೆ ಮುಂದೆ ಮಾಡಲು ಸಾಧ್ಯವಿಲ್ಲದಂತಾಗುತ್ತದೆ. ಆದ್ದರಿಂದ ದಕ್ಷಿಣ ಪ್ರದೇಶವಾಗಬೇಕಾದದ್ದು ಸೂಕ್ತ ಎಂದು ಅದನ್ನು ಸ್ವಾಗತಿಸುತ್ತೇನೆ.

ಈ ದಿವಸ ನನಗೆ ತಿಳಿದಿರುವಮಟ್ಟಿಗೆ ನಿಜವೆಂದು ಹೇಳಲಾರೆ. ಹಿಂದುಗಡೆ ಮಾತನಾಡಿಕೊಳ್ಳುವ ಮಾತನ್ನು ಸ್ವಲ್ಪಮಟ್ಟಿಗಾದರೂ ನಂಬುವುದಕ್ಕೆ ಅವಕಾಶವಿದೆ—ಉತ್ತರ ಪ್ರದೇಶದಲ್ಲಿ $6\frac{1}{2}$ ಕೋಟಿ ಜನಸಂಖ್ಯೆಯಿದೆ. ಆದ್ದರಿಂದ ಅದು ಪ್ರಬಲವಾದ ಸಂಸ್ಥಾನವಾಗಿದೆ. ಹಾಗೆಯೇ ದಕ್ಷಿಣ ಪ್ರದೇಶ ಒಂದು ಸಂಸ್ಥಾನವಾದರೆ ಅದರ ಜನಸಂಖ್ಯೆ $10\frac{1}{2}$ ಕೋಟಿ ಜನ ಆಗಿ $6\frac{1}{2}$ ಕೋಟಿಗಳ ಮೇಲೆ ಹೋಗಲು ಅವಕಾಶವಿದೆ. ಆದ್ದರಿಂದ ದಕ್ಷಿಣ ಪ್ರದೇಶಕ್ಕೆ ಅವಕಾಶ ಕೊಡದೆ ಎರಡು ಭಾಷೆಯಿರುವ ಒಂದೊಂದು ರಾಜ್ಯ ಮಾಡಬೇಕು. "ಮದರಾಸಿನಲ್ಲಿ $3\frac{1}{2}$ ಕೋಟಿ ಜನಸಂಖ್ಯೆಯಿದೆ. ಅದು ಹಾಗೇ ಇರಲಿ" ಮಲೆಯಾಳಿಗಳು ಮತ್ತು ಕನ್ನಡ ಮಾತನಾಡುವವರು $3\frac{1}{2}$ ಕೋಟಿ ಆಗುತ್ತಾರೆ, ಅವರು ಒಂದು ಸಂಸ್ಥಾನವಾಗಲಿ ಆಂಧ್ರ ಮತ್ತು ತೆಲಂಗಾಣದ ಜನರು ಸುಮಾರು $3\frac{1}{2}$ ಕೋಟಿ ಆಗುತ್ತಾರೆ. ಆದುದರಿಂದ ಹೆಚ್ಚು ಕಡಮೆ $3\frac{1}{2}$ ಕೋಟಿ ಜನರಿರುವ 3 ಸಂಸ್ಥಾನಗಳನ್ನು ದಕ್ಷಿಣದಲ್ಲಿ ಏರ್ಪಡಿಸುವುದು ಚೆನ್ನಾಗಿದೆ" ಎಂದು ಉತ್ತರದೇಶದ ಕೆಲವು ಮಹನೀಯರು ಒಂದು ಪ್ರಚಾರ ಕಾರ್ಯ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆಂದ ಕೇಳಿದ್ದೇನೆ. ಅವರ ಮಾತು ನಡೆಯುವ ಕಡೆ ಪ್ರತಿಭೆಯನ್ನು ಬೀರುತ್ತಿದ್ದಾರಂತೆ. ಇದರ ಉದ್ದೇಶ ದಕ್ಷಿಣ ಭಾರತದ ಜನರು ಒಗ್ಗಟ್ಟಾಗಿ ಉತ್ತರದೇಶದ ಜನರನ್ನಾಗಲಿ ಅಥವಾ ಪ್ರತಿನಿಧಿಗಳನ್ನಾಗಲಿ ಮೀರಿಸುವುದಕ್ಕೆ ಅವಕಾಶವಿಲ್ಲದಿರಲಿ ಎಂಬುದೇ ಆಗಿದೆ. ಎಲ್ಲಿ ದಕ್ಷಿಣ ದೇಶದವರು ಒಗ್ಗಟ್ಟಾಗಿ ಉತ್ತರದೇಶದವರನ್ನು ಹತೋಟಿಯಲ್ಲಿಡುತ್ತಾರೋ ಎಂಬ ಭಯದಿಂದ ಈ ರೀತಿ ಮಾಡುತ್ತಿದ್ದಾರೆಂದು ಹೇಳಬೇಕಾಗಿದೆ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ದಕ್ಷಿಣ ಪ್ರದೇಶವೆಲ್ಲಾ ಒಂದಾಗಿ ಒಂದು ಸರ್ಕಾರವಾಗಿ ಏರ್ಪಾಡಾಗತಕ್ಕದ್ದು ಬಹಳ ಅಗತ್ಯವಾಗಿದೆ.

ಮೊನ್ನೆ ಸಭಾನಾಯಕರು ದಕ್ಷಿಣ ಪ್ರದೇಶದ ಮಾತು one way traffic ಒಮ್ಮುಖದ ಮಾರ್ಗ ಇದ್ದ ಹಾಗಿದೆ, ಆಂಧ್ರದವರೇನೂ ಅಭಿಪ್ರಾಯ ಸೂಚಿಸಿಲ್ಲ, ಮದರಾಸಿನವರು ಇಷ್ಟಪಟ್ಟಿಲ್ಲ, ಕೇರಳದಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ, ನಾವು ಮಾತ್ರ ಮಾತಾಡಿದರೆ ಏನು ಪ್ರಯೋಜನ ಎಂದು ಹೇಳಿದರು. ವಾದಕ್ಕೆ ಹಾಗೆ ಹೇಳುವುದು ಸರಿಯಾಗಿ ಕಾಣಬಹುದು. ದೇಶದ ಹಿತ, ಒಗ್ಗಟ್ಟು ಇವನ್ನು ಕಾಪಾಡಬೇಕಾದರೆ, ನಿಜವಾಗಿಯೂ ಒಳ್ಳೆಯದಾಗಬೇಕೆಂದು ಆಶಿಸುವುದಾದರೆ, ಇಂಡಿಯಾ ಸರ್ಕಾರದವರು ಇಡೀ ದಕ್ಷಿಣ ದೇಶದಹಿತರಕ್ಷಣೆ ಮಾಡಲು ಒತ್ತಾಯವಾಗಿಯಾದರೂ ಅದನ್ನೇ ಒಂದು ಪ್ರಾಂತ ಮಾಡಬೇಕಾದದ್ದು ಅಗತ್ಯ.

ಮೈಸೂರಿನವರೆಲ್ಲರೂ ಒಮ್ಮನಸ್ಸಿನಿಂದ ಸರ್ವತೋಮುಖವಾಗಿ ಉತ್ತರ ಕರ್ಣಾಟಕ, ಮೈಸೂರು ಎಲ್ಲ ಸೇರಿ ಒಂದು ರಾಜ್ಯವಾಗಬೇಕೆಂದು ಹೇಳಿದರು, ಎಂದು ಸಭಾನಾಯಕರು ಸೂಚಿಸಿದರು. ಆದರೆ ಅದಕ್ಕೆ ಪ್ರಬಲವಾದ ವಿರೋಧವಿತ್ತು. ಬಹುಮತದ ಅಭಿಪ್ರಾಯ ಹಾಗಿರಲಿಲ್ಲ. ಬಲವಂತ ಮಾಘಸ್ನಾನಕ್ಕೆ ಒಪ್ಪಿದರು. ಹೆದರಿಸಿ ಸಂಸ್ಥೆಯ ಶಿಸ್ತನ್ನು ನಮ್ಮಮೇಲೆ ಹೇರಿ ಏನಾದರೂ ಮಾತನಾಡಿಕೊಳ್ಳಿ, ಕೈಮಾತ್ರ ಎತ್ತಬೇಡಿ, ಎಂದು ಹೇಳಿ, ಸಂಸ್ಥೆಯ ಶಕ್ತಿ ಕುಂದದ ಹಾಗೆ ನೋಡಿಕೊಳ್ಳಬೇಕಾದದ್ದು ಕರ್ತವ್ಯವೆಂದು ನಿರ್ಬಂಧ ಹಾಕಿ, ಪಕ್ಷದವರಿಗೆ ಸ್ವಾತಂತ್ರ್ಯವಿಲ್ಲದಂತೆ ಮಾಡಿ, ಒಪ್ಪಿಗೆ ಪಡೆದು, ಬಹುಮತದ ಒಪ್ಪಿಗೆ ದೊರೆಯಿತೆಂಬುದು ಸರ್ವವಿದಿತವಾದ ವಿಷಯವಾಗಿದೆ. ಹೀಗಿದ್ದರೂ ಯುನಾನಿಮಸ್ಸಾಗಿ ಒಪ್ಪಿಕೊಂಡಿದ್ದೇವೆಂದು ನಾಯಕರು ಹೇಳುತ್ತಾರೆ. ಅದು ನಿಜವಲ್ಲವೆಂದು ಹೇಳಬೇಕಾಗಿದೆ. ಶ್ರೀ ವೀರಣ್ಣಗೌಡರಿಗೆ ಯಾವಾಗಲೂ ನಮ್ಮಮೇಲೆ ಖಾರ ಎಂದು ಸಭಾನಾಯಕರು ಹೇಳುತ್ತಾರೆ. ಆದ್ದರಿಂದ ಅವರು ನಿಜವಲ್ಲದ ವಿಚಾರವನ್ನು ಒತ್ತಿ ಒತ್ತಿ ಹೇಳುತ್ತಿದ್ದಾಗ ನಾನು ಸುಮ್ಮನಿದ್ದೆ. ಯುನಾನಿಮಸ್ಸಾಗಿ ಅಭಿಪ್ರಾಯ ದೊರೆತಿದೆ, ಇದರಮೇಲೆ ಮಾತನಾಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಇದು ಬಲವಂತ ಮಾಘಸ್ನಾನ. ಕಾಂಗ್ರೆಸ್ ಶಿಸ್ತನ್ನು ನಮ್ಮಮೇಲೆ ಹೇರದಿದ್ದರೆ ಫಲಿತಾಂಶ ಬೇರೆಯಾಗುತ್ತಿತ್ತು. ಈಗ ಸ್ವಲ್ಪ ಸಡಿಲ ಬಿಟ್ಟಿದ್ದಾರೆ. ಈ ಮಸೂದೆಗೆ ತಿದ್ದುಪಡಿಗಳನ್ನು ಪಕ್ಷದ ನಾಯಕರನ್ನು ಕೇಳಿ ಕಳುಹಿಸಬಹುದೆಂದು ಹೇಳಿದ್ದಾರೆ. ಓಟು ಮಾಡುವುದಿಲ್ಲವೆಂದು ಹೇಳಿದರೆ ಸಂಸ್ಥೆಯ ಶಿಸ್ತು, ನಿಯಮ ಪಾಲಿಸಬೇಕು ಎಂದಿರುವವರಿಗೆ ಕಷ್ಟ. ಅದನ್ನು ಅವರಿಗೇ ಬಿಡೋಣ. ದೇಶದ ಹಿತರಕ್ಷಣೆ, ಅಭಿವೃದ್ಧಿ ಬಹು ಮುಖ್ಯವಾದುದು. ಅದನ್ನು ಸಾಧಿಸಬೇಕಾದರೆ ದಕ್ಷಿಣ ಪ್ರದೇಶದ ಸರ್ಕಾರ ಏರ್ಪಾಡಾಗುವುದು ಅನುಕೂಲವೆಂದು ಮನಸ್ಸಿಗೆ ತೋರಿದರೆ ಯಾರು ಏನೇ ಹೇಳಲಿ ಆ ಕಾರ್ಯವನ್ನು ಸಾಧಿಸಬೇಕಾದದ್ದು ಕರ್ತವ್ಯ. ಅದನ್ನು ಬಿಟ್ಟು ಏನೋ ಹೇಳಿದರೆ ಪ್ರಯೋಜನವಿಲ್ಲ, ಈ ದಿವಸ ಕೇರಳದಲ್ಲಿ ಲೆಜಿಸ್ಲೇಚರ್ ಇಲ್ಲದಿರಬಹುದು. ಆರು ತಿಂಗಳಮೇಲೆ ಆಗುತ್ತದೆ, ದಕ್ಷಿಣ ಪ್ರದೇಶ ರಚನೆಯನ್ನು ಮೊದಲು ಸ್ವಾಗತಿಸಿ ಅನಂತರ ಇನ್ನೊಂದು ತರಹ ಹೇಳಿದರೆ ಅವಮಾನವಲ್ಲವೆ? ಯಾವ ಸಂಸ್ಥೆ ನಮ್ಮನ್ನು ಆಳುತ್ತಿದೆಯೋ, ಯಾವುದು ಏಕಚಕ್ರಾಧಿಪತ್ಯ ಕಟ್ಟಿ ಅಮೃತಸರದ ಅಧಿವೇಶನದಂಥ ಮಹಾ ಅಧಿವೇಶನದಲ್ಲಿ, ಒಂದು ಅಪೀಲು ಎಂದು ಹೇಳುವ ಹಾಗೆ, ದೇಶದ ಮುಂದೆ ಒಂದು ಅಭಿಪ್ರಾಯ ಸೂಚಿಸಿತೋ ಅದನ್ನು ಆಚರಣೆಗೆ ತರುವುದು ಒಳ್ಳೆಯದು; ಹಾಗೆ ಮಾಡಿ ಎಂದು ಹೇಳಿದಾಗ ಅದಕ್ಕೆ ಬೆಂಬಲ ಕೊಟ್ಟಾಗ, 'ಏನು ಬೇಕಾದರೂ ಹೇಳಿ, ಅದು ಮಾತ್ರ ಬೇಡ' ಎಂದು ಹೇಳುವ ವಾದ ಸರಿಯಲ್ಲ. ಈಗಲೂ ನಾನು ಸರ್ಕಾರದಲ್ಲಿ, ಇಂಡಿಯಾ ಸರ್ಕಾರದಲ್ಲಿ ಮತ್ತು ಸಂಬಂಧಪಟ್ಟ ಅಧಿಕಾರ ವರ್ಗದಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ: ದಕ್ಷಿಣ ಪ್ರದೇಶ ಮಾಡುವುದು ಬಹಳ ಸೂಕ್ತವಾಗಿದೆ, ಬಹಳ ಸುಲಭವಾಗಿಯೂ ಇದೆ, ಅದಕ್ಕೆ ಬೆಂಬಲ ನೀಡಬೇಕು ಎಂದು.

ಈ ಮಸೂದೆಯಲ್ಲಿ ಜೋನಲ್ ಕೌನ್ಸಿಲ್ ಮಾಡಬೇಕೆಂದು ಹೇಳಿದೆ. ಜೋನಲ್ ಕೌನ್ಸಿಲ್ಲಿಗೆ ಕೆಲವು ಅಧಿಕಾರಗಳಿವೆ. ನಾಲ್ಕು ಸಂಸ್ಥಾನಗಳು ಸೇರಿ ದಕ್ಷಿಣ ಪ್ರದೇಶದ ಜೋನಲ್ ಕೌನ್ಸಿಲ್ ಆಗಬೇಕು ಎಂದು ಹೇಳುತ್ತಾರೆ. ಅಂಥ ಕೌನ್ಸಿಲ್ಲಿಗೆ ಆಂಧ್ರ, ತೆಲಂಗಾಣ, ಮದರಾಸು, ಕೇರಳ ಇವೆಲ್ಲಾ ಸೇರಿ, ನಾಲ್ಕು ಮುಖ್ಯಮಂತ್ರಿಗಳು ಮತ್ತು ಬೇರೆ ಮುಖ್ಯಮಂತ್ರಿಗಳು ಮೂರು ಮೂರು ಜನ ಸೇರಿ, ಡೆವಲಪ್‌ಮೆಂಟ್ ಕಮಿಷನರ್, ಚೀಫ್ ಸೆಕ್ರೆಟರಿ ಇಷ್ಟು ಜನ ಮೆಂಬರಾಗಿರಲಿ, ಕೇಂದ್ರ ಸರ್ಕಾರದ ಮಂತ್ರಿಗಳು ಬಹುಶಃ ಸ್ಟೇಟ್ ಮಿನಿಸ್ಟ್ರಿಯವರು ಛೇರ್ಮನ್ ಆಗಿರಲಿ, ಒಂದೊಂದು ಸಂಸ್ಥಾನದ ಮುಖ್ಯಮಂತ್ರಿಗಳು

(ಶ್ರೀ ಎಚ್. ಕೆ. ವೀರಣ್ಣಗೌಡ)

ಒಂದೊಂದು ವರ್ಷ ವೈಸ್-ಚೇರ್ಮನ್ ಆಗಿರಲಿ, ಒಂದೊಂದು ಸಂಸ್ಥಾನದ ಚೀಫ್ ಸೆಕ್ರೆಟರಿ ಒಂದೊಂದು ವರ್ಷ ಈ ಸಂಸ್ಥೆ ಸೆಕ್ರೆಟರಿಯಾಗಿರಲಿ, ಗಡಿವ್ಯಾಜ್ಯ, ನೀರಿನ ಹಂಚಿಕೆ ವ್ಯಾಜ್ಯ ಇದು ಬಂದರೆ ಜೋನಲ್ ಕೌನ್ಸಿಲ್‌ನಲ್ಲಿ ಚರ್ಚೆಮಾಡಿ ಆ ಮೂಲಕ ಕೇಂದ್ರಕ್ಕೆ ಶಿಫಾರ್ಸು ಕಳುಹಿಸಲಿ ಎಂದು ಹೇಳಿದ್ದಾರೆ. ಭಿನ್ನಾಭಿಪ್ರಾಯ ಬಂದರೆ ಚರ್ಚೆಮಾಡಿ ಕೇಂದ್ರಕ್ಕೆ ಶಿಫಾರ್ಸು ಮಾಡಲಿ ಎಂದು ಹೇಳಿದ್ದಾರೆ. ಮೊನ್ನೆ ಸಭಾ ನಾಯಕರು ಮಾತನಾಡಿ ಈ ವಿಚಾರದಲ್ಲಿ ಕೆಲವು ಸಲಹೆಗಳನ್ನು ಕೊಟ್ಟರು. ಶ್ರೀ ಪಟ್ಟಾಭಿರಾಮರ್ ರವರೂ ಕೆಲವು ಸಲಹೆ ಕೊಟ್ಟರು. ಇವೆರಡರಲ್ಲೂ ಅಂಗೀಕಾರಾರ್ಹವಾದ ಅಂಶವಿದೆಯೆಂದು ಒತ್ತಿ ಹೇಳಬೇಕಾಗಿದೆ. ಈಗ ನಮ್ಮ ಸಭಾನಾಯಕರು ಹೇಳಿದ ಅಂಶವನ್ನು ತೆಗೆದುಕೊಳ್ಳೋಣ. ಈದಿವಸವಲ್ಲ ಇನ್ನು ಮೂರು ತಿಂಗಳಾದರೂ 'ಕೋಲಾರ ಬಿಡಿ, ಬಳ್ಳಾರಿ ಮೂರು ತಾಲ್ಲೂಕು ಬಿಡಿ' ಎಂದು ಆಂಧ್ರರು ಹೇಳುವುದು ತಪ್ಪುವುದಿಲ್ಲ ಮತ್ತು ನಾವು "'ಮಡಕಸಿರಾ, ಹೊಸೂರು, ನೀಲಗಿರಿ ಇವನ್ನು ಮೈಸೂರಿಗೆ ಸೇರಿಸಿ' ಎಂದು ಹೇಳುವುದೂ ತಪ್ಪುವುದಿಲ್ಲ. ಇಂಥದಕ್ಕೆ ವ್ಯಾಜ್ಯವಾಗುತ್ತದೆಂದು ನಾಯಕರು ಹೇಳಿದ್ದು ನಿಜ. ಆದರೆ ವ್ಯಾಜ್ಯ ಮಾಡುವುದು ಸರಿಯಲ್ಲ. ಬೌಂಡರಿ ಕಮಿಷನ್ ಆಗುತ್ತದೆ. ಸ್ಪೆಷಲ್ ಟ್ರಿಬ್ಯೂನಲ್ ಸೇರಿಸಿ ಇತ್ಯರ್ಥಮಾಡಬೇಕು. ದಿನಚರಿ ಕಾರ್ಯಕ್ರಮಗಳಿಗೆ ವ್ಯಾಜ್ಯ ಮಾಡುವುದು ಸರಿಯಲ್ಲ, ಶ್ರೀ ಪಟ್ಟಾಭಿರಾಮರ್‌ರವರು ಹೇಳಿದ ಅಭಿಪ್ರಾಯವೂ ಚೆನ್ನಾಗಿದೆ. ಈಗಿರುವ ಸ್ಟೇಟ್ ನಮ್ಮ ಒಳಾಡಳಿತಕ್ಕೆ ಸಂಬಂಧಪಟ್ಟದ್ದಾಗಿ, ಒಬ್ಬ ಮುಖ್ಯಮಂತ್ರಿ, ಒಂದು ಸರ್ಕಾರವನ್ನು ನೇಮಿಸಿ, ನಾವು ಕಾರ್ಯ ಮಾಡುವಾಗ ಪ್ರತಿಯೊಂದು ಸಣ್ಣ ಪುಟ್ಟ ವ್ಯಾಜ್ಯ, ಪಾಲಾರ್‌ನದಿ ನೀರನ್ನು ಹಂಚಿಕೊಳ್ಳುವುದರಲ್ಲ ಉಂಟಾಗುವ ವಿವಾದ ಮುಂತಾದ ಸಂಸ್ಥಾನಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳು ನ್ಯಾಯ ತೀರ್ಮಾನ ಮಾಡುವುದಾದರೆ ನಾವು ಅಲ್ಲಿ ಕುಳಿತಿರುವುದು ನಮ್ಮ ಸ್ಟೇಟಸ್ಸಿಗೆ, ಸಂಸ್ಥಾನದ ಅಂತಸ್ತಿಗೆ ಧಕ್ಕೆ ತರಬಹುದು ಎಂದು ಅನುಮಾನ ಸೂಚಿಸಿದರು. ಅದರಲ್ಲಿ ತಿರುಳಿದೆಯೆಂದು ನನ್ನ ಅಭಿಪ್ರಾಯ. ಆದ್ದರಿಂದ ಜೋನಲ್ ಕೌನ್ಸಿಲ್ ಎಂದು ಸಲಹೆ ಮಾಡಿರುವಾಗ ಒಂದು ಮಾರ್ಪಾಡು ಮಾಡಿದರೆ ನಷ್ಟವಿಲ್ಲ. ಮೊನ್ನೆ ನಾಯಕರು ವಿದ್ಯುಚ್ಛಕ್ತಿ, ರೈಲ್ವೆ ಮತ್ತು ಸಂಚಾರ ಮಾರ್ಗಗಳು, ಭಾಟಾಮಾರ್ಗ, ಪೋಸ್ಟ್ ಇತ್ಯಾದಿ ವಿಚಾರಗಳನ್ನು ಜೋನಲ್ ಕೌನ್ಸಿಲ್‌ನಲ್ಲೇ ತೀರ್ಮಾನ ಮಾಡಿ ಕಾರ್ಯಕ್ರಮ ಕೈಗೊಳ್ಳಲು ಕಾನೂನು ದತ್ತವಾದ ಏರ್ಪಾಡು ಮಾಡಬೇಕು ಎಂದು ಹೇಳಿದರು. ಈ ಸಮಿತಿ ಅಥವಾ ಸಂಸ್ಥೆಯೇನಿದೆ, ಜೋನಲ್ ಕೌನ್ಸಿಲ್ ಎಂಬುದೇನಿದೆ, ಅದಕ್ಕೆ ಯಾರನ್ನು ಸೇರಿಸಬೇಕು ಎಂಬುದನ್ನು ಸ್ವಲ್ಪ ಬದಲಾವಣೆ ಮಾಡಿ, ವಿಸ್ತರಿಸಿ, ಅದನ್ನು ಒಂದು ಸಂಸ್ಥಾನದ ಹಾಗೆ ಮಾಡಿ, ಬೇರೆ ಬೇರೆ ಸಂಸ್ಥಾನಗಳಿಂದ ಹೋಗುವವರನ್ನು ಸೇರಿಸಿ ದಕ್ಷಿಣ ದೇಶದ ಪಾರ್ಲಿಮೆಂಟ್ ಆಗಿ ಮಾರ್ಪಾಡುಮಾಡಿ ಅಲ್ಲಿ ನಮ್ಮ ನಾಯಕರು ಹೇಳಿದ ಅಂಶಗಳನ್ನಲ್ಲದೆ ಹಾಗೆಯೇ ಇಂಟರ್‌ಸ್ಟೇಟ್ ಡೆವಲಪ್‌ಮೆಂಟಲ್ ವರ್ಕ್ಸ್ ಎಂದೇನಿವೆಯೋ ಭಾರಿ ಭಾರಿ ಕೈಗಾರಿಕೆ, ಕಾರ್ಖಾನೆಗಳೇನಿವೆಯೋ ಅವುಗಳ ಆಡಳಿತವನ್ನು ನೋಡಿಕೊಳ್ಳಲು ಸ್ಟ್ಯಾಚ್ಯುಟರಿ ಬಾಡಿಯಾಗಿ ಈ ಸರ್ಕಾರ ನೇಮಿಸುವುದಕ್ಕೇನು ಕಷ್ಟ? ಸಭಾನಾಯಕರು 'Thus far and no further' ಎಂದು ಹೇಳಿದರೆ ನಾನು ಹೇಳುವುದು 'Go the whole hog' ಎಂದು. ಅವರು ನಾಲ್ಕಾರು ಭಾಗಗಳ ಅಧಿಕಾರವನ್ನು ನಮಗೇ ಕೊಡಲಿ, ಅದಕ್ಕೆ ಸಲಹಾ ಸಮಿತಿ ಬೇಡ ಎಂದು ಹೇಳುತ್ತಾರೆ. ನಾನು ಹೇಳುವುದು ಇನ್ನೂ ಕೆಲವು ಅಧಿಕಾರಗಳನ್ನು ಕೊಟ್ಟು ಸಲಹಾ ಸಮಿತಿಗೆ ಬದಲಾಗಿ ಸರ್ಕಾರ ಎಂದು ಮಾಡಿ ಎಂದು. ಇದನ್ನು ಅಕ್ಷರಶಃ ಮಾಡಬೇಕೆಂದು ಹೇಳುವುದಿಲ್ಲ. ಈ ಅಭಿಪ್ರಾಯವನ್ನು ಮುಂದುವರಿಸಿ ಆ ದಾರಿಯಲ್ಲಿ ಹೋದರೆ ಸರಿ. ದಕ್ಷಿಣ ಸಂಸ್ಥಾನಗಳು ಯಾವ ಕಾರಣದಿಂದಾಗಲಿ ಒಕ್ಕಡೆ ಸೇರುವ ಅಂಶ ಈ ಬಿಲ್ಲಿನಲ್ಲಿದೆ. ಅದನ್ನು ತಳಹದಿಯಾಗಿಟ್ಟು ಕಾರ್ಯ ಮುಂದುವರಿಸಿ ಸಾಧಿಸುವುದಕ್ಕೆ ಅವಕಾಶವಿದೆ. ಆದ್ದರಿಂದ ನಾನು ಈ ದಿವಸ ಇಂಡಿಯಾ ಸರ್ಕಾರದಲ್ಲಿ ಬಹಳ ನಮ್ರತೆಯಿಂದ ಪ್ರಾರ್ಥನೆ ಮಾಡುವುದು. ಈ ಬಿಲ್ಲಿನಲ್ಲಿ ಮಾರ್ಪಾಡು ಮಾಡಿ ದಕ್ಷಿಣ ದೇಶಕ್ಕೆ ಒಂದು ಜೋನಲ್ ಕೌನ್ಸಿಲ್ ಆಗಬೇಕೆಂದು ಸಲಹೆಮಾಡಿರುವುದನ್ನು ಕೈಬಿಟ್ಟು ದಕ್ಷಿಣ ದೇಶವನ್ನೂ ಒಂದು ಸಂಸ್ಥಾನಮಾಡಿ ಅದಕ್ಕೆ ಅಗತ್ಯವಾದ ತಿದ್ದುಪಡಿ ಮಾಡಿ ಈ ಮಸೂದೆಯನ್ನು ಪಾರ್ಲಿಮೆಂಟ್ ಮುಂದೆ ಮಂಡಿಸಬೇಕು ಎಂದು.

2-30 P.M.

ಕಡೆಯದಾಗಿ ಒಂದು ಮಾತು ಹೇಳಬೇಕಾಗಿದೆ. ಇದಕ್ಕೆಲ್ಲಾ ಇನ್ನೂ ಒಂದು ವಿಷಯ ಅನ್ವಯಿಸುತ್ತದೆ. ಈಗ ಈ ವಿಚಾರಗಳನ್ನು ಚರ್ಚೆ ಮಾಡುವಾಗ ನಾವು ಯಾರನ್ನೂ ದೂಷಣೆ ಮಾಡಬೇಕಾಗಿಲ್ಲ. ಈ ಚರ್ಚೆಗಳು ಅವರವರ ಮನೋಧರ್ಮ ಮತ್ತು ವಯೋಧರ್ಮಗಳಿಗನುಸಾರವಾಗಿ ನಡೆದುಕೊಂಡು ಹೋಗುತ್ತವೆ ಎಂಬುದಾಗಿ ಹೇಳುತ್ತ, ಶ್ರೀ ಕೆ. ಹನುಮಂತಯ್ಯನವರು ನನ್ನನ್ನೂ ಮತ್ತು ಶ್ರೀ ವೆಂಕಟಪ್ಪನವರನ್ನೂ ಉದ್ದೇಶಿಸಿ ಮಾತನಾಡುತ್ತ, 'ತಾವೇ ಉರುಳಿಸಿದ ಒಂದು ಗುಂಡು ಬಹಳ ವೇಗವಾಗಿ ಮೇಲಿನಿಂದ ಉರುಳಿಕೊಂಡು ಬರುತ್ತಿರುವಾಗ, ಅದರ ರಭಸವನ್ನು ತಡೆಯುವುದಕ್ಕೆ ಇವರಿಗೆ ಶಕ್ತಿ ಸಾಲದೆ ಇದೆ. ಆದರೆ ನಾನು ಮಾತ್ರ ಇನ್ನೂ ಯುವಕನಾಗಿದ್ದೇನೆ. ಅವರು ಮುದುಕರು. ನನಗೆ ತಡೆಯಲು ಶಕ್ತಿ ಇದೆ. ಅವರಿಗೆ ಶಕ್ತಿಯಿಲ್ಲ' ಎಂಬುದಾಗಿ ಏನೋ ಹೇಳಿದರು. ಇದೆಲ್ಲಾ ವಾದಕ್ಕೆ ಮಾತ್ರ ಸರಿಯಾಗಿದೆ. ಈಗ ನಾವು ಮುಖ್ಯವಾಗಿ ಗಮನಿಸಬೇಕಾದ ವಿಷಯಗಳು ಇವಲ್ಲ. ಈ ದಿವಸ ನಾವು ಮುಖ್ಯವಾಗಿ ಗಮನಿಸಬೇಕಾಗಿರುವುದೇನು? ನಾವು ಈ ದಿವಸ ಮಾಡುತ್ತಿರುವ ಕೆಲಸಗಳೇನು? ಇದರಿಂದ ದೇಶದಲ್ಲಿ ಮುಂದೆ ಏನಾದೀತು? ಈಗಾಗಲೇ ದೇಶದಲ್ಲಿರತಕ್ಕಂಥ ಪರಿಸ್ಥಿತಿ ಏನು ಎಂಬುದನ್ನು ಗಮನಿಸಿ ಹೇಳುವುದಾದರೆ, ಭಾರತದಲ್ಲೇ ಅತಿ ಬೇಗ ಯುದ್ಧ ಪ್ರಾರಂಭವಾಗಲು ಅವಕಾಶ ಉಂಟಾಗತಕ್ಕ ಸನ್ನಿವೇಶಗಳು ಬಹಳವಾಗಿವೆ ಎಂದು ಹೇಳುವುದಕ್ಕೆ ಅನೇಕ ಸಕಾರಣಗಳಿವೆ. ಪಾಕೀಸ್ತಾನ ಯುದ್ಧ ಹೂಡಲು ಸಂಚುಕಾದು ಕುಳಿತಿದೆ. ನೆಹರೂರವರು ಮತದಾನ ತೆಗೆದುಕೊಳ್ಳಬೇಕೆಂದು ಹೇಳಿರುವುದು ಟೆನಬಲ್ ಆಗುವುದಿಲ್ಲ ಎಂದು ಬಾಣ ಬಿಡುತ್ತಿದ್ದಾರೆ. ಹೀಗೆ ದೇಶದಲ್ಲಿ ಒಂದು ಕಡೆ ಬಿಸಿಬಿಸಿ ವಾತಾವರಣಗಳು ಏಳುತ್ತಿರುವಾಗ ನಾವಿಲ್ಲಿ ಕುಳಿತುಕೊಂಡು ನಮಗೆ ಆ ಮಡಕಶಿರಾ ಕೊಡಿ, ಹೊಸೂರನ್ನು ನಮಗೆ ಬಿಡಿಸಿಕೊಡಿ ಎಂದು ಕೇಳುತ್ತಿದ್ದರೆ, ಮತ್ತೊಂದು ಪ್ರಾಂತ್ಯದವರು ನಮಗೆ ಕೋಲಾರ ಬಿಡಿಸಿಕೊಡಿ ಎಂದು ವಾದ ಮಾಡುತ್ತ ಕುಳಿತುಕೊಳ್ಳುತ್ತಾರೆ. ಇದು ಸರಿಯಲ್ಲ. It is not tenable. When Rome was burning,

Nero was fiddling ! ಎಂದಹಾಗೆ ರೋಂ ನಗರದಲ್ಲಿ ಪಟ್ಟಣಕ್ಕೆಲ್ಲಾ ಬೆಂಕಿ ಹತ್ತಿಕೊಂಡಿದ್ದಾಗ ಅಲ್ಲಿನ ಐಲು ದೊರೆ ಅಲ್ಲಿ ದಿಬ್ಬದ ಮೇಲೆ ಕುಳಿತು ಪಿಟೀಲ್ ಬಾರಿಸುತ್ತಿದ್ದನಂತೆ. ಆದುದರಿಂದ ಈ ದಿವಸ ನಾವು ಈ ವಾದ-ವಿವಾದಗಳಲ್ಲಿ ನಮ್ಮ ನಮ್ಮ ಚಾಕಚಕ್ಯತೆಯ ಜಾಣತನವನ್ನು ತೋರಿಸಿ ಚರ್ಚೆ ಮಾಡಲು ಇದು ಸರಿಯಾದ ಕಾಲವಲ್ಲ. ಈಗ ದೇಶಾದ್ಯಂತವೂ ಬಹಳ ತಲ್ಲಣಿಸುತ್ತಿರುವಂಥ ಸೂಚನೆಗಳು ಕಂಡುಬರತಕ್ಕಂಥ ಕಾಲವಾಗಿದೆ. ಆದುದರಿಂದ ನಾವು ಈಗ ಈ ವಿಚಾರಗಳನ್ನೆಲ್ಲಾ ಕೈಬಿಟ್ಟು ಇನ್ನೂ ಸ್ವಲ್ಪ ಕಾದು ನೋಡೋಣ, ಆದರೆ ದೇವರ ದಯೆಯಿಂದ ಅಂಥ ಸನ್ನಿವೇಶಗಳು ದೇಶದಲ್ಲಿ ಉಂಟಾಗದೆ ಇರಲೆಂದು ಹಾರೈಸುತ್ತೇನೆ. ಆ ರೀತಿ ಆಗುವುದೇ ಬೇಡ. ಆದುದರಿಂದ ಈ ಸಂದರ್ಭದಲ್ಲಿ ನಾನು ಬಹಳ ವಿನಯದಿಂದ ಇಂಡಿಯಾ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ: ದೇಶಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ಇನ್ನೂ ಒಂದು ಹತ್ತು ವರ್ಷಗಳ ಕಾಲ ಕೈಬಿಟ್ಟು ಬಿಡುವುದು ಒಳ್ಳೆಯದು ಎಂದು. ದೇಶವೆಲ್ಲೆಲ್ಲಾ ಶಾಂತಿ-ಸಮಾಧಾನಗಳು ನೆಲಸಲಿ. ಈಗ ಇರತಕ್ಕ ಪಾಕೀಸ್ತಾನ ಹೀಗೇ ಪ್ರತ್ಯೇಕವಾಗಿ ಇರುತ್ತದೆಯೋ ಅಥವಾ ಅದು ಹಿಂದೂಸ್ಥಾನದಲ್ಲೇ ಬೆರತುಹೋಗತಕ್ಕಂಥ ಕಾಲ ಬರುತ್ತದೆಯೋ ಅದೆಲ್ಲವನ್ನೂ ನೋಡೋಣ. ಯಾರೋ ಒಬ್ಬರು ಈ ಎರಡು ದೇಶಗಳೂ ಕೊನೆಗೆ ಒಂದೇ ಆಗುತ್ತವೆಂದು ಭವಿಷ್ಯ ಹೇಳಿದಾರಂತೆ. ಅವರ ಭವಿಷ್ಯ ಅಷ್ಟು ನಿಜವಾದದ್ದು ಎಂದು ಹೇಳುತ್ತಿದ್ದಾರೆ. ಹಾಗೆ ಪಾಕಿಸ್ತಾನದವರು ಏನಾದರೂ ದುಡುಕಿ ನಮ್ಮ ಮೇಲೆ ಬಿದ್ದು ತಮ್ಮ ರೆಕ್ಕೆ-ಪುಕ್ಕಗಳನ್ನೆಲ್ಲಾ ಕತ್ತರಿಸಿಕೊಂಡು ಕೊನೆಗೆ ವಿಧಿಯಿಲ್ಲದೆ ನಮ್ಮ ಒಡನೆಯೇ ಬಂದು ಬಾಳುತ್ತೇವೆಂದು ಹೇಳಬಹುದು. ಆದುದರಿಂದ ನಾವು ಅಲ್ಲಿಯವರೆಗೂ ಸ್ವಲ್ಪ ಕಾದು ನೋಡೋಣ. ದೇಶದಲ್ಲಿ ಶಾಂತಿ-ಸುಭಿಕ್ಷಗಳು ಉಂಟಾಗಲಿ. ಈ ಭಾಷಾ ವ್ಯಾಜ್ಯ, ಊರಿನ ವ್ಯಾಜ್ಯ, ನೀರಿನ ವ್ಯಾಜ್ಯ, ಗಡೀವ್ಯಾಜ್ಯಗಳ ಗೋಜಿಗೆ ಈಗ ಹೋಗುವುದು ಬೇಡ. ಇದು ದೇಶದ ಐಕಮತ್ಯವನ್ನು ಕಲಕಲು ಅವಕಾಶ ಕೊಟ್ಟ ಹಾಗೆ ಆಗುತ್ತದೆ. ಇದರಿಂದ ಗಲಭೆಗಳಿಗೆ ಅವಕಾಶವಾಗುತ್ತದೆ. ಈಗಾಗಲೇ ದೇಶದಲ್ಲಿ ಅಲ್ಲಲ್ಲೆ ಸಾಕಷ್ಟು ಗೊಂದಲವೆದ್ದಿದೆ. ಆದುದರಿಂದ ಈಗ ಸದ್ಯಕ್ಕೆ ಇದನ್ನು ಮುಂದುವರಿಸದೆ ಇಷ್ಟಕ್ಕೇ ಕೈಬಿಡುವುದು ಒಳ್ಳೆಯದು. ಈಗಾಗಲೇ ಈ ಪ್ರಾಂತ್ಯ ಪುನರ್ವಿಂಗಡಣೆಯ ಸಂಬಂಧದಲ್ಲೇ ಪುನಃ ಮಹರಾಷ್ಟ್ರದವರು ಸುಮಾರು 25 ಜನರು ಕಾಂಗ್ರೆಸ್ ಸದಸ್ಯರೇ ಸತ್ಯಾಗ್ರಹ ಹೂಡಲು ತೀರ್ಮಾನ ಮಾಡಿಕೊಂಡಿದ್ದಾರೆಂದು ಕೇಳುತ್ತಿದ್ದೇವೆ. ಆದುದರಿಂದ ಇದನ್ನು ಈಗಲೇ ಅಂಗೀಕಾರ ಮಾಡಲೇಬೇಕೆಂಬುದಕ್ಕೆ ಅಂಥ ಸುಗಮವಾದ ಅವಕಾಶಗಳೇನೂ ಕಂಡುಬರುವುದಿಲ್ಲ. ಇಂಥ ಅನಾನುಕೂಲಗಳಿರುವಾಗ ಮೈಸೂರು ಮೈಸೂರಿದ್ದ ಹಾಗೇ ಇದ್ದರೆ ಇದರಿಂದ ಏನು ಅನಾನುಕೂಲವಾಗುತ್ತದೆ? ನೂರಾರು ವರ್ಷಗಳಿಂದಲೂ ಇದು ಹೀಗೆಯೇ ಮುಂದುವರಿದುಕೊಂಡು ಬಂದಿರುವಾಗ ಇನ್ನೂ ಎಂಟು ಹತ್ತು ವರ್ಷಗಳು ಹೀಗೆಯೇ ಮುಂದುವರಿಯಲಿ ಎಂದು ಹೇಳಿದರೆ ಇದರಿಂದಾಗತಕ್ಕ ತೊಂದರೆಯಾದರೂ ಏನಿದೆ? ಈಗಿನ ಸಂದರ್ಭಗಳಲ್ಲಿ ನಾನು ಇಂಡಿಯಾ ಸರ್ಕಾರಕ್ಕೆ ಕೊಡತಕ್ಕಂಥ ನನ್ನ ಒಂದು ಖಚಿತವಾದ ಸಲಹೆ ಯೇನೆಂದರೆ ಮತ್ತು ಒಂದು ನನ್ನ ವಿನಯಪೂರ್ವಕವಾದ ಪ್ರಾರ್ಥನೆಯೇನೆಂದರೆ: ಈ ಪ್ರಶ್ನೆಯನ್ನು ಇನ್ನೂ ಹತ್ತು ವರ್ಷಗಳ ಕಾಲ ಮುಂದಕ್ಕೆ ಹಾಕಕಕ್ಕದ್ದು ಉಚಿತವಾದುದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು-ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೇ, ನಾನು ಈಗ ಸಭೆಯ ಮುಂದೆ ಮಂಡಿಸಲ್ಪಟ್ಟಿರುವ ಪ್ರಾಂತ್ಯಗಳ ಪುನರ್ವಿಂಗಡಣೆಯ ಮಸೂದೆಯನ್ನು ಸ್ವಾಗತಿಸುತ್ತೇನೆ. ಆದರೆ ಈ ಹಿಂದೆ ಈ ಸಭೆಯ ಮುಂದೆ ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ವರದಿ ಚರ್ಚೆಗೆ ಬಂದಿದ್ದಾಗ ಇದ್ದಂಥ ಒಂದು ವಿರೋಧ ಸನ್ನಿವೇಶ ಈಗ ಬಹಳಮಟ್ಟಿಗೆ ಅಳಿಸಿಹೋಗಿರುವುದದ್ದು ಕಂಡು ನನಗಂತೂ ಬಹಳ ಮಟ್ಟಿಗೆ ಸಂತೋಷವುಂಟಾಗಿದೆ. ಆದರೆ, ಈಗ್ಗೆ ಕೆಲವು ದಿವಸಗಳ ಹಿಂದೆ ನಾನೂ ಮತ್ತು ನಮ್ಮ ಚುನಾವಣೆ ಕ್ಷೇತ್ರದಿಂದ ಆರಿಸಿ ಬಂದಿರತಕ್ಕ ನನ್ನ ಮಿತ್ರರಾದ ಶ್ರೀ ಕೆ. ವಿ. ಬೈರೇಗೌಡರೂ ಇಬ್ಬರೂ ಒಟ್ಟಾಗಿ ನಮ್ಮ ಚುನಾವಣಾಕ್ಷೇತ್ರದಲ್ಲಿ ಸಂಚಾರ ಮಾಡಿ ಜನರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿದ್ದರಲ್ಲಿ ಅವರೆಲ್ಲರೂ ಈ ಪ್ರಾಂತ್ಯಗಳ ಪುನರ್ವಿಂಗಡಣೆಯಾಗತಕ್ಕದ್ದನ್ನು ನಾವುಗಳು ಈರ್ವರೂ ಸ್ವಾಗತ ಮಾಡಬೇಕು ಎಂಬುದಾಗಿ ಆ ಮಹಾ ಜನರು ನಮಗೆ ಅಪ್ಪಣೆಯಿತ್ತಿದ್ದಾರೆ. ಈ ಹಿಂದೆಯಾಗಲಿ ಮತ್ತು ಈಗ ಆಗಲಿ ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ವಿಚಾರದಲ್ಲಿ ತಮ್ಮ ಒಂದು ಸಂಯಮವನ್ನು ತೋರಿಸಿ ಈ ಬಗ್ಗೆ ನಮ್ಮ ಮುಖಂಡರುಗಳೂ ಮತ್ತು ಇತರರೂ ಪಟ್ಟ ಕಷ್ಟಗಳಿಗಾಗಿ ನಾವೆಲ್ಲರೂ ಅವರಿಗೆ ನಮ್ಮ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಈಗಾಗಲೇ ನಮ್ಮ ಕೆಲವು ಸ್ನೇಹಿತರು ಹೇಳಿರುವ ಹಾಗೆ, ಈ ಮೈಸೂರು ವಿಶಾಲವಾದರೆ ನಮಗೆ ಮುಂದೆ ಸ್ವಲ್ಪಮಟ್ಟಿಗೆ ಕಷ್ಟವಾಗಬಹುದು. ಆದರೂ ನಾವೆಲ್ಲರೂ ಅದನ್ನು ಬಹಳ ವಿಶಾಲ ಮನಸ್ಸಿನಿಂದ ಅನುಭವಿಸಬೇಕಾಗಿ ಬರಬಹುದು. ಹಾಗೇನಾದರೂ ಅಲ್ಪಸ್ವಲ್ಪ ಅನಿವಾರ್ಯಗಳು ತಲೆದೋರಿದರೆ ಆಗ ನಮ್ಮ ಈ ಸಭೆಯ ಮಾನ್ಯ ಸದಸ್ಯರುಗಳೂ ಆ ಕೇಂದ್ರ ಸರ್ಕಾರದವರೂ ಮತ್ತು ಪಾರ್ಲಿಯಮೆಂಟ್ ಸದಸ್ಯರೂ ಸೇರಿಕೊಂಡು ಯಾವ ಕಾಲಕ್ಕೇ ಆಗಲಿ ಅಂಥ ಕಷ್ಟಗಳೊದಗಿದರೆ ಅವುಗಳನ್ನು ಆಯಾ ಕಾಲಕ್ಕೆ ಸರಿಯಾಗಿ ಪರಿಹಾರ ಮಾಡಲು ಸಾಧ್ಯವಿರುವುದರಿಂದ ನಮಗೆ ಅಷ್ಟೇನೂ ತೊಂದರೆಗಳು ಇದರಿಂದ ಆಗಲಾರದು. ಆದರೆ ಈ ಹಿಂದೆ, ಎಂದರೆ, ಇಲ್ಲಿಗೆ ಮೂರು ವರ್ಷಗಳ ಕೆಳಗೆ ಆ ಬಳ್ಳಾರಿ ಜಿಲ್ಲೆಯನ್ನು ನಮ್ಮ ಮೈಸೂರಿಗೆ ಸೇರಿಸಲಾಗಿದ್ದಿತು. ಈಗಲೂ ಕೂಡ ಆ ಇಡೀ ಜಿಲ್ಲೆಯನ್ನು ನಮ್ಮ ಮೈಸೂರಿನಲ್ಲೇ ಉಳಿಸಿದ್ದೂ ಕೂಡ ನಮಗೆಲ್ಲರಿಗೂ ಬಹಳ ಸಂತೋಷವನ್ನುಂಟುಮಾಡಿದೆ. ಇದಕ್ಕಾಗಿ ನಾನು ಕೇಂದ್ರ ಸರ್ಕಾರದವರನ್ನು ವಂದಿಸುತ್ತೇನೆ. ಆದರೆ ಈ ದಿವಸ ನಮ್ಮ ಮೈಸೂರು ಒಂದು ಏಕಭಾಷಾ ರಾಜ್ಯವೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮಲ್ಲಿ ತೆಲುಗು, ತಮಿಳು, ಉರ್ದು, ಮರಾಠಿ, ತುಳು, ಮಲಯಾಳಿ ಇತ್ಯಾದಿ ಭಾಷೆಗಳನ್ನಾಡತಕ್ಕಂಥ ಜನರೂ ಸಹ ಈಗಿದ್ದಾರೆ. ಆದುದರಿಂದ ನಾವು ಇಲ್ಲಿ ಒಂದು ಭಾಷೆ, ಒಂದು ಸಂಸ್ಕೃತಿ ಇರತಕ್ಕ ರಾಜ್ಯವನ್ನು ಕಟ್ಟುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈ ದಿವಸ ಈ ಪ್ರಾಂತ್ಯಗಳ ಪುನರ್ವಿಂಗಡಣೆಯನ್ನು ಒಂದು ಆಡಳಿತ ಸೌಕರ್ಯದ ದೃಷ್ಟಿಯಿಂದ, ಒಂದು ರಾಜಕೀಯ ದೃಷ್ಟಿಯಿಂದ, ಇಲ್ಲಿ ಬಹು ಭಾಗ ಕನ್ನಡ ಮಾತನಾಡತಕ್ಕ ಜನರಿರುವುದರಿಂದ, ಇಲ್ಲಿಯ ಎಲ್ಲ ಆಡಳಿತವನ್ನೂ ಕನ್ನಡ ಭಾಷೆಯೊಂದರಲ್ಲೇ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅಭಿಪ್ರಾಯ

(ಶ್ರೀ ಆರ್. ಮುನಿಸ್ವಾಮಯ್ಯ.)

ದಿಂದ ಈ ದಿವಸ ಕೇಂದ್ರ ಸರ್ಕಾರದವರು ನಮ್ಮ ಮೈಸೂರಿನ ಅಕ್ಕಪಕ್ಕದ ಕೆಲವು ಕನ್ನಡ ಪ್ರಾಂತ್ಯಗಳನ್ನು ನಮ್ಮ ಮೈಸೂರಿಗೆ ಸೇರಿಸಿರುತ್ತಾರೆ. ಇನ್ನು ಮುಂದೆ ನಿರ್ಮಾಣವಾಗಲಿರತಕ್ಕ ಈ ವಿಶಾಲ ಕನ್ನಡ ಪ್ರದೇಶಕ್ಕೆ ಮೈಸೂರ ಎಂಬತಕ್ಕ ಹೆಸರೇ ಇರಲಿ ಎನ್ನುವುದಾಗಿ ಈ ಮೈಸೂರಿನಲ್ಲಿ ಉದ್ಭವಿಸಿದ್ದ ಸ್ಥಿತಿಗತಿಗಳನ್ನು ನೋಡಿ ಆ ಕೇಂದ್ರ ಸರ್ಕಾರ ಮತ್ತು ಪಾರ್ಲಿಯಮೆಂಟ್ ತೀರ್ಮಾನ ಮಾಡಿರುತ್ತವೆ. ಆದರೆ ಈಗ ಹೊರಗಡೆಯಿಂದ ನಾಳೆ ನಮ್ಮೊಡನೆ ಬಂದು ಸೇರಲಿರತಕ್ಕ ಪ್ರದೇಶದ ಜನಗಳಲ್ಲಿ ಕೆಲವರು ಹೀಗೆ ಈ ನೂತನ ಪ್ರಾಂತ್ಯಕ್ಕೆ ಮೈಸೂರು ಎಂಬ ಹೆಸರನ್ನಿಟ್ಟಿರುವುದು ತಪ್ಪು—ಇದು ಸರಿಯಲ್ಲ, ಇದಕ್ಕೆ ಕರ್ಣಾಟಕ ಎಂಬ ಹೆಸರನ್ನಿಡಬೇಕಾಗಿತ್ತೆಂದು ಕೆಲವರೂ, ಮತ್ತೆ ಕೆಲವರು ಇದಕ್ಕೆ ವಿಜಯನಗರ ಎಂಬ ಹೆಸರನ್ನಿಡಬೇಕಾಗಿತ್ತೆಂದೂ ಇತ್ಯಾದಿ ಟೀಕೆಗಳನ್ನು ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಈ ದಿವಸ ಈ ಹೆಸರನ್ನು ಬದಲಾವಣೆ ಮಾಡಲು ನಮ್ಮ ಮೈಸೂರಿನಲ್ಲಿ ಎಷ್ಟು ಕಷ್ಟವಿದೆ ಮತ್ತು ಈ 'ಮೈಸೂರು' ಎಂಬ ಪದಕ್ಕೆ ಈ ದಿವಸ ಎಷ್ಟು ಗೌರವವಿದೆ ಎನ್ನುವುದನ್ನು ಅವರು ಬಹುಶಃ ಅರ್ಥಮಾಡಿಕೊಳ್ಳಲು ಶಕ್ತಿ ಇಲ್ಲದೆ ಹಾಗೆ ಮಾತನಾಡಿರುತ್ತಾರೆಂದು ಕಾಣುತ್ತದೆ. ಆದರೆ ನಮ್ಮ ಶ್ರೀ ಕೆ. ಹನುಮಂತಯ್ಯನವರು ಅವರೆಲ್ಲರೂ ನಾಳೆ ಇಲ್ಲಿಗೆ ಬರಲಿ, ಅನಂತರ ಅವರಿಗೆ ನಾವು ಮಾಡಿರುವುದು ಸರಿ ಅನ್ನಿಸುತ್ತದೆ ಎಂದು ಹೇಳಿದ್ದಾರೆ. ಹಾಗೆ ಮುಂದಕ್ಕೆ ಇವರೇನು ಮಾಡುತ್ತಾರೋ ನನಗದು ತಿಳಿಯದು. ಆದರೂ ನಾಳೆ ಅವರೆಲ್ಲರೂ ಬಂದು ನಮ್ಮೊಡನೆ ಬೆರತುಕೊಂಡು ಹೋದಮೇಲೆ ಅವರಿಗೂ ಇದು ಅರ್ಥವಾಗುತ್ತದೆ. ಆಗ ಅವರೆಲ್ಲರೂ ಸಹ ಅವರ ಪಾಡಿಗೆ ಅವರೇ ಸರಿಯಾಗಿ ಹೊಂದಿಕೊಂಡು ಹೋಗುತ್ತಾರೆ. ಇದರಿಂದೇನೂ ಅಂಥ ಬಾಧಕ ಬರುವುದಿಲ್ಲ. ಆದ್ದರಿಂದ ನಾನು ಈಗ ಮುಂದೆ ನೂತನವಾಗಿ ಪ್ರಾರಂಭವಾಗಲಿರುವ ಕನ್ನಡ ಪ್ರಾಂತಕ್ಕೆ ಮೈಸೂರೆಂದು ಹೆಸರಿಟ್ಟಿರತಕ್ಕದ್ದು ಸರಿಯಾಗಿದೆಯೆಂದು ಭಾವಿಸಿದ್ದೇನೆ. ಈಗ ಮೈಸೂರಿನೊಂದಿಗೆ ತಾವಾಗಿಯೇ ಸೇರಲು ಬರತಕ್ಕಂಥ ಜನರನ್ನು ನಾವು ಸಂತೋಷದಿಂದ ಸ್ವಾಗತಿಸಬೇಕೆಂದೂ—ಅವರನ್ನು ಅತಿಥಿಗಳಂತೆ ಸ್ವಾಗತಿಸಬೇಕೆಂದೂ ಕೆಲವರು ಹೇಳಿದ್ದಾರೆ. ಆದರೆ ಆ ರೀತಿ ಹೇಳತಕ್ಕದ್ದು ಸರಿಯಾದದ್ದಲ್ಲವೆಂದು ನನ್ನ ಭಾವನೆ. ಈ ರಾಜ್ಯಗಳು ಚಿಕ್ಕದಾಗಿರುವುದರಿಂದ ಇವುಗಳ ಆಡಳಿತ ದೃಷ್ಟಿಯಿಂದ, ಈ ದಿವಸ ಆಗುತ್ತಿರುವ ವೆಚ್ಚವನ್ನು ಕಡಮೆಮಾಡಬೇಕೆಂಬ ದೃಷ್ಟಿಯಿಂದ, ಈ ದಿವಸ ಈ ದೊಡ್ಡ ರಾಜ್ಯಗಳನ್ನು ಮಾಡಲು ಪ್ರಯತ್ನ ಮಾಡಿರುತ್ತಾರೆ. ರಾಜ್ಯ ದೊಡ್ಡದಾದರೆ ಆಡಳಿತ ವೆಚ್ಚ ಕಡಮೆಯಾಗುತ್ತದೆಂದು ಹೀಗೆ ಮಾಡಿರುವಾಗ ನಾವು ಹೊರಗಡೆಯವರನ್ನು ಆದರದಿಂದ ಬರಮಾಡಿಕೊಳ್ಳಲೇಬೇಕಾಗಿದೆ. ಆದರೆ ಏತನ್ಮಧ್ಯೆ ದೇಶಗಳನ್ನು ದೊಡ್ಡದು ಮಾಡಬೇಕೆಂದು ಹೇಳತಕ್ಕ ಸಂದರ್ಭದಲ್ಲೇ ಈ ದಕ್ಷಿಣ ಪ್ರದೇಶ, ಉತ್ತರ ಪ್ರದೇಶ, ಪೂರ್ವ ಮತ್ತು ಪಶ್ಚಿಮ ಪ್ರದೇಶಗಳನ್ನು ಮಾಡಬೇಕೆಂಬ ಒಂದು ಕೂಗೂ ಸಹ ಡೆಲ್ಲಿಯಲ್ಲಿ ಎದ್ದಿತ್ತೆಂಬ ಅಂಶ ತಮಗೆಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಆದರೆ ಅದೂ ಸಹ ಒಂದು ರಾಜಕೀಯ ದೃಷ್ಟಿಯಿಂದ ಸರಿಹೋದರೂ ಹೋಗಬಹುದೆಂದು ಹೇಳಬಹುದು. ಈಗ ಸದ್ಯದಲ್ಲಿ ಅದು ಸರಿಯೇ ಅಥವಾ ಅಲ್ಲವೇ ಎಂಬ ಗೋಜಿಗೆ ಹೋಗಬೇಕಾಗಿಲ್ಲ. ಈಗ ಆ ಸಂದರ್ಭವೂ ಒದಗಿಲ್ಲ ಹಾಗೆ ಸಂದರ್ಭ ಒದಗಿದಾಗ ಬೇಕಾದರೆ ವಿಚಾರವನ್ನು ಮುಂದೆ ನೋಡೋಣ. ಮುಂದೆ ಅನುಕೂಲವೆಂದು ಕಂಡುಬಂದರೆ ಆಗ ದ್ವಿಭಾಷಾ ಅಥವಾ ಬಹುಭಾಷಾ ರಾಜ್ಯಗಳನ್ನು ಮಾಡಲು ಅವಕಾಶವಾಗಬಹುದು. ಆದರೆ ಈಗ ಮೈಸೂರಿನೊಂದಿಗೆ ಸೇರಲಿರತಕ್ಕ ಪ್ರದೇಶಗಳ ಬಗ್ಗೆ ಗಡಿ ಸಮಿತಿಗಳ ನಿರ್ಧಾರ ಸಮಿತಿಯೊಂದು ಏರ್ಪಾಡಾಗಬೇಕಾಗಿದೆ. ಈಗ ನಮ್ಮ ಮೈಸೂರಿಗೆ ಕಾಸರಗೋಡಿನ ಉತ್ತರ ಭಾಗ, ನೀಲಗಿರಿ, ಹೊಸೂರು ಭಾಗ, ಗೋಪಿಶೆಟ್ಟಿಪಾಳ್ಯ ಮತ್ತು ತಳವಾಡಿ ಫಿರ್ಕ ಇತ್ಯಾದಿಗಳು ಸೇರಬೇಕಾಗಿವೆ. ಇದೇ ರೀತಿ ಮಡಕಶಿರಾ ಕೂಡ ನಮಗೇ ಸೇರಬೇಕಾಗಿದೆ. ಆ ಪ್ರದೇಶಗಳಲ್ಲಿರತಕ್ಕಂಥ ಜನರೆಲ್ಲಾ ಬಹಳ ಒತ್ತಾಯಮಾಡಿ ಈ ಕನ್ನಡ ಪ್ರದೇಶಕ್ಕೆ ಅವರ ಭಾಗಗಳನ್ನು ಸೇರಿಸಿಕೊಳ್ಳುವಂತೆ ಮಾಡಿ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಅವರು ಅವರ ಅಭಿಪ್ರಾಯಗಳನ್ನು ಪತ್ರಿಕೆಗಳ ಮೂಲಕವೂ ನಿರ್ಣಯಗಳ ಮೂಲಕವೂ ಮಹಾ ಜನಗಳಿಗೆ ತಿಳಿಸಿ ಅದರಂತೆ ಕಾರ್ಯಕ್ರಮಗಳನ್ನು ಕೈಕೊಳ್ಳುವ ಹಾಗೆ ಪ್ರಾರ್ಥಿಸುತ್ತಿದ್ದಾರೆ. ಆ ಜನರು ಬಂದು ನಮ್ಮಲ್ಲಿ ಬೇಡಿಕೊಳ್ಳುತ್ತಿದ್ದಾರೆ. ಆದುದರಿಂದ ನಾವು ಅವರ ಕೇಳಿಕೆಗೆ ಮನ್ನಣೆ ಕೊಡಲೇಬೇಕಾಗಿದೆ. ಆದುದರಿಂದ ಅವರೆಲ್ಲರೂ ಬೇಗ ಬಂದು ನಮ್ಮೊಡನೆ ಸೇರಿಕೊಳ್ಳುವಂತೆ ಮಾಡಿ ಮುಂದಿನ ರಾಜ್ಯಭಾರ ಸುಗಮವಾಗಿ ನಡೆಯುವಂತೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಜೋನಲ್ ಕೌನ್ಸಿಲ್ ವಿಚಾರ ಬೇರೆ ಈ ಬಿಲ್ಲಿನಲ್ಲಿ ತಿಳಿಸಲಾಗಿದೆ. ದಕ್ಷಿಣ ಪ್ರದೇಶದಲ್ಲಿರತಕ್ಕಂಥ ಆಂಧ್ರ, ಮದರಾಸ್, ಕೇರಳ ಮತ್ತು ಮೈಸೂರು ಪ್ರದೇಶಗಳೆಲ್ಲಾ ಸೇರಿ ಒಂದು ದಕ್ಷಿಣ ಜೋನಲ್ ಕೌನ್ಸಿಲ್ ರಚನೆಯಾಗಬೇಕೆಂದು ತಿಳಿಸಿದ್ದಾರೆ. ಆದರೆ ಇದೊಂದು ಕೇವಲ ಸಲಹಾ ರೂಪದ ಸಮಿತಿಯಾಗಿರುತ್ತದೆಂದು ಹೇಳಲಾಗಿದೆ. ಇದರಲ್ಲಿ ನಮ್ಮ ರಾಜ್ಯಾಡಳಿತದ ಬಗೆ ಅಷ್ಟರಮಟ್ಟಿಗೆ ಇರಲಾರದೆಂದು ತಿಳಿಯುತ್ತೇನೆ. ಆದಕಾರಣ ಇದಕ್ಕೆ ಅಂಥ ಒಂದು ಕಾರ್ಯನಿರ್ವಾಹಕ ಶಕ್ತಿ ಕೊಡುವಹಾಗೆ ಒಂದು ಏರ್ಪಾಡನ್ನು ಮಾಡಬೇಕೆಂದು ಸಲಹೆಮಾಡುತ್ತೇನೆ. ಈ ದಿವಸ ನಾವು ನಮ್ಮ ಗಡಿ ನಿರ್ಧಾರದ ತೀರ್ಮಾನವನ್ನು ಈ ಸಮಿತಿಗಳಿಗೇ ವಹಿಸಬೇಕೆಂಬುದಾಗಿ ಈ ಮಸೂದೆಯಲ್ಲಿ ತಿಳಿಸಿದೆ. ಆದರೆ ಈ ಗಡಿ ನಿರ್ಧಾರದ ತೀರ್ಮಾನವನ್ನು ಈ ಜೋನಲ್ ಕೌನ್ಸಿಲ್‌ಗಳಿಗೆ ವಹಿಸುವುದು ಸರಿಯಾದದ್ದಲ್ಲ. ಈ ಸಮಿತಿಗಳು ರಚನೆಯಾಗತಕ್ಕದ್ದು ಯಾವಾಗ? ಇವು ಆ ಗಡಿ ನಿರ್ಧಾರವನ್ನು ಮುಗಿಸುವುದೆಂದಿಗೆ? ಹೀಗೆಲ್ಲಾ ಮಾಡಿದರೆ ಇದು ಬಹಳ ನಿಧಾನವಾಗುತ್ತದೆ. ಇಷ್ಟೇ ಅಲ್ಲದೆ ನಮ್ಮ ಮೈಸೂರಿನವರು ಈ ಒಂದು ಪ್ರಾಂತ್ಯ ನಮಗೆ ಸೇರಬೇಕೆಂದರೆ—ಆಂಧ್ರದವರು ಇಲ್ಲ, ಅದು ನಮಗೆ ಸೇರಬೇಕು ಎಂದು ಅವರು ಹೇಳುತ್ತಾ ಕುಳಿತುಕೊಂಡರೆ, ಇತ್ತ ಕೇರಳದವರಿಗೂ ನಮ್ಮ ಮೈಸೂರಿನವರಿಗೂ ವಾದ ವಿವಾದಗಳು ಹುಟ್ಟಿದರೆ, ಈ ವಿವಾದಗಳಿಗೆ ಸಂಬಂಧಪಟ್ಟ ಪಾರ್ಟಿಗಳ ಮಧ್ಯದಲ್ಲಿ ನ್ಯಾಯವಾದ ಮತ್ತು ಶೀಘ್ರವಾದ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಹೀಗೆ ಇಂಥ ವಿಚಾರಗಳಲ್ಲಿ ಆಸಕ್ತಿಯುಳ್ಳಂಥ ಪಾರ್ಟಿಗಳು ಈ ತೀರ್ಪನ್ನು ಕೊಡತಕ್ಕಂಥ ಸಮಿತಿಗಳಲ್ಲಿ ಭಾಗವಹಿಸಬಾರದು. ಆದಕಾರಣ ಈ ಗಡಿ ನಿರ್ಧಾರದ ತೀರ್ಮಾನವನ್ನು ಈ ಜೋನಲ್ ಕೌನ್ಸಿಲ್‌ಗಳಿಗೆ ವಹಿಸದೆ ಇದನ್ನು ಗಡಿ ನಿರ್ಧಾರದ ಸಮಿತಿಗೇ

ವಹಿಸಬೇಕೆಂದು ಸಲಹೆ ಮಾಡುತ್ತೇನೆ. S.R.C. ವರದಿಯಲ್ಲಿ ಕಂಡುಬಂದಿದ್ದಂಥ ಕೆಲವು ಲೋಪದೋಷಗಳನ್ನು ಈ ಮಸೂದೆಯಲ್ಲಿ ತಿದ್ದುಪಡಿ ಮಾಡಿ ಇದನ್ನು ಎಲ್ಲರಿಗೂ ಒಂದು ಸಮರ್ಪಕವಾಗಿರತಕ್ಕ ರೀತಿಯಲ್ಲಿ ತಯಾರಿಸಿದ್ದಾರೆ. ಆದುದರಿಂದ ಈಗ ನಾವೆಲ್ಲರೂ ಈ S.R.C. ಮಸೂದೆಯನ್ನು ಒಂದೇ ಮನಸ್ಸಿನಿಂದ ಸ್ವಾಗತಿಸೋಣ ಎಂದು ಹೇಳುತ್ತೇನೆ. ಈಗ ಹೊಸದಾಗಿ ಒಂದು ನಮ್ಮೊಡನೆ ಸೇರತಕ್ಕ ಜನರೊಂದಿಗೆ ನಾವು ಒಮ್ಮನಸ್ಸಿನಿಂದ ಕೂಡಿಕೊಂಡು ಎಲ್ಲರೂ ಸುಖದಿಂದ ಬಾಳಿ ಬದುಕೋಣ. ಎಷ್ಟೋ ವರ್ಷಗಳಿಂದ ಹೀಗೆ ಒಂದಾಗಿರಬೇಕಾಗಿದ್ದ ರಾಜ್ಯ ಒಡೆದು ಛಿದ್ರ ಛಿದ್ರವಾಗಿ ಅನೇಕ ಪಾಳೇಗಾರರ ಮತ್ತು ರಾಜ-ಮಹಾರಾಜರವರ ಆಡಳಿತಕ್ಕೆ ಸಿಕ್ಕಿ ಕಷ್ಟಕ್ಕೆ ಈಡಾಗಿತ್ತು. ಈ ದಿವಸ ಈ ಭಾಗಗಳೆಲ್ಲವೂ ಮಹಾತ್ಮಾ ಗಾಂಧಿಯವರ ಅನುಗ್ರಹದಿಂದ ಒಂದು ಆಡಳಿತಕ್ಕೆ ಸಿಕ್ಕುವಂತೆ ಅವಕಾಶ ಉಂಟಾಗಿದೆ. ಇದು ನಮ್ಮೆಲ್ಲರ ಪುಣ್ಯ. ಆದಕಾರಣ ಈಗ ನಮ್ಮ ಮುಂದೆ ಬಂದಿರತಕ್ಕ ಬಿಲ್ಲನ್ನು ಎಲ್ಲರೂ ಒಂದೇ ಮನಸ್ಸಿನಿಂದ ಸ್ವಾಗತಿಸಿ ತನ್ಮೂಲಕ ಒಂದು ವಿಶಾಲ ಕನ್ನಡ ರಾಜ್ಯವನ್ನು ಕಟ್ಟೋಣ. ಮುಂದೆ ಸಾಧ್ಯವಾಗುವುದಾದರೆ ದಕ್ಷಿಣ ಪ್ರದೇಶ ಅಥವಾ ದ್ವಿಭಾಷಾ, ಬಹುಭಾಷಾರಾಜ್ಯಗಳ ವಿಚಾರ ಮಾಡೋಣ. ಆದರೆ ಈಗ ಸದ್ಯದಲ್ಲಿ ನಾವು ಭಾರತದ ಭದ್ರತೆ ಮತ್ತು ಐಕಮತ್ಯಗಳನ್ನು ನಮ್ಮೆಲ್ಲರ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಮುಂದಿರುವ S.R. ಮಸೂದೆಯನ್ನು ಸ್ವಾಗತಿಸೋಣವೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಈ ದೇಶದ ಪುನರ್‌ವಿಂಗಡಣೆಯ ಸಂಬಂಧದಲ್ಲಿ ದೇಶದಾದ್ಯಂತ ವಾದ ವಿವಾದಗಳು ನಡೆದುವು. ಅನೇಕ ಸಭೆಗಳು ಸಹ ನಡೆದವು. ನಮ್ಮ ನಾಯಕರುಗಳೂ ಸಹ ತಮ್ಮ ಬುದ್ಧಿಯನ್ನು ಇದಕ್ಕೆ ಪೂರ್ಣವಾಗಿ ವಿನಿಯೋಗಿಸಿ ಅಂತ್ಯವಾಗಿ, ಈ ದಿವಸ ಈ ಬಿಲ್ಲು ನಮ್ಮ ಮುಂದೆ ಬಂದಿದೆ. ನಮ್ಮ ಮೈಸೂರು ಸಂಸ್ಥಾನದಲ್ಲೂ ಸಹ ಈ ಸಂಸ್ಥಾನ ಪುನರ್ ವಿಂಗಡಣೆಯ ವಿಚಾರದಲ್ಲಿ ಅನೇಕ ವಾದ ವಿವಾದಗಳು ಎದ್ದು, ಅನೇಕ ತರ್ಕಗಳು ನಡೆದುವು; ಅನೇಕ ವಿಷಯಗಳು ನಮ್ಮ ಮುಂದೆ ಬಂದು ಹಾದು ಹೋಗಿವೆ. ಇದರಲ್ಲಿ ಮೈಸೂರು ಸಂಸ್ಥಾನವು ಮೈಸೂರು ಸಂಸ್ಥಾನವಾಗಿಯೇ ಮುಂದೆಯೂ ಉಳಿಯಬೇಕು ಎಂದು ವಾದ ಮಾಡಿದ ಮಿತ್ರರಲ್ಲಿ ನಾನೂ ಒಬ್ಬನಾಗಿದ್ದೇನೆ. ಆ ದೃಷ್ಟಿಯಿಂದ ಆ ಕಾರ್ಯ ಸಾಧನೆಗಾಗಿ ನಮ್ಮ ಮಿತ್ರರೆಲ್ಲರೂ ಒಮ್ಮೆ ಮಂಡ್ಯದಲ್ಲಿ ಸೇರಿ ಒಂದು ದೊಡ್ಡ ಕಾನ್‌ಫರೆನ್ಸನ್ನೂ ಸಹ ಮಾಡಿದೆವು. ಆ ಕಾನ್‌ಫರೆನ್ಸ್‌ನಲ್ಲಿ ನೆರೆದಿದ್ದಂಥ ಜನಗಳಲ್ಲಿ ನಮ್ಮ ಮೈಸೂರನ್ನು ಮೈಸೂರಾಗಿಯೇ ಉಳಿಸಿಕೊಳ್ಳಬೇಕೆಂಬ ಉತ್ಸಾಹ, ಹುಮ್ಮಸ್ಸು, ಮನೋಭಾವನೆ ಎಲ್ಲರಲ್ಲೂ ತಾಂಡವವಾಡುತ್ತಿತ್ತು. ಆ ಗುರಿ ಸಾಧನೆಗಾಗಿ ಏನು ಬೇಕಾದರೂ ತ್ಯಾಗಮಾಡುವುದಕ್ಕೆ ಸಹ ಜನಗಳು ಸಿದ್ಧವಾಗಿದ್ದರು. ಅಂಥ ಸನ್ನಿವೇಶವನ್ನು ನಾವು ಉಪಯೋಗಿಸಿಕೊಂಡು ಬೊಂಬಾಯಿಯಲ್ಲಿ ಮತ್ತು ಒರಿಸ್ಸಾದಲ್ಲಿ ನಡೆದಂಥ ಘೋರಕೃತ್ಯಗಳನ್ನು ಇಲ್ಲೂ ನಡೆಸುವುದಕ್ಕೆ ನಮಗೆ ಅವಕಾಶವಿತ್ತು. ಆದರೆ ಅಂಥ ಕೃತ್ಯಗಳನ್ನು ನಡೆಸುವುದರಿಂದ—ಅದು ರಾಷ್ಟ್ರಘಾತಕವಾಗುತ್ತದೆ, ನಮ್ಮ ರಾಷ್ಟ್ರದ ಐಕ್ಯತೆಗೆ ಧಕ್ಕೆ ಬರುತ್ತದೆ, ನಮ್ಮ ಜನರಲ್ಲಿರತಕ್ಕ ಸದ್ಭಾವನೆಯನ್ನು ಕಲಕುವ ಸನ್ನಿವೇಶ ಬರಬಹುದು, ನಮ್ಮ ರಾಷ್ಟ್ರದ ಆಸ್ತಿಪಾಸ್ತಿಗಳು ನಷ್ಟವಾಗಬಹುದು, ಆ ಮಾರ್ಗವನ್ನು ಹಿಡಿಯತಕ್ಕಂಥಾದ್ದು ಸೂಕ್ತವಲ್ಲ ಎಂಬ ಸದ್ಭಾವನೆಯಿಂದ ನಾವು ಬೇರೆ ರೀತಿಯಾದ ಮಾರ್ಗವನ್ನನುಸರಿಸಿ ಈ ವಿಚಾರದಲ್ಲಿ ಯಾವ ಮಾರ್ಗವನ್ನು ಹಿಡಿಯತಕ್ಕದ್ದು ಸೂಕ್ತ ಎಂಬುದನ್ನು ಯೋಚನೆಮಾಡಿ ಆ ರೀತಿ ನಾವು ನಡೆದುಕೊಂಡು ಬರುತ್ತಾ ಇದ್ದೇವೆ. ಈ ಮಧ್ಯೆ ದೇಶದಲ್ಲಿ ಅನೇಕ ವಿಷಯಗಳು ಮುಂದೆ ಬಂದಿವೆ ಮತ್ತು ಸನ್ನಿವೇಶಗಳೂ ಸಹ ನಮ್ಮ ಮುಂದೆ ಬಂದು ನಿಂತಿವೆ. ಇದರಲ್ಲಿ ಬಹು ಮುಖ್ಯವಾದದ್ದು ನಮ್ಮ ನೆರೆ ಪ್ರಾಂತ್ಯವಾದ ಪಾಕೀಸ್ತಾನದಲ್ಲಿ ನಡೆಯುತ್ತಾಯಿರತಕ್ಕ ಘಟನೆ. ಪಾಕೀಸ್ತಾನ, ನಮ್ಮ ನೆರೆಯಪ್ರಾಂತ್ಯದ ಸರ್ಕಾರ, ಬಾಗ್‌ದಾದ್ ಪ್ಯಾಕ್ಟ್, ಸೀಟೋ ಪ್ಯಾಕ್ಟ್ ಮೊದಲಾದ ಪ್ಯಾಕ್ಟುಗಳನ್ನು ಮಾಡಿಕೊಂಡಿದ್ದಾರೆ ; ಮತ್ತು ಅದರ ಜೊತೆಗೆ ಅಮೆರಿಕಾ ದೇಶದವರೂ ಸಹ ಅನೇಕ ಯುದ್ಧದ ಸಾಮುಗ್ರಿಗಳನ್ನು ಸರಬರಾಯಿ ಮಾಡಿ ಅವರಿಗೆ ಬೆಂಬಲವನ್ನು ನೀಡುತ್ತಾ ಇದ್ದಾರೆ. ಅದರ ಧೈರ್ಯದಿಂದಲೋ, ಬಲದಿಂದಲೋ ಅವರು ಗಡಿಗಳಲ್ಲಿ ಅನೇಕ ಕಿರುಕುಳಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇವು ಪದೇ ಪದೇ ನಡೆಯುತ್ತಾ ಇವೆ. ಈ ಸನ್ನಿವೇಶ ಈ ದಿವಸ ನಮ್ಮ ಮುಂದೆ ಇದೆ. ಜೊತೆಗೆ ಈಗ್ಗೆ ಕೆಲವು ದಿವಸಗಳ ಹಿಂದೆ ಅಮೃತಸರದಲ್ಲಿ ನಮ್ಮ ದೇಶದ ನಾಯಕರುಗಳು, ಕಾಂಗ್ರೆಸ್ ಮುಂದಾಳುಗಳು, ಕಾಂಗ್ರೆಸ್ ಕೆಲಸಗಾರರು ಎಲ್ಲರೂ ಸೇರಿ, ಈ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಆ ನಿರ್ಧಾರದ ಪ್ರಕಾರ ಅವರು ಈಗ ಯಾವ ಎಸ್.ಆರ್.ಸಿ. ವರದಿಯ ಪ್ರಕಾರ ದೇಶವನ್ನು ವಿಂಗಡಣೆ ಮಾಡಬೇಕೆಂದು ಇದ್ದಾರೋ ಇದಕ್ಕಿಂತಲೂ ವಿಶಾಲವಾದ ಪ್ರಾಂತ್ಯಗಳನ್ನು ಮಾಡತಕ್ಕದ್ದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬಂದು ಆ ಸಂಬಂಧದಲ್ಲಿ ಒಂದು ನಿರ್ಣಯವನ್ನೂ ಸಹ ಮಾಡಿದ್ದಾರೆ. ಇವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ನಾವು ಯಾವ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂಬ ಒಂದು ಧ್ಯೇಯವನ್ನು ಇಟ್ಟುಕೊಂಡಿದ್ದೇವೆಯೋ ಅದನ್ನು ಸ್ವಲ್ಪಮಟ್ಟಿಗೆ ಈಗ ಬದಲಾಯಿಸಬೇಕಾದ ಪ್ರಮೇಯ ಮತ್ತು ಪರಿಸ್ಥಿತಿಯು ನಮ್ಮ ಮುಂದೆ ಬಂದಿದೆ. ಈ ಎಸ್. ಆರ್. ಸಿ. ವರದಿಯನ್ನು ನಮ್ಮ ಕೇಂದ್ರ ಸರ್ಕಾರದ ಮುಂದೆ ಇಡುವಾಗಲೂ ಸಹ ಅಮೃತಸರದಲ್ಲಿ ಯಾವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆಯೋ ಅದನ್ನು ಹಿನ್ನಲೆಯಾಗಿಟ್ಟುಕೊಂಡೇ ಅವರು ಈ ಬಿಲ್ಲನ್ನು ತಯಾರುಮಾಡಿ ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಯಾವ ದೊಡ್ಡ ಪ್ರಾಂತ್ಯವನ್ನು ಮಾಡಬೇಕೆಂಬ ಒಂದು ನಿರ್ಧಾರವನ್ನು ಅಮೃತಸರದಲ್ಲಿ ತೆಗೆದುಕೊಂಡರೋ ಆ ಉದ್ದೇಶ ಸಾಧನೆಗಾಗಿ ಅದರ ಒಂದು ಅಂಗವಾಗಿ ಈ ದಿವಸ ಈ ಬಿಲ್ಲು ನಮ್ಮ ಮುಂದೆ ಇದೆ ಎಂದರೆ ಖಂಡಿತವಾಗಿಯೂ ತಪ್ಪಾಗಲಾರದು. ಸಂಸ್ಥಾನಗಳನ್ನು ಈ ರೀತಿ ಪುನರ್‌ವಿಂಗಡಣೆ ಮಾಡಬೇಕೆಂಬ ವಿಚಾರ ದೇಶದ ಮುಂದೆ ಬಹು ದಿವಸ ಇದ್ದು, ಜನಗಳಿಗೆ ಸಾಕಾದಷ್ಟು ಅವಕಾಶವನ್ನು ಕೊಟ್ಟು ಈ ವಿಚಾರದಲ್ಲಿ ಅವರಿಗೆ ದೀರ್ಘವಾಗಿ ಯೋಚನೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು, ಸಾಕಾದಷ್ಟು ಅನುಕೂಲತೆಗಳನ್ನು ಸಹ ಕಲ್ಪಿಸಿಕೊಟ್ಟು ತದನಂತರ ಈ ತೀರ್ಮಾನಕ್ಕೆ ಬಂದರು. ಇದೇ ರೀತಿ ಈಗ ಹೊಸದಾಗಿ ಯಾವ ದೊಡ್ಡ ಪ್ರಾಂತ್ಯಗಳನ್ನು ಮಾಡಬೇಕೆಂಬ ಅಭಿಪ್ರಾಯವನ್ನು ದೇಶದ ಮುಂದೆ ಇಟ್ಟಿದ್ದಾರೋ ಅದಕ್ಕೂ ಸಹ ಸಾಕಾದಷ್ಟು ಕಾಲಾವಕಾಶ

(ಶ್ರೀ ಕೆ. ಲಕ್ಕಪ್ಪ.)

ವನ್ನು ಕೊಡಬೇಕು ಎನ್ನತಕ್ಕ ಉದ್ದೇಶದಿಂದ, ಆ ಉದ್ದೇಶವನ್ನು ಕೂಡಲೇ ಜಾರಿಗೆ ತರುವುದಕ್ಕೆ ಹೋಗದೆ, ಪ್ರಥಮ ಹಂತವಾಗಿ ಅವರು ಈ ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಬಿಲ್ಲಿನ ಪ್ರಕಾರ ದೇಶದಲ್ಲಿ ಎಷ್ಟುಮಟ್ಟಿಗೆ ದೊಡ್ಡ ಪ್ರಾಂತ್ಯವನ್ನು ಮಾಡುವುದಕ್ಕೆ ಸಾಧ್ಯವೋ ಅಷ್ಟಾಗಲಿ, ಅದಾದನಂತರ ನೀವು ಯಾವ ಇನ್ನೂ ದೊಡ್ಡ ಪ್ರಾಂತ್ಯಗಳನ್ನು ಮಾಡ ಬೇಕೆಂಬ ಗುರಿಯನ್ನಿಟ್ಟುಕೊಂಡಿದ್ದೀರೋ ಅದನ್ನು ಮುಂದೆ ಸಾಧನೆ ಮಾಡುವುದಕ್ಕೆ ಅವಕಾಶವಿದೆ ಎನ್ನ ತಕ್ಕ ಒಂದು ದೃಷ್ಟಿಯಿಂದಲೇ ಈ ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ ಎಂದು ನನಗೆನ್ನಿಸುತ್ತಾ ಇದೆ. ಮತ್ತು ನಮ್ಮ ಕಾಂಗ್ರೆಸ್ ಸಂಸ್ಥೆಯಿಂದ ಬಂದಿರತಕ್ಕ ಸರ್ಕ್ಯುಲರನ್ನು ಓದಿದರೂ ಸಹ ಈ ಅಭಿಪ್ರಾಯವೇ ಎದ್ದು ಕಾಣುತ್ತದೆ. ಈ ಸನ್ನಿವೇಶ ನಮ್ಮ ಮುಂದೆ ಇರುವುದರಿಂದ ನಾವು ಈ ಬಿಲ್ಲಿನ ವಿಚಾರವಾಗಿ ಸ್ವಲ್ಪ ವಿಶಾಲ ಮನಸ್ಸಿನಿಂದ, ದೇಶದ ಹಿತದೃಷ್ಟಿಯಿಂದ, ದೇಶದ ರಕ್ಷಣೆ ದೃಷ್ಟಿಯಿಂದ, ದೇಶದ ಐಕ್ಯತೆ ದೃಷ್ಟಿ ಯಿಂದ ಇದರ ವಿಷಯದಲ್ಲಿ ವಿಚಾರಮಾಡಬೇಕಾಗಿದೆ. ಹೀಗೆ ನಾವು ವಿಚಾರ ವಿನಿಮಯ ಮಾಡುವ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಗಮನದಲ್ಲಿಟ್ಟು ಅದನ್ನು ಕಾರ್ಯ ಗತ ಮಾಡುವುದಕ್ಕೆ ಈ ಸಭೆಯಲ್ಲಿ ಎಲ್ಲ ಸದಸ್ಯರೂ ಪ್ರಯತ್ನಮಾಡಬೇಕು. ನಾವು ಮೈಸೂರ' ಮೈಸೂ ರಾಗಿಯೇ ಉಳಿಯಬೇಕೆಂದು ವಾದ ಮಾಡುವ ಕಾಲದಲ್ಲಿ ಬಹು ಮುಖ್ಯವಾದ ಒಂದು ಕಾರಣಕ್ಕೆ ಆ ರೀತಿ ಹೇಳುತ್ತಾ ಇದ್ದೆವು. ಅದೇನೆಂದರೆ : ನಮ್ಮ ಮೈಸೂರು ದೇಶ ಎಲ್ಲ ಕ್ಷೇತ್ರಗಳಲ್ಲೂ, ಎಲ್ಲ ರಂಗ ದಲ್ಲೂ ಮುಂದೆ ಬಂದಿದೆ, ನಮ್ಮನ್ನು ಸೇರಲಿರುವ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳು ನಮಗಿಂತ ಆರ್ಥಿಕ ಸ್ಥಿತಿಯಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಹಿಂದೆ ಬಿದ್ದಿವೆ, ಆದುದರಿಂದ ನಮ್ಮ ಪ್ರಗತಿಗೆ ಧಕ್ಕೆ ಬಂದೀತು, ಅದಕ್ಕೆ ಅವಕಾಶವಾಗದ ರೀತಿಯಲ್ಲಿ ನಾವು ಇರ ಬೇಕು, ಈಗ ನಾವು ಪ್ರಗತಿಮಾರ್ಗದಲ್ಲಿ ಯಾವ ವೇಗದಲ್ಲಿ ಹೋಗುತ್ತಾ ಇದ್ದೇವೆಯೋ ಅದೇ ವೇಗ ವನ್ನು ಉಳಿಸಿಕೊಳ್ಳಬೇಕು ಎಂಬ ನನ್ನ ವಾದಕ್ಕೆ ಯಾರೂ ವಿರೋಧಿಗಳಾಗಿಲ್ಲ ಎಂದು ನಾನು ತಿಳಿದಿದ್ದೇನೆ. ನಮ್ಮ ಆಶೆಯಾದರೋ ನಮ್ಮ ಪ್ರಗತಿ ಕುಂಠಿತವಾಗಬಾರದು ಎಂಬುದೇ. ಈ ಬಿಲ್ಲನ್ನು ನಾವು ಒಪ್ಪಿಕೊಳ್ಳುವಾಗಲೂ ಸಹ ನಮ್ಮ ಪ್ರಗತಿಗೆ ಧಕ್ಕೆತರದ ರೀತಿಯಲ್ಲಿ ನಾವು ಅದನ್ನು ಸಾಧಿಸಿ ಕೊಳ್ಳಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಅದ ರಲ್ಲೂ ಮುಖ್ಯವಾಗಿ ನಾವು ಯಾವ ಮೈಸೂರು ದೇಶದ ಜನಗಳ ಪ್ರತಿನಿಧಿಗಳಾಗಿ ಬಂದಿದ್ದೇವೆಯೋ ಆ ಜನಗಳ ಹಿತದೃಷ್ಟಿಯಿಂದ ಅದನ್ನು ನಾವು ಸಾಧಿಸಲೇ ಬೇಕಾ ಗಿದೆ. ಆ ದೃಷ್ಟಿಯಿಂದ ನಮ್ಮ ಮೈಸೂರು ಸಂಸ್ಥಾನ ದಲ್ಲಿ ಯಾವ ರಾಷ್ಟ್ರ ನಿರ್ಮಾಣ ಕಾರ್ಯಗಳು ನಡೆ ಯುತ್ತಾ ಇವೆಯೋ ಅವೆಲ್ಲವನ್ನೂ ಮುಂದೆಯೂ ಉಳಿಸಿ ಕೊಳ್ಳಬೇಕಾಗಿದೆ; ಮತ್ತು ನಾವು ಯಾವ ಒಂದು ವೇಗದಲ್ಲಿ ಹೋಗುತ್ತಾ ಇದ್ದೇವೆಯೋ ಅದೇ ವೇಗದಲ್ಲಿ ಹೋಗುವುದಕ್ಕೂ ಸಹ ರಕ್ಷಣೆಗಳನ್ನು ಇಟ್ಟು ಕೊಳ್ಳಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಹೀಗೆ ಹೇಳುವಾಗ ನಮ್ಮ ಜೊತೆಗೆ ಬಂದು ಸೇರಿಕೊಳ್ಳತಕ್ಕ ಪ್ರಾಂತದ ಜನರಿಗೆ ಅಡಚಣೆಯಾಗದ ರೀತಿಯಲ್ಲಿ ಹೋಗತಕ್ಕದ್ದು ನಮ್ಮ ಕರ್ತವ್ಯ ಮತ್ತು ಅವರೂ ಸಹ ನಮ್ಮಂತೆಯೇ ಅಭಿವೃದ್ಧಿಗೆ ಬರಲು ಯಾವ ಯಾವ ಸಹಾಯ ಸಹಕಾರಗಳನ್ನು ನೀಡಬೇಕಾಗಿದೆಯೋ ಆ ಸಹಾಯ ಸಹಕಾರಗಳನ್ನೂ ಸಹ ನೀಡಬೇಕಾದದ್ದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ನಮ್ಮೊಡನೆ ಬಂದು ಸೇರತಕ್ಕ ಪ್ರಾಂತ್ಯಗಳ ಜನರ ಆರ್ಥಿಕ ಸ್ಥಿತಿ ಮತ್ತು ಅವರ ಇತರ ಕೆಲಸಕಾರ್ಯಗಳು ನಮ್ಮ ಸರಿಸಮಾನಕ್ಕೆ ಬರಲು ಅಲ್ಲಿಗೆ ಸಹ ಹೇರಳವಾಗಿ ಹಣವನ್ನು ಖರ್ಚು ಮಾಡಬೇಕಾಗಿದೆ. ಈ ಹಣವನ್ನು ನಾವು ಕೇಂದ್ರ ಸರ್ಕಾರದವರಿಂದ ಪಡೆದು ಅವರಿಗೂ ಸಹ ನಮ್ಮ ಜೊತೆ ಯಲ್ಲೇ ಮುಂದುವರಿಯುವುದಕ್ಕೆ ಒಂದು ಅವಕಾಶ ವನ್ನು ಕಲ್ಪಿಸಿಕೊಡಬೇಕಾಗಿದೆ. ಇದನ್ನು ನಮ್ಮ ಮಿತ್ರ ರೆಲ್ಲರೂ ಒಪ್ಪುತ್ತಾರೆ ಎಂದು ನಂಬಿದ್ದೇನೆ. ನಮ್ಮ ಪ್ರಗತಿಗೆ ಕುಂದಕ ಬರದ ರೀತಿಯಲ್ಲಿ ಅವರ ಪ್ರಗತಿಯೂ ಸಹ ಮುಂದುವರಿಯುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ನಮ್ಮ ಸರ್ಕಾರ ಮತ್ತು ನಾವುಗಳೆಲ್ಲರೂ ಒತ್ತಾಯ ಹಾಕಿ ಕೇಂದ್ರದಿಂದ ಹೆಚ್ಚು ಹಣವನ್ನು ಪಡೆದು ನಾವೆಲ್ಲರೂ ಸರ್ವತೋಮುಖವಾಗಿ ಅಭಿ ವೃದ್ಧಿಗೆ ಬರುವುದಕ್ಕೆ ಸದವಕಾಶವನ್ನು ಕಲ್ಪಿಸಿಕೊಳ್ಳ ಬೇಕಾಗಿದೆ. ಅದಕ್ಕೆ ನಾವೆಲ್ಲರೂ ಪ್ರಯತ್ನ ಮಾಡೋಣ ಎಂದು ಹೇಳಿ ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

3 P.M.

ಈ ದೊಡ್ಡ ಪ್ರಾಂತವಾಗಬೇಕು ಎಂದು ನಮ್ಮ ನಾಯಕರು ಹೇಳುವಾಗ ನಾವು ಸಹ ಯೋಚನೆ ಮಾಡಿ ದರೆ ದಕ್ಷಿಣ ಪ್ರದೇಶವಾಗಬೇಕು ಎಂದು ನಮಗೆಲ್ಲರಿಗೂ ಎನ್ನಿಸುತ್ತದೆ. ದಕ್ಷಿಣ ಪ್ರದೇಶವೆನ್ನುವಾಗ ಕೇರಳದ ಪ್ರಶ್ನೆ ಸಹ ನಮ್ಮ ಮುಂದೆ ಬರುತ್ತದೆ. ಆ ಕೇರಳ ಪ್ರದೇಶ ಮದರಾಸಿನೊಡನೆ, ಅಥವಾ ಮೈಸೂರಿ ನೊಡನೆ ಸೇರಬೇಕೇ ಅಥವಾ ಕೇರಳ, ಮದರಾಸು, ಮೈಸೂರು, ಆಂಧ್ರ ಮತ್ತು ಇವೆಲ್ಲವನ್ನೂ ಸೇರಿಸಿ ಒಂದು ಪ್ರಾಂತ ಮಾಡಬೇಕೇ ಎಂಬ ವಾದ ವಿವಾದಗಳು ನಮ್ಮ ಮುಂದೆ ಇವೆ. ಕೇರಳದ ಹೆಸರು ಬಂದಾಗ ಅನೇಕರು ಕೇರಳ ಪ್ರಾಂತವನ್ನು ನಮ್ಮ ಜೊತೆಯಲ್ಲಿ ಸೇರಿಸಿಕೊಳ್ಳುವುದು ಸೂಕ್ತವೇ ಎಂದು ಯೋಚನೆ ಮಾಡುತ್ತಾರೆ. ಕೇರಳದ ಪ್ರಶ್ನೆ ಬಂದಾಗ ನನಗೂ ಹಾಗೆಯೇ ಅನ್ನಿಸುತ್ತದೆ. ಇಡೀ ಇಂಡಿಯಾ ದೇಶದ ಅಭ್ಯುದಯ ದೃಷ್ಟಿಯಿಂದ, ಇಡೀ ಇಂಡಿಯಾ ದೇಶದ ರಕ್ಷಣೆಯ ದೃಷ್ಟಿಯಿಂದ, ಇಂಡಿಯಾ ದೇಶದ ಐಕ್ಯತೆಯ ದೃಷ್ಟಿಯಿಂದ ಈಗ ಕೇರಳದಲ್ಲಿ ಉದ್ಭವಿಸಿರ ತಕ್ಕ ಕಷ್ಟಪರಿಸ್ಥಿತಿಯನ್ನು ಇಂಡಿಯಾ ದೇಶದ ಪ್ರಜೆಗಳಾದ ನಾವೆಲ್ಲರೂ ಪರಿಶೀಲಿಸಿ ಪರಿಹಾರ ಮಾಡಬೇಕಾದದ್ದು ನಮ್ಮ ಕರ್ತವ್ಯ. ನಾವು ಈ ವಿಷಯದಲ್ಲಿ ಮನಸ್ಸು ಕೊಡಬೇಕು ಎಂದು ನನಗನ್ನಿ ಸುತ್ತದೆ. ಕೇರಳದಲ್ಲಿ ಪರಿಸ್ಥಿತಿ ಬಹಳ ಉಲ್ಬಣಿ ಸಿದೆ. ಅಲ್ಲಿ ಯಾವ ಭದ್ರವಾದ ಸರ್ಕಾರವೂ ಸಹ ಉಳಿಯುವುದಕ್ಕೆ ಈಗಿನ ಪರಿಸ್ಥಿತಿಯಲ್ಲಿ ಅವಕಾಶವಿಲ್ಲ. ಅಲ್ಲಿ ಭದ್ರವಾದ ಸರ್ಕಾರ ಉಳಿಯುವುದಕ್ಕೆ ಅವಕಾಶ ವಿಲ್ಲದೆ ಆರು ತಿಂಗಳಿಗೊಂದು ಸಲ, ವರ್ಷಕ್ಕೊಂದು ಸಲ ಸರ್ಕಾರ ಬದಲಾಣೆಯಾಗುತ್ತ ಇರುವುದು ನಮಗೆ ಗೊತ್ತಿದೆ. ಅದರ ಪರಿಣಾಮವಾಗಿ ಈಗ ಕೇಂದ್ರ ಸರ್ಕಾರದವರು ಪೂರ್ಣಾಡಳಿತವನ್ನು ತಮ್ಮ ಕೈಯಲ್ಲಿಟ್ಟುಕೊಂಡು ಸರ್ಕಾರವನ್ನು ನಡೆಸಬೇಕಾದ ಪರಿಸ್ಥಿತಿ ಬಂದಿದೆ. ಅದರಲ್ಲಿಯೂ ಅಲ್ಲಿ ಕಮ್ಯೂನಿಸ್ಟ್ ಜನರ ಪ್ರಭಾವ ಹೆಚ್ಚಾಗಿದೆ ಎಂಬುದು ನಮಗೆಲ್ಲ ಗೊತ್ತಿದೆ. ಕಾಂಗ್ರೆಸ್ ಪಕ್ಷದವರಿಗಾಗಲಿ, ಇತರ ಪಕ್ಷಗಳಿಗಾಗಲಿ, ಪ್ರಜಾ ಸೋಷಿಯಲಿಸ್ಟ್, ಮುಂತಾದ ಪಕ್ಷಗಳಿಗಾಗಲಿ, ಕಮ್ಯೂನಿಸಂನಲ್ಲಿ ನಂಬಿಕೆ ಇಲ್ಲ. ನಮ್ಮ ಪ್ರದೇಶದಲ್ಲಿ ಕಮ್ಯೂನಿಸಂ ಪ್ರಬಲವಾಗುತ್ತಿರುವುದನ್ನು ತಡೆಗಟ್ಟಬೇಕಾದದ್ದು

ಎಲ್ಲರ ಜವಾಬ್ದಾರಿಯಾಗಿದೆ. ಹೀಗಿರುವಾಗ ಕೇರಳವನ್ನು ಮೈಸೂರು ದೇಶದಲ್ಲಿ ಸೇರಿಸಿಕೊಳ್ಳೋಣವೆಂದು ಯೋಚನೆಮಾಡುವಾಗ ಅನೇಕರಿಗೆ ಸ್ವಲ್ಪ ಶಂಕೆ ಉದ್ಭವಿಸುತ್ತದೆ. ಆ ಶಂಕೆ ನನಗೂ ಸ್ವಲ್ಪವುಟ್ಟಿಗಿದೆ. ಒಂದು ಪಕ್ಷ ಕೇರಳವನ್ನು ನಮ್ಮ ಮೈಸೂರು ದೇಶಕ್ಕೆ ಆ ಸೇರಿಸಿಕೊಂಡರೆ, ಕಮ್ಯೂನಿಸ್ಟ್ ಪ್ರಭಾವವಿರತಕ್ಕ ದೇಶವನ್ನು ಸೇರಿಸಿಕೊಂಡರೆ, ನಮ್ಮಲ್ಲಿಯೂ Communism ಪ್ರಬಲವಾಗಿ ದೇಶದ ಹಿತಕ್ಕೆ ಧಕ್ಕೆ ಬಂದೀತು ಎಂದು ನನ್ನ ಮಿತ್ರರನೇಕರಲ್ಲಿ ಶಂಕೆ ತೋರುತ್ತಿದೆ. ನನಗಾದರೂ ಹಾಗೆಯೇ ಅನ್ನಿಸುತ್ತದೆ. ಒಂದು ಪಕ್ಷ ಇಡೀ ಕೇರಳವನ್ನು ನಮ್ಮ ಮೈಸೂರು ದೇಶಕ್ಕೆ ಸೇರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಹೋದರೂ ಅದನ್ನು ವಿಭಾಗ ಮಾಡಿ ನಮ್ಮ ಮೈಸೂರಿಗೆ ಸಮೀಪದಲ್ಲಿರತಕ್ಕ ಅರ್ಧ ಭಾಗವನ್ನು ಮೈಸೂರಿಗೆ ಸೇರಿಸಿಕೊಂಡು ಇನ್ನರ್ಧ ಭಾಗವನ್ನು ಮದರಾಸಿಗೆ ಸೇರಿಸಿಕೊಂಡು ಅಲ್ಲಿನ ಪರಿಸ್ಥಿತಿಯನ್ನು ಪರಿಹಾರಮಾಡಿ ಅದರಿಂದ ಇಡೀ ದೇಶದ ರಕ್ಷಣೆಗೆ ಅವಕಾಶವಾಗುವ ರೀತಿಯಲ್ಲಿ ಒಂದಲ್ಲ ಒಂದು ವಿಧದಲ್ಲಿ ಇದನ್ನು ಬಗೆಹರಿಸುವ ಕಾರ್ಯ ನಮ್ಮ ಮುಂದೆ ಇದೆ ಎಂದು ಹೇಳುತ್ತಿದ್ದೇನೆ. ನಾವು ದಕ್ಷಿಣ ಪ್ರದೇಶವೆಂಬ ಪ್ರಶ್ನೆಯನ್ನು ಯೋಚನೆ ಮಾಡುವಾಗ ಇದೆಲ್ಲವನ್ನೂ ಮುಂದಿಟ್ಟುಕೊಂಡು ನಾವುಗಳು ಆಲೋಚಿಸಬೇಕಾಗಿದೆ. ಈ ದೃಷ್ಟಿಯಿಂದಲೂ ಸಹ ನಮ್ಮ ನಾಯಕರುಗಳು ವಿಶಾಲ ದೇಶವಾಗಬೇಕು ಎಂಬುದಾಗಿ ಅಭಿಪ್ರಾಯಪಡುತ್ತಿದ್ದಾರೆಂದು ನನಗನ್ನಿಸುತ್ತದೆ. ಅದರಲ್ಲಿಯೂ ನಾನು ಮೇಲೆ ಹೇಳಿದಹಾಗೆ ನಮ್ಮ ನೆರೆಯ ರಾಷ್ಟ್ರವಾದ ಪಾಕಿಸ್ತಾನವು (Unitary States) ದೊಡ್ಡ ಸಂಸ್ಥಾನಗಳನ್ನು ಮಾಡಿಕೊಂಡು ಒಂದು ರೀತಿಯಲ್ಲಿ ಹೋಗುತ್ತಿರುವಾಗ ನಾವೂ ಸಹ ಇಲ್ಲಿಯೂ ದೊಡ್ಡ ದೊಡ್ಡ ಪ್ರಾಂತಗಳನ್ನು ಮಾಡಿಕೊಂಡು ನಮ್ಮ ರಾಷ್ಟ್ರವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಡಬೇಕು. ಈ ದೃಷ್ಟಿಯಿಂದಲೂ ಮತ್ತು ನಮ್ಮ ಮಿತ್ರರಾದ ಶ್ರೀಮಾನ್ ವೀರಣ್ಣಗೌಡರು ಹೇಳಿದ ಹಾಗೆ ದೇಶದ ಮುಂದೆ ಇರತಕ್ಕ ದೊಡ್ಡ ದೊಡ್ಡ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತ ಮಾಡುವ ದೃಷ್ಟಿಯಿಂದಲೂ ಸಹ ದೊಡ್ಡ ಪ್ರಾಂತಗಳನ್ನು ಮಾಡಬೇಕಾದದ್ದು ಅಗತ್ಯವೆಂದು ನಮ್ಮೆಲ್ಲರಿಗೂ ಸಹ ಅನ್ನಿಸುತ್ತದೆ.

ಈ S. R. ಬಿಲ್ಲನ್ನು ನಮ್ಮ ಮುಂದೆ ಇಡುವಾಗಲೂ ಕೂಡ ಕೇಂದ್ರ ಸರ್ಕಾರದವರು Zonal Councils ಮಾಡಬೇಕು ಎಂದು ಯೋಚನೆ ಮಾಡಿ ಅದನ್ನು ಇದರಲ್ಲಿ ಅಳವಡಿಸಿದ್ದಾರೆ. ಅವರು Zonal Councils ಮಾಡತಕ್ಕ ಉದ್ದೇಶವಾದರೂ ಯಾವ ದೊಡ್ಡ ಪ್ರಾಂತಗಳನ್ನು ಮಾಡಬೇಕೆಂಬ ಅವಸರದ ನಿರ್ಧಾರವನ್ನು ಅವರು ತೆಗೆದುಕೊಂಡಿದ್ದರೋ ಅದನ್ನು ಮುಂದೆ ಕಾರ್ಯಗತ ಮಾಡುವುದಕ್ಕೆ ಈವಾಗ ಈ ರೀತಿಯ ತಳಹದಿಯನ್ನು ಹಾಕಿಕೊಂಡಿದ್ದಾರೆ ಎಂದು ನನಗನ್ನಿಸುತ್ತದೆ.

ನಮ್ಮ ಮುಖ್ಯ ಮಂತ್ರಿಗಳೂ ಸಹ ಈ Zonal Council ವಿಚಾರದಲ್ಲಿ ಮಾತನಾಡುವಾಗ ಎಲ್ಲ ಅಧಿಕಾರವೂ ಕೇಂದ್ರದಲ್ಲಿ ಕೇಂದ್ರೀಕೃತವಾಗುತ್ತಿದೆ, ಅದು ಆ ರೀತಿ ಕೇಂದ್ರೀಕೃತವಾಗದೆ ಸಂಸ್ಥಾನಕ್ಕೂ ಸಹ ಹೆಚ್ಚಿನ ಅಧಿಕಾರ ಬರಬೇಕು, ಈ ದೃಷ್ಟಿಯಿಂದ Regional Councils ಗೆ ಹೆಚ್ಚು executive power ಕೊಡಬೇಕೆಂದು ತಮ್ಮ ಭಾಷಣದಲ್ಲಿ ವಾದ ಮಾಡಿದ್ದಾರೆ. ಅದು ನ್ಯಾಯವೆಂದು ನನಗನ್ನಿಸುತ್ತದೆ. ಆ ರೀತಿ ಈ Regional Councils ಗಳಿಗೆ ಹೆಚ್ಚು executive power ಕೊಟ್ಟರೆ ಸ್ವಲ್ಪ ಹೆಚ್ಚು ಕಡಿಮೆ ಅದೇ ಒಂದು ರೀತಿಯಾದ ಸರ್ಕಾರವಾಗುತ್ತದೆ. ಅದನ್ನು ನಾವು ದೊಡ್ಡ ಸರ್ಕಾರವೆನ್ನುವ ರೀತಿಯಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕಾದರೆ ಅದಕ್ಕೆ ಇನ್ನೂ ಹೆಚ್ಚು ಅಧಿಕಾರವನ್ನು ಕೊಟ್ಟು ಇಡೀ ದಕ್ಷಿಣ ಪ್ರದೇಶಕ್ಕೆಲ್ಲ ಒಂದು ಸರ್ಕಾರವನ್ನು ಮಾಡಿಕೊಂಡು, ಒಂದು legislature ಮಾಡಿಕೊಂಡರೆ ಅದೇ ದಕ್ಷಿಣ ಪ್ರದೇಶವೆನ್ನಿಸಿಕೊಳ್ಳಬಹುದು. ಈ ರೀತಿಯಾಗಿ ಮುಂದೆ ದೊಡ್ಡ ಪ್ರಾಂತವನ್ನು ಮಾಡಬೇಕೆಂಬ ಉದ್ದೇಶದಿಂದಲೇ ಈ ರೀತಿ ಬಿಲ್ಲಿನಲ್ಲಿ ಅಳವಡಿಸಿಕೊಂಡಿದ್ದಾರೆನ್ನಿಸುತ್ತದೆ. ಈ ರೀತಿ ಮುಂದೆ ದೊಡ್ಡ ಪ್ರಾಂತವಾಗುವುದಕ್ಕೆ ಈ ಕೌನ್ಸಿಲ್‌ಗಳು ಸಹಕಾರಿಯಾಗಲಿ ಎಂದು ಈ ಸಂದರ್ಭದಲ್ಲಿ ನಾನು ಅಭಿಪ್ರಾಯಪಡುತ್ತೇನೆ.

ಮತ್ತು S. R. ಬಿಲ್ ಪ್ರಕಾರ ವಿಧಾನಪರಿಷತ್ತು ಮತ್ತು ವಿಧಾನಸಭೆ ಇವೆರಡೂ ಇರಬೇಕೆಂಬ ಅಭಿಪ್ರಾಯವಿದೆ. ಎರಡೂ ಇರಬೇಕೇ ಒಂದು ಮಾತ್ರವಿರಬೇಕೇ ಎಂಬ ವಿಷಯದಲ್ಲಿ ವಾದ ವಿವಾದಗಳು ನಮ್ಮಲ್ಲಿ ನಡೆದಿವೆ. ಆದರೆ ಈ ಬಿಲ್ಲಿನಲ್ಲಿ ಎರಡೂ ಇರತಕ್ಕದ್ದು ಸೂಕ್ತವೆಂದು ಅಭಿಪ್ರಾಯಪಟ್ಟಿದ್ದಾರೆ. ಇಂಡಿಯಾ ದೇಶದ ಒಂದು ಪ್ರಾಂತ ವಿನಾ ಉಳಿದೆಲ್ಲ ಪ್ರಾಂತಗಳಲ್ಲೂ ಎರಡು ಮನೆಗಳು (Houses) ಇರುವುದಕ್ಕೆ ಈ ಬಿಲ್ಲಿನಲ್ಲಿ ಅವಕಾಶವನ್ನು ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ಮೈಸೂರು ದೇಶಕ್ಕೂ ಸಹ ಅವಕಾಶವನ್ನು ಕೊಟ್ಟಿದ್ದಾರೆ. ಹೀಗೆ ಕೊಟ್ಟಿರುವ ಅವಕಾಶವನ್ನು ನಾವು ಕಳೆದುಕೊಳ್ಳದೆ ಅದನ್ನು ಉಪಯೋಗಿಸಿಕೊಂಡು ಮುಂದೆ hasty legislations ಆಗುವುದಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಈ ಎರಡು ಸಭೆಗಳನ್ನೂ ಸಹ ಉಳಿಸಿಕೊಂಡು ಅವುಗಳನ್ನು ನಡೆಸಿಕೊಂಡು ಹೋಗತಕ್ಕದ್ದು ಸೂಕ್ತವೆಂದು ನನಗನ್ನಿಸುತ್ತದೆ. ಜೊತೆಗೆ ಮುಂದೆ ಈಗಿರುವ ಪ್ರಾಂತಕ್ಕಿಂತಲೂ ಇನ್ನೂ ದೊಡ್ಡದಾದ ಪ್ರಾಂತವಾಗುವ ಸಂದರ್ಭದಲ್ಲಿ ಈ ಎರಡು ಸಭೆಗಳೂ ಅತ್ಯಗತ್ಯವಾಗಿ ಬೇಕಾಗುತ್ತವೆ. ಆ ದೃಷ್ಟಿಯಿಂದಲೂ ಸಹ ನಾವು ಈ ಎರಡು ಸಭೆಗಳನ್ನೂ ಉಳಿಸಿಕೊಂಡು ಹೋಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

The House adjourned for Lunch at Ten Minutes past Three of the Clock and reassembled at Forty-five Minutes past Three of the Clock.

[MR. SPEAKER in the Chair]

Sri Mulka GOVINDA REDDY (Chitaldrug).—I would like to know till what time the House is going to sit today, because there are any number of members desirous of speaking on the Bill. I suggest that this general discussion may be continued tomorrow also.

Mr. SPEAKER.—We shall see.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ರಾಜ್ಯಗಳ ಪುನರ್ವಿಂಗಡಣೆಗೆ ಸಂಬಂಧಪಟ್ಟ ಹಾಗೆ ಪಾರ್ಲಿಮೆಂಟಿನ ಮುಂದೆ ಚರ್ಚೆಯಾಗುತ್ತಿರುವ ಈ ಮಸೂದೆಯನ್ನು ಈ ಸಭೆ ಚರ್ಚಿಸುತ್ತಿದೆ. ಪ್ರಾಂತಗಳ ಪುನರ್ವಿಂಗಡಣೆ ಕಳೆದ ಅರ್ಧ ಶತಮಾನದಿಂದ ಇಂಡಿಯಾ ದೇಶದ ಜನತೆಯ ಮನಸ್ಸಿನಲ್ಲಿದ್ದಂಥ ಮಹಾ ಸಮಸ್ಯೆಗಳಲ್ಲಿ ಒಂದು. ಈ ಬಗ್ಗೆ ಸಾಕಷ್ಟು ವಾದ ವಿವಾದಗಳು, ಚರ್ಚೆ, ಹೋರಾಟ ಮತ್ತು ತ್ಯಾಗ ಅನೇಕವಾಗಿ ನಡೆದವು. ಇದಾದಮೇಲೆ ಹತ್ಯಾಕಾಂಡವೂ ಕೂಡ ನಡೆಯಿತು. ನಡೆದು ಈದಿನ ಈ ಸಮಸ್ಯೆ ಒಂದು ಮಸೂದೆಯ ರೂಪವನ್ನು ತಾಳಿ ಪುನಃ ಈ ನಮ್ಮ ಸಭೆಯ ಮುಂದೆ ಬಂದಿದೆ. ನಾನು ಈ ಮಸೂದೆಯಲ್ಲಿ ಒಳಗೊಂಡಿರತಕ್ಕಂಥ ಅಂಶಗಳನ್ನು ಸೂಚಿಸುವ ಮೊದಲು ಈ ಮಸೂದೆಯ ಹಿನ್ನೆಲೆಯಲ್ಲಿ ಮತ್ತು ಪ್ರಾಂತ ಪುನರ್ವಿಂಗಡಣೆಯ ಆಯೋಗದವರು ವರದಿಯನ್ನು ಸಲ್ಲಿಸಿದನಂತರ ನಮ್ಮ ದೇಶದಲ್ಲುಂಟಾದ ಒಂದು ಗೊಂದಲ ಪರಿಸ್ಥಿತಿಯ ಬಗ್ಗೆ ಒಂದೆರಡು ವಿಷಯಗಳನ್ನು ಮಾತನಾಡಿ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಕಳೆದ ಅಕ್ಟೋಬರ್ ಹತ್ತನೆಯ ತಾರೀಖು ಪ್ರಾಂತ ಪುನರ್ವಿಂಗಡಣಾ ಸಮಿತಿ ತನ್ನ ವರದಿಯನ್ನು ಒಪ್ಪಿಸಿತು. ಸಹಜವಾಗಿ ಪ್ರಾಂತ ಪುನರ್ವಿಂಗಡಣಾ ಸಮಿತಿ ಸಲಹೆಗಳ ಬಗ್ಗೆ ನಾನಾ ರೀತಿಯ ಪ್ರತಿಕ್ರಿಯೆಗಳು ದೇಶದಲ್ಲುಂಟಾಗಿವೆ. ಯಾವ ರೀತಿಯಲ್ಲಿ ಆ ಸಲಹೆಗಳನ್ನು ಕಾರ್ಯಗತ ಮಾಡಬೇಕೆಂಬ ಬಗ್ಗೆ ನಾನಾ ವಿವಾದಗಳೆದ್ದಿವೆ. ಅನೇಕರು ಈ ಪ್ರಾಂತ ಪುನರ್ವಿಂಗಡಣೆ ಈಗ ಹೊಸದು, ಅಕಾಲಿಕ, ಮುಂದೆ ಹಾಕತಕ್ಕದ್ದು ಸರಿಯಾದ ವಿವೇಚನಾಯುತವಾದ ಮಾರ್ಗ ಎಂದು ವಾದಿಸಿದರು. ಕೆಲವರು ಇದು ಆಗಲೇ ಬೇಕಾದುದು, ಬಹಳ ಮುಂಚೆಯೇ ಈ ಕೆಲಸ ನೆರವೇರ ಬೇಕಾಗಿತ್ತು, ತಡವಾಗಿದೆ, ತಕ್ಷಣ ಇದನ್ನು ಕಾರ್ಯಗತ ಮಾಡಬೇಕು ಎಂದು ಒತ್ತಾಯ ಪೂರ್ವಕವಾಗಿ ವಾದವನ್ನೂ ಕೂಡ ಮಾಡಿದರು. ಈ ಸಂದರ್ಭದಲ್ಲಿ ಈ ವರದಿಗಳನ್ನು ಕಾರ್ಯಗತ ಮಾಡತಕ್ಕ ಒಂದು ಗುರುತರವಾದ ಜವಾಬ್ದಾರಿಯನ್ನು ಹೊತ್ತಿದ್ದ ಭಾರತದ ಕೇಂದ್ರ ಸರ್ಕಾರ, ಮುಖ್ಯವಾಗಿ ಶ್ರೀ ನೆಹ್ರೂ ಅವರು ಈ ವಿಷಯದಲ್ಲಿ ಒಂದು ದೊಡ್ಡ ತಪ್ಪನ್ನು ಮಾಡಿದರೆಂದು ಹೇಳಬೇಕಾಗಿದೆ. ವಾದ ವಿವಾದಗಳಿಗೆ ಮತ್ತೊಂದು ಅರ್ಥವನ್ನು ಕಲ್ಪಿಸಿ ಕೆಲವು ತೀರ್ಮಾನಗಳನ್ನು ಜನತೆಯ ಅಭಿಪ್ರಾಯದ ವಿರುದ್ಧವಾಗಿ ಅವರು ಕೈಕೊಂಡರು. ಇಂತಹ ಒಂದು ತೀರ್ಮಾನವನ್ನು ಜನವರಿ 14ನೆಯ ತಾರೀಖು ಕೈಗೊಳ್ಳಲಾಯಿತು. ಆ ತೀರ್ಮಾನವನ್ನು ತೆಗೆದುಕೊಂಡ ಕ್ಷಣದಿಂದಲೇ ಮುಂಬಯಿನಲ್ಲಿ ಜನತೆ ಆಕ್ರೋಶದಿಂದ ಆ ರೀತಿಯ ತೀರ್ಮಾನದ ವಿರುದ್ಧವಾಗಿ ಪ್ರಶಾಂತವಾಗಿ ಪ್ರತಿಭಟನೆಯನ್ನು ತೋರಿಸಿತು. ಇಂತಹ ಒಂದು ಪ್ರತಿಭಟನೆಯಿಂದ ಶ್ರೀ ಮುರಾರ್ಜಿ ದೇಶಾಯಿಯವರ ಸರ್ಕಾರ ತಮ್ಮ ಲಾಠಿ, ಗುಂಡು, ಟಿಯರ್ ಗ್ಯಾಸ್ ಇತ್ಯಾದಿಗಳ ಪ್ರತಿಕ್ರಿಯೆಯನ್ನು 5-6-7 ದಿವಸಗಳು ಅವ್ಯಾಹತವಾಗಿ ಹತ್ತಿಕ್ಕಿದ್ದ ಪರಿಣಾಮವಾಗಿ ಸುಮಾರು 77 ಜನ ಮೃತರಾದರು, 72 ಜನರಿಗೆ ಗುಂಡಿನ ಗಾಯಗಳಾದುವು, ಇಬ್ಬರು ಟಿಯರ್ ಗ್ಯಾಸ್‌ನಿಂದ, ಇಬ್ಬರು ಚೂರಿ ಇರಿತದಿಂದ ತೊಂದರೆಗೀಡಾದರು ; ಹೀಗೆ ಜನರ ಸಾವು ನೋವುಗಳುಂಟಾದುವು. ಹಾಗೆಯೇ ಬಿಹಾರದ ಪೂರಿಯಲ್ಲಿ ಕೂಡ ಘಟನೆಗಳು ನಡೆದವು. ಇಂತಹ ಒಂದು ಹತ್ಯಾಕಾಂಡ ದೇಶದಲ್ಲಿ ನಡೆಯುವುದಕ್ಕೆ—ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ—ಶ್ರೀ ನೆಹ್ರೂ ಅವರ ಮತ್ತು ಅವರ ಸಹೋದ್ಯೋಗಿಗಳು ಮತ್ತು ಅವರ ಸರ್ಕಾರದವರು ಹೊಣೆ ಎಂದು. ಶ್ರೀ ನೆಹ್ರೂ ಅವರು ಈಚೆಗೆ ತಮ್ಮ ಒಂದು ಭಾಷಣದಲ್ಲಿ "ಈ ಘಟನೆ ನನಗೆ ವೈಯಕ್ತಿಕವಾಗಿ ಕೆಲವೊಂದು ರೀತಿಯಲ್ಲಿ ಸೋಲಾದಂತಾಗಿದೆ; ಮತ್ತು ಇದು ನನ್ನ ಬಗ್ಗೆ ಒಂದು ಟ್ರಾಜೆಡಿ" ಎಂದು ಕೂಡ ಹೇಳಿಕೊಂಡಿದ್ದಾರೆ. ಆ ಒಂದು ದೃಷ್ಟಿಯಿಂದ ಈ ದುರಂತಕ್ಕೆ ತಾವೇ ಕಾರಣವೆಂದು ಭಾವಿಸಿ ಈಗ ಬಹುಶಃ ಸ್ವಲ್ಪ ಮಟ್ಟಿಗೆ ಈ ವಿಚಾರದಲ್ಲಿ ಜಾಗ್ರತಿಯನ್ನು ವಹಿಸಿದ್ದಾರೆಂದು ಕಾಣುತ್ತದೆ.

ಇನ್ನೊಂದು ಮುಖ್ಯವಾದ ಅಂಶವೇನೆಂದರೆ, ಇಂಥ ದುರ್ಘಟಣೆಗಳು ನಡೆಯದಂತೆ ಅವರು ತಡೆಯಬಹುದಾಗಿತ್ತು. ಈ ವಿಷಯದಲ್ಲಿ ನಾನು ಈ ಹೊತ್ತೂ ಕೂಡ ಮುಂಬಯಿಯನ್ನು ಪ್ರತ್ಯೇಕ ಒಂದು ಪ್ರಾಂತವಾಗಿ ರಚನೆ ಮಾಡಬೇಕೆಂದು ಸಲಹೆ ಮಾಡಿರುವುದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ; ಮತ್ತು ಆ ಬಗ್ಗೆ ನನ್ನ ಪ್ರತಿಭಟನೆ ಕೂಡ ಇದೆ. ಮುಂಬಯಿ ಮಹಾರಾಷ್ಟ್ರದ ಒಂದು ಅಂಗ, ಮಹಾರಾಷ್ಟ್ರ ಪ್ರಾಂತ ಮುಂಬಯಿ ವಿನಾ ಆರ್ಥಿಕವಾಗಿ ಮತ್ತು ಇತರ ಎಲ್ಲ ವಿಧದಲ್ಲೂ ಮುಂದುವರಿಯಲು ಸಾಧ್ಯವಿಲ್ಲ. ಆದ್ದರಿಂದ ಮುಂಬಯಿಯನ್ನು ಬೇರೆ ಪ್ರಾಂತವಾಗಿ ಮಾಡುತ್ತೇವೆ, ಕೇಂದ್ರದ ಒಂದು ಪ್ರದೇಶವನ್ನಾಗಿ ಮಾಡಿ ಆಡಳಿತ ನಡೆಸಿಕೊಂಡು ಹೋಗುತ್ತೇವೆ ಎಂಬ ಭಾವನೆಯಿರುವುದು ತೀರ ತಪ್ಪು ಭಾವನೆ, ಪುನಃ ಜನತೆಯನ್ನು ಪ್ರತ್ಯೇಕಿಸುವುದಕ್ಕೆ ಅವಕಾಶ ಕೊಡುವಂಥಾದ್ದು. ಇದನ್ನು ಕೈಬಿಟ್ಟು ಮುಂಬಯಿಯನ್ನು ಒಳಗೊಂಡ ಮಹಾರಾಷ್ಟ್ರವನ್ನು ರಚಿಸುವುದು ಕೇವಲ ವಿವೇಕ ಮತ್ತು ನ್ಯಾಯವಾದದ್ದು ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಸ್ವಾಮಿ, ಈ ಮಸೂದೆಯಲ್ಲಿ ಅಡಕವಾಗಿರತಕ್ಕ ವಿಷಯಗಳಲ್ಲಿ ಎರಡು ಮುಖ್ಯವಾದ ವಿಷಯಗಳಿವೆ. ಮೊದಲನೆಯದು ಈಗಿರತಕ್ಕ ಪ್ರಾಂತಗಳನ್ನು ಪುನಃ ವಿಂಗಡಣೆ ಮಾಡಿ ನೂತನ ಪ್ರಾಂತಗಳನ್ನು ರಚನೆ ಮಾಡತಕ್ಕ ವಿಷಯ ; ಅದಕ್ಕೆ ಸಂಬಂಧಪಟ್ಟ ಹಾಗೆ ರಾಜ್ಯಾಂಗವನ್ನು ತಿದ್ದುಪಡಿ ಮಾಡತಕ್ಕ ವಿಷಯ ಎರಡನೆಯದು. ಈ ಎರಡು ಮುಖ್ಯ ವಿಷಯಗಳನ್ನು ಈ ಮಸೂದೆ ಒಳಗೊಂಡಿದೆ. ಪ್ರಾಂತ ಪುನರ್ವಿಂಗಡಣೆಗೆ ಸಂಬಂಧಪಟ್ಟ ಹಾಗೆ ಇಲ್ಲಿ ಮೊದಲನೆಯದಾಗಿ ಒಂದು ವಿಷಯವನ್ನು ನಾನು ಪ್ರಸ್ತಾಪಿಸಬೇಕೆಂದಿದ್ದೇನೆ. ಕೇಂದ್ರದವರು ಈಗ ಮುಖ್ಯವಾಗಿ ಪ್ರಾಂತಗಳಿಗಿದ್ದಂಥ ಒಳಭೇದ, A.B.C. ಭೇದವನ್ನು ತೊಡೆದುಹಾಕುವುದಕ್ಕೆ ಎಸ್. ಆರ್. ಸಿ. ಸಲಹೆಯಂತೆ ಈ ಮಸೂದೆಯಲ್ಲಿ ಪ್ರಯತ್ನ ಪಟ್ಟಿದ್ದಾರೆ. ಆದರೆ ಅದೇ ಸಂದರ್ಭದಲ್ಲಿ ಹಿಮಾಚಲ ಪ್ರದೇಶ, ಮುಂಬಯಿಗಳನ್ನು ಕೇಂದ್ರದ ಆಡಳಿತಕ್ಕೆ ವಹಿಸಿಕೊಳ್ಳುವುದಕ್ಕೆ ಅವನ್ನು ಯೂನಿಯನ್ ಟೆರಿಟರಿ ಎಂದು ಕರೆಯಲಾಗಿದೆ. ಈಗಾಗಲೆ ದೆಹಲಿಯನ್ನು ಮತ್ತು ತ್ರಿಪುರ ಮತ್ತು ಮಣಿಪುರಗಳನ್ನು ಆ ರೀತಿ ಕೇಂದ್ರದಿಂದ ಆಳುವ ಭಾಗಗಳಾಗಿ ಮಾಡಬೇಕೆಂದು ಇದರಲ್ಲಿ ತೀರ್ಮಾನ ಮಾಡಿದೆ. ಪ್ರಜಾಪ್ರಭುತ್ವದಲ್ಲಿ ಮೂಲತಃ ಒಂದು ಪ್ರದೇಶ ಮತ್ತು ಒಂದು ಜನಾಂಗ ಎಷ್ಟೇ ಚಿಕ್ಕದಿರಲಿ ಮತ್ತು ಅವರು ಎಷ್ಟೇ ಕಡಮೆ ಸಂಖ್ಯೆಯಲ್ಲಿರಲಿ, ಅವರಿಗೊಂದು ತಾವೇ ಆಳಿಕೊಳ್ಳುವ ಸರ್ಕಾರ ಕೊಡುವುದು ತೀರ ಕನಿಷ್ಠವಾದ ಅವರ ಬೇಡಿಕೆಯಾಗುತ್ತದೆ: ಮತ್ತು ಕನಿಷ್ಠವಾಗಿ ಪ್ರಜಾಪ್ರಭುತ್ವಕ್ಕೆ ಮಾಡಬಹುದಾದ ಒಂದು ನ್ಯಾಯವಾಗುತ್ತದೆ. ಆದ್ದರಿಂದ ಈಗಿರುವ ಮುಂಬಯಿಯಾಗಲಿ, ದೆಹಲಿ, ಹಿಮಾಚಲ

ಪ್ರದೇಶ, ಮಣಿಪುರ ಅಥವಾ ತ್ರಿಪುರವಾಗಲಿ ಅಥವಾ ಇತರ ಸಣ್ಣ ಪ್ರಾಂತವಾಗಲಿ ಅವನ್ನು ಕೇಂದ್ರದಿಂದ ಆಳಲ್ಪಡುವ ಯೂನಿಯನ್ ಟೆರಿಟರಿಗಳೆಂದು ತೀರ್ಮಾನ ಮಾಡುವುದು ಪ್ರಜಾಪ್ರಭುತ್ವಕ್ಕೆ ನಾವು ಮಾಡಬಹುದಾದ ಒಂದು ದೊಡ್ಡ ಅಪಚಾರ. ಇಂತಹ ಒಂದು ತೀರ್ಮಾನವನ್ನು ಮಾಡುವುದು ತೊಲಗಬೇಕು ಮತ್ತು ಮುಂಬಯಿ ಮಹಾರಾಷ್ಟ್ರದಲ್ಲಿ ಸೇರಬೇಕು. ಹಾಗೆಯೇ ಹಿಮಾಚಲ ಪ್ರದೇಶ, ಇಲ್ಲಿ ಸಲಹೆ ಮಾಡಿರುವಂತೆ, ಮುಂದೆ ಪಂಜಾಬಿನಲ್ಲಿ ಸೇರುವ ಪ್ರದೇಶವಾಗಿದೆ. ಉಳಿದಿರುವ ಪ್ರದೇಶಗಳಿಗೆ ಕೂಡ ನೇರವಾಗಿ ಒಂದು ಆಡಳಿತ ವ್ಯವಸ್ಥೆಯನ್ನು ಸರ್ಕಾರ ಕಲ್ಪಿಸುವುದಕ್ಕೆ ಈ ಮಸೂದೆಗೆ ತಿದ್ದುಪಡಿ ತರಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನೂ ಅನೇಕ ವರ್ಷಗಳಿಂದ ನಾವು ಆಶಿಸಿದ್ದ ಕರ್ಣಾಟಕ ಪ್ರಾಂತ ಈ ದಿನ ರೂಪಿತವಾಗತಕ್ಕ ಕಾಲ ಸನ್ನಿಹಿತವಾಗಿದೆ. ಬರತಕ್ಕಂಥ ಅಕ್ಟೋಬರ್ ಒಂದನೆಯ ತಾರೀಖು ಈ ಮಸೂದೆ ಕಾನೂನಾಗಿ ಅಂದು ಕರ್ಣಾಟಕ ರಾಜ್ಯ ಅಸ್ತಿತ್ವಕ್ಕೆ ಬರಲಿದೆ. ಒಂದು ವಿಷಯವನ್ನು ನಾವು ಈ ಹೊತ್ತು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಈ ಕರ್ಣಾಟಕ ಪ್ರಾಂತದ ಒಂದು ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಈ ನಾಡಿನಲ್ಲಿ ಯಾವ ಒಂದು ದುರಂತದ ಕಾರ್ಯವಾಗಲಿ ಯಾವ ರಕ್ತಪಾತವಾಗಲಿ ನಡೆಯದೆ ಇದ್ದುದು ಒಂದು ದೊಡ್ಡ ಆದರ್ಶದ ಮಾತಾಗಿದೆ. ಈ ದಿನ ಕರ್ಣಾಟಕ ರಾಜ್ಯ ಅಸ್ತಿತ್ವಕ್ಕೆ ಬರುತ್ತಿದ್ದರೂ ಕೂಡ ಈ ರಾಜ್ಯ ಅಪೂರ್ಣವಾಗಿ ನಮಗೆ ಇಂದು ಬರುತ್ತಿದೆಯೆಂದು ನಾವು ಹೇಳಬೇಕಾಗಿದೆ. ಏಕೆಂದರೆ ಸ್ಥೂಲವಾಗಿ, ಸಾಮಾನ್ಯವಾಗಿ ನಾವು ಈ ಹೊಸ ಪ್ರಾಂತಗಳನ್ನು ಭಾಷೆಯ ಆಧಾರದ ಮೇಲೆ ರಚಿಸುತ್ತಿದ್ದೇವೆ. ಸಂಪೂರ್ಣವಾಗಿ ಅಕ್ಷರಶಃ ಭಾಷೆಯನ್ನೇ ನಾವು ಆಧಾರವಾಗಿ ಇಟ್ಟುಕೊಳ್ಳದೆ ಹೋದಾಗ್ಯೂ ಕೂಡ ಭಾವನೆಯಲ್ಲಿ ಮತ್ತು ಸ್ಥೂಲವಾಗಿ ಭಾಷೆಯ ಆಧಾರದ ಮೇಲೆಯೇ ಈ ದಿವಸ ಎಲ್ಲ ಪ್ರಾಂತಗಳೂ ರೂಪುಗೊಂಡಿವೆಯೆಂದು ಹೇಳಿದರೆ ಅದರಲ್ಲಿ ಯಾವ ತಪ್ಪೂ ಇಲ್ಲ, ಉತ್ಪ್ರೇಕ್ಷೆಯೂ ಇಲ್ಲ ಎಂದು ತಿಳಿದಿದ್ದೇನೆ. ಮೊದಲಿನಿಂದಲೂ ಕನ್ನಡ ರಾಜ್ಯದಲ್ಲಿ ಸೇರಬೇಕೆಂದು ನಾನಾ ವಿಧವಾಗಿ ಅಪೇಕ್ಷೆಪಟ್ಟಿರತಕ್ಕ ಕನ್ನಡ ಭಾಗಗಳನ್ನು ಈ ಮಸೂದೆಯಲ್ಲಿ ಕೈಬಿಟ್ಟಿರುವುದು ನ್ಯಾಯವಾದುದಲ್ಲ. ಆದ್ದರಿಂದ ಅಂತಹ ಪ್ರದೇಶಗಳನ್ನು ಈ ಮಸೂದೆಯಲ್ಲಿ ಅಡಕಮಾಡಿ ಮುಂದೆ ಅಸ್ತಿತ್ವಕ್ಕೆ ಬರತಕ್ಕ ಕರ್ಣಾಟಕ ರಾಜ್ಯದಲ್ಲಿ ಆ ಪ್ರದೇಶಗಳನ್ನು ಸೇರಿಸಿಕೊಳ್ಳಬೇಕು. ನನಗೆ ಯಾವೊಂದು ಅನುಮಾನವೂ ಇಲ್ಲದಿರುವ ಕೆಲವು ಕನ್ನಡ ಪ್ರದೇಶಗಳ ಉದಾಹರಣೆಯನ್ನು ಇಲ್ಲಿ ಹೇಳುತ್ತೇನೆ. ಇಂದು ಕಾಸರಗೋಡಿನಲ್ಲಿ ಚಂದ್ರಗಿರಿ ನದಿಯ ಪಶ್ಚಿಮಭಾಗಕ್ಕೆ ಬರುವ ಪ್ರದೇಶ, ದಕ್ಷಿಣ ಕನ್ನಡಕ್ಕೆ ಹತ್ತಿಕೊಂಡಿರುವ ಭಾಗ, ಉತ್ತರ ಕನ್ನಡ ಪ್ರದೇಶಕ್ಕೆ ಸೇರುವ ಭಾಗ, ತಾಳವಾಡಿ ಫಿರ್ಕಾ, ಹೊಸೂರು, ನೀಲಗಿರಿ ಮುಂತಾದ ಕಡೆ ಇರುವ ಕನ್ನಡ ಪ್ರದೇಶಗಳು ಈ ರಾಜ್ಯಕ್ಕೆ ಸೇರಬೇಕಾಗಿವೆ. ಮತ್ತೊಂದು ಎದ್ದು ಕಾಣತಕ್ಕ ಕನ್ನಡ ಭಾಗವಾದ ಮಡಕಸಿರಾ, ಅದಕ್ಕೆ ಒಂದು ಎಕ್ಸ್‌ಕ್ಲೇವ್ ರೀತಿಯಲ್ಲಿರುವ ಪ್ರದೇಶಗಳು ಇವೆ. ಅವನ್ನೂ ಕೂಡ ಕನ್ನಡ ರಾಜ್ಯದಲ್ಲೇ ಸೇರಿಸಬೇಕು. ಹೀಗೆ ಕೆಲವು ಕನ್ನಡ ದೇಶಕ್ಕೆ ಸೇರಬೇಕಾದ ರಾಜ್ಯಗಳು ಈ ದಿವಸ ಸೇರದಿರುವುದರಿಂದ ಅಷ್ಟರಮಟ್ಟಿಗೆ ಅದು ಅಪೂರ್ಣವಾಗಿದೆಯೆಂದು ಹೇಳಬೇಕಾಗಿದೆ.

ಇನ್ನೊಂದು ಅಂಶ ಹೆಸರಿನ ವಿಷಯದಲ್ಲಿ ಬಂದಿರತಕ್ಕ ಒಂದು ವಿವಾದಕ್ಕೆ ಸಂಬಂಧಪಟ್ಟಿದೆ. ಮೈಸೂರು ಹಾಗೆಯೇ ಉಳಿಯಬೇಕು, ಅದರಿಂದ ನಮಗೆ ಒಳಿತಾಗುತ್ತದೆ, ಆದ್ದರಿಂದಲೇ ಅದನ್ನು ನಾವು ಕೇಳತಕ್ಕದ್ದು, ಮೈಸೂರೇ ಬೇರೆಯಾಗಬೇಕು, ಮೈಸೂರಿನ ಹೆಸರು ಹೋಗಬಾರದು ಎಂದು ಬಹಳವಾಗಿ ಮೈಸೂರಿನ ಅಭಿಮಾನದಿಂದ ಮಾತನಾಡಿದ್ದಾರೆ.

4 P.M.

S. R. C. ವರದಿಯಲ್ಲಿ ಹೇಳಿದ್ದ ಪ್ರಕಾರ ಮುಂದೆ ಇಲ್ಲಿ ರಚನೆಯಾಗಿರತಕ್ಕ ಒಂದು ಹೊಸ ಪ್ರಾಂತ್ಯಕ್ಕೆ ಕರ್ಣಾಟಕ ಎಂದು ಹೆಸರಿಡಬೇಕೆಂದಿತ್ತು. ಆದರೆ ಈ ರೀತಿ ಒಂದು ಹೆಸರನ್ನಿಟ್ಟರೆ ಮೈಸೂರಿನಲ್ಲಿ ಒಂದು ದೊಡ್ಡ ಚಳವಳಿಯೇ ಪ್ರಾರಂಭವಾಗುತ್ತದೆ, ಅದನ್ನು ತಡೆಗಟ್ಟಬೇಕೆಂಬ ಪರಿಣಾಮಕ್ಕಾಗಿ ಈಗ ಆ ಹೊಸ ರಾಜ್ಯಕ್ಕೂ ಕೂಡ ಈ ಮೈಸೂರೆಂಬ ಹೆಸರೇ ಇರಲಿ ಎಂದು ಇದನ್ನು ಕೊಡಲಾಗಿದೆ. ಆದರೆ ಕೆಲವರು ಈ ಹೆಸರಿನಲ್ಲೇನಿದೆ ಎಂದು ಹೇಳುತ್ತಿದ್ದಾರೆ. ಇದರ ಹಾಗೆ ಯಾರು ಈ ಹೆಸರಿನಲ್ಲೇನಿದೆ ಎಂದು ಹೇಳುತ್ತಿದ್ದಾರೋ ಅಂಥವರು ಈ ಹೆಸರೇ ಇರಲಿ ಎಂದು ಹೇಳುವುದಕ್ಕೆ ಬದಲಾಗಿ, ನೂತನ ಪ್ರಾಂತ್ಯಕ್ಕೆ ಮೈಸೂರೆಂದು ಕರೆಯುವುದಕ್ಕೆ ಬದಲಾಗಿ—ಕರ್ಣಾಟಕ ಎಂದು ಹೆಸರಿಡುವುದಕ್ಕೆ ಅವರೇಕೆ ಒಪ್ಪುತ್ತಿಲ್ಲವೋ ಅದು ನನಗೆ ಅರ್ಥವಾಗುತ್ತಿಲ್ಲ. ಆದರೆ ಹೊರಗಡೆಯಿಂದ ಬರತಕ್ಕಂಥ ಜನರಿಗೆ ಈ ರೀತಿ ಮಾಡಿದ್ದರಿಂದ ಅವರಿಗೊಂದು ಅನುಮಾನಸ್ಸು ಉಂಟಾಗಿ ಅವರಿಗೆ ಮನಸ್ಸಿನಲ್ಲಿ ಒಂದು ಕಸಿವಿಸಿಯಾಗಿರುತ್ತದೆ. ಯಾರು ಈ ಹೊಸ ರಾಜ್ಯ ನಿರ್ಮಾಣದ ಬಗ್ಗೆ ತಮ್ಮ ಪೂರ್ಣ ವಿರೋಧವನ್ನು ಸೂಚಿಸಿದ್ದರೋ ಅವರು ಮಾತ್ರ ಈಗ ಈ ಹೊಸ ರಾಜ್ಯಕ್ಕೆ ಮೈಸೂರೆಂದು ಹೆಸರಿಡಲು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಯಾವ ಅಭಿಪ್ರಾಯವೇನೇ ಇರಲಿ ಮುಂದೆ ರಚಿತವಾಗಲಿರುವ ನೂತನ ಕನ್ನಡ ಪ್ರಾಂತ್ಯಕ್ಕೆ 'ಕರ್ಣಾಟಕ' ಎಂದು ಹೆಸರಿಡತಕ್ಕದ್ದೇ ಸರಿಯೆಂದು ಎನ್ನುವುದು ನನ್ನ ಖಚಿತವಾದಂಥ ಅಭಿಪ್ರಾಯವಾಗಿದೆ. ಆದರೆ ಹೀಗೆ ಮುಂದೆ ನಿರ್ಮಾಣವಾಗಲಿರುವ ಒಂದು ಹೊಸ ರಾಜ್ಯಕ್ಕೆ 'ಮೈಸೂರು' ಎಂದು ಹೆಸರಿಡತಕ್ಕದ್ದರಿಂದಲೇ ಈ ಮೈಸೂರಿನ ಕೆಲವು ಜನರಿಗೆ ಬಹಳ ಸಂತೋಷವನ್ನು ಉಂಟುಮಾಡತಕ್ಕದ್ದಾಗಿದೆ ಎಂದು ಹೇಳುವ ಪಕ್ಷಕ್ಕೆ ನಾನು ಈ ಹೆಸರಿನ ಬಗ್ಗೆ ಅಂಥ ಒಂದು ಚಳವಳಿಯನ್ನಾಗಲಿ ಅಥವಾ ಹೋರಾಟವನ್ನಾಗಲಿ ನಡೆಸತಕ್ಕ ಪ್ರಯತ್ನಕ್ಕೆ ಹೋಗುವುದಿಲ್ಲ.

ಸ್ವಾಮಿ, ಇನ್ನು ಈ ಪ್ರದೇಶಗಳು ಮತ್ತು ಪ್ರದೇಶ ಪರಿಷತ್ತುಗಳ ವಿಷಯ ಬೇರೆ ಬಂದಿದೆ. ಆದರೆ ಈ ವಿಷಯ, ನನಗೆ ಗೊತ್ತಿರುವ ಹಾಗೆ, ಇದನ್ನು ಮೊಟ್ಟಮೊದಲನೆಯದಾಗಿ ವೇದಿಕೆಯ ಮೇಲೆ ನಿಂತು ಇಂಡಿಯಾ ದೇಶದಲ್ಲಿ ಮಾತನಾಡಿದವರೆಂದರೆ ಶ್ರೀ ಲೋಹಿಯಾರವರೆಂದು ತಿಳಿದಿದ್ದೇನೆ. ಅವರು ಒಂದು ಹೊಸ ಪಾರ್ಟಿಯನ್ನು ರಚನೆ ಮಾಡುವಾಗ ಈ ಇಂಡಿಯಾ ದೇಶವನ್ನು ಐದು ದೊಡ್ಡ ಪ್ರಾಂತ್ಯಗಳನ್ನಾಗಿ ಮಾಡಬೇಕೆಂದು ಹೇಳಿದ್ದ ಸಂದರ್ಭದಲ್ಲಿ ಈ ಜೋನಲ್ ಕೌನ್ಸಿಲ್‌ಗಳ ವಿಷಯವನ್ನೂ ಚರ್ಚೆ ಮಾಡಿ ಎಂದು ಹೇಳಿದ್ದರು. ಆಗಲೇ ಈ ದಕ್ಷಿಣ ಪ್ರದೇಶ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಪೂರ್ವ ಮತ್ತು ಪಶ್ಚಿಮ ಪ್ರದೇಶಗಳ ವಿಚಾರ ಈಚೆಗೆ

(ಶ್ರೀ ಎಸ್. ಗೋಪಾಲಗೌಡ.)

ಬಂದಿದ್ದು. ಈ ಹೊಸ ರಾಜ್ಯಗಳ ಅನುಕೂಲ ಪ್ರತಿಕೂಲಗಳನ್ನು ವಿಮರ್ಶೆ ಮಾಡಿ ಎಂದು ಹೇಳಿದ್ದರು. ಇಷ್ಟೆಲ್ಲಾ ಆದನಂತರ ಪಂಡಿತ ನೆಹರೂಅವರು ಈಗ ಹೇಳಿದ್ದಾರೆ. We are not going to take credit for ourselves. ಹೀಗೆ ಈ ವಿಚಾರವನ್ನು ಮೊದಲು ಯಾರು ವೇದಿಕೆಯ ಮೇಲೆ ನಿಂತು ಹೇಳಿದ್ದಾರೋ ಅವರಿಗಾಗಲಿ ಅಥವಾ ನೆಹರೂಅವರಿಗಾಗಲಿ ಈ ಜೋನಲ್ ಕೌನ್ಸಿಲ್ಸ್‌ಗಳೆಂದರೇನು ಎನ್ನುವುದು ಅವರಿಗೇ ಅಷ್ಟು ಖಚಿತವಾಗಿ ಅರ್ಥವಾಗಿರಲಿಲ್ಲವೆಂದು ಕಂಡುಬರುತ್ತದೆ. ಅದಕ್ಕೆ ಕಾರಣ ಅವರು ಈ ವಿಚಾರವನ್ನು ಮೊದಲು ಹೊರಪಡಿಸಿದಾಗ ಇದನ್ನು ಬಹಳ ವೇಗ್ ಆಗಿ ಹೇಳಿದ್ದರು. ಇದರ ರೂಪು ರೇಖೆಗಳೇನು, ಇದರ ಲಕ್ಷಣ ಹೇಗಿರಬೇಕು, ಇದರ ಕರ್ತವ್ಯವೇನು ಎಂಬತಕ್ಕ ವಿಚಾರಗಳೊಂದೂ ಗೊತ್ತಿರಲಿಲ್ಲ. ಈ ಬಗ್ಗೆ ಅನೇಕರು ಅನೇಕ ರೀತಿ ಹೇಳುವುದಕ್ಕೆ ಪ್ರಾರಂಭಿಸಿದರು. ಕೆಲವರು ಈ ಜೋನಲ್ ಕೌನ್ಸಿಲ್‌ಗಳೆಂದರೆ ಹೆಚ್ಚು ಕಡಮೆ ಈಗಿರತಕ್ಕ ಲೆಜಿಸ್ಲೇಟಿವ್ ಕೌನ್ಸಿಲ್‌ಗಳಿದ್ದ ಹಾಗೆ ಇರಬಹುದೆಂದು ಹೇಳುತ್ತಿದ್ದರು. ಆದರೆ ಹೀಗೆ ಇದೊಂದು ಬಹಳ ವೇಗ್ ಆಗಿ ಹುಟ್ಟಿದಂಥ ವಿಚಾರವೇ ಕಡೆ ಕಡೆಗೆ ಬರುತ್ತಾ ಎಲ್ಲರಲ್ಲೂ ಈ ಒಂದು ಭಾವನೆಯೇ ಗಟ್ಟಿಯಾಗಿ ನಿಲ್ಲುವುದಕ್ಕೆ ಪ್ರಾರಂಭವಾಯಿತು. ಕಡೆಗೆ ಈ ಜೋನಲ್ ಕೌನ್ಸಿಲ್ ಎಂದರೆ ಇಡೀ ದಕ್ಷಿಣ ಭಾಗಕ್ಕೆಲ್ಲಾ ಒಂದೇ ರಾಜ್ಯವಾಗಿ, ಅಲ್ಲಿ ಒಂದೇ ಶಾಸನ ಸಭೆ, ಅದಕ್ಕೆಲ್ಲಾ ಒಂದೇ ಮಂತ್ರಿಮಂಡಲ ಆಗಬೇಕೆಂದಿರುತ್ತದೆ ಎಂಬ ಅಭಿಪ್ರಾಯಗಳು ಹೊರಪಟ್ಟವು. ಆದರೆ ಇಂಥ ಒಂದು ಅಭಿಪ್ರಾಯವನ್ನು ಯಾರು ಬೆಳೆಸಿ, ಪೋಷಿಸಿ, ಸಲಹಿಕೊಂಡು ಬಂದಿದ್ದರೋ ಅಂಥವರ ಪ್ರಾಂತ್ಯಗಳಲ್ಲೇ ಏನೊಂದು ವಾತಾವರಣ ಮೂಡಿತು, ಅಲ್ಲಿ ಏನೇನು ನಡೆದು ಹೋಯಿತು ಎನ್ನುವುದಕ್ಕೆ ಉದಾಹರಣೆಯಾಗಿ ಬೆಂಗಾಲ್ ಮತ್ತು ಬಿಹಾರ್‌ಗಳ ಸೇರುವಿಕೆಯಲ್ಲಿ ಅವರೇನು ಒಂದು ಆಶ್ವಾಸನ ಜನರಿಗೆ ಕೊಟ್ಟಿದ್ದರೋ ಅದು ಕೈಗೂಡಲಿಲ್ಲ. ಅದಕ್ಕೆ ವಿರುದ್ಧವಾಗಿ ಏನೇನು ಅಲ್ಲಿ ಪ್ರತಿಕ್ರಿಯೆಗಳುಂಟಾದವು ಎನ್ನುವುದು ಎಲ್ಲರಿಗೂ ತಿಳಿದೇ ಇದೆ. ಆದರೆ ಹೀಗೆ ಅದರ ಭವಿಷ್ಯವನ್ನು ಇನ್ನೂ ಸರಿಯಾಗಿ ಕಾಣದೆ ಇರುವಾಗಲೇ ಈ ಅಭಿಪ್ರಾಯ ಒಂದು ಅಸ್ತಿತ್ವಕ್ಕೆ ಬಂತು. ಆ ದಿವಸ ಅವರು ಇದನ್ನು ಯಾವರೀತಿ ಮಾಡಬೇಕೆಂದಿದ್ದಾರೆಂದು ಕೇಳಿದರೆ ಯಾರೂ ಸಹ ಹೀಗೆಯೇ ಮಾಡುತ್ತಾರೆ ಎಂದು ಸರಿಯಾಗಿ ಹೇಳುವ ಸ್ಥಿತಿಯಲ್ಲೇ ಇಲ್ಲ. ಈ ವಿಚಾರಗಳೇ ಒಬ್ಬರಿಗೂ ಸರಿಯಾಗಿ ಗೊತ್ತಿಲ್ಲ. ಹೀಗೆ ಒಂದು ದೊಡ್ಡ ಬಹು ಭಾಷಾ ಪ್ರದೇಶದ ರಚನೆಯನ್ನೇನೋ ಮಾಡಬಹುದು. ಆದರೆ ಮುಂದೆ ಅಲ್ಲಿ ಯಾವ ಕೆಲಸಗಳಾಗಬೇಕಾಗಿದ್ದರೂ ಬಹಳ ಕಷ್ಟವಾಗುತ್ತದೆ. ಒಂದು ಭಾಷೆಯಿರತಕ್ಕ ಕಡೆಯಲ್ಲೇ ಈ ರಾಜ್ಯಭಾರ ನಡೆಸುವುದಕ್ಕೆ ವಿಶೇಷ ಕಷ್ಟಗಳಿರುವಾಗ ಇನ್ನು ಆ ಮರಾಠಿ, ತಮಿಳು, ತೆಲುಗು, ಮಲೆಯಾಳಿ ಭಾಷೆಗಳ ಜನಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಆಡಳಿತ ನಡೆಸೋಣ ಎಂದರೆ—ಒಬ್ಬರ ಮಾತು—ಒಬ್ಬರ ಭಾಷೆ ಇನ್ನೊಬ್ಬರಿಗೆ ಅರ್ಥವಾಗುವುದಿಲ್ಲ. ನಾಳೆ ಇವರು ಚುನಾವಣಾ ಪ್ರಚಾರ ನಡೆಸಬೇಕಾದರೆ ಜನರಿಗೆ ತಿಳಿಯದ ಭಾಷೆಯಲ್ಲಿ ಪ್ರಚಾರ ನಡೆಸಬೇಕಾಗುತ್ತದೆ. ಅಷ್ಟೇ ಅಲ್ಲದೆ ದಿನವಹಿ ನಡೆಸಬೇಕಾಗಿರುವ ಕಾಗದಪತ್ರಗಳ ವ್ಯವಹಾರ ಕೂಡ ಒಂದು ಸಹಕಾರ ಭಾವನೆಯಿಂದ ನಡೆಸಲು ಕಷ್ಟವಾಗುತ್ತದೆ. ಆದುದರಿಂದ ಈ ರೀತಿಯಾಗಿ ಬಹು ಭಾಷಾ ಇಲ್ಲವೇ ದ್ವಿಭಾಷೆಗಳನ್ನೊಳಗೊಂಡ ರಾಜ್ಯಗಳನ್ನು ಒಟ್ಟುಗೂಡಿಸುವಂತೆ ದೇಶವನ್ನು ಪುನರ್ವಿಂಗಡಣೆ ಮಾಡುವುದು ಖಂಡಿತ ಸರಿಯಾದದ್ದಲ್ಲ. ನಾವು ಇದೇ ಅಸೆಂಬ್ಲಿಯಲ್ಲಿ ಹಿಂದೆ ಪ್ರಾಂತಗಳ ಪುನರ್ವಿಂಗಡಣೆಯ ಬಗ್ಗೆ ಚರ್ಚೆ ನಡೆಸುತ್ತಿದ್ದಂಥ ಕಾಲದಲ್ಲಿ ಒಂದು ಭಾಷೆಯ ಒಂದೊಂದು ರಾಷ್ಟ್ರವಿರತಕ್ಕದ್ದು ಒಳ್ಳೆಯದೆಂದು ಒಂದು ಅಭಿಪ್ರಾಯಕ್ಕಾಗಲೇ ಬಂದಿದ್ದೇವೆ. ಮುಂದೆ ಆ ರೀತಿ ಒಂದು ಪ್ರದೇಶ ರಚನೆ ಯಾಗಬೇಕಾದರೆ ಒಂದಾನೊಂದು ಕಾಲದಲ್ಲಿ ಒಂದು ರಾಷ್ಟ್ರ—ಒಂದು ಭಾಷೆ ಎಂಬ ಭಾವನೆ ಇಲ್ಲದೆ ಇಂಗ್ಲೀಷ್ ಭಾಷೆಗೆ ಯಾವ ಒಂದು ಸ್ಥಾನಮಾನಗಳು ದೊರೆಯಲು ಅವಕಾಶವಾಗಿತ್ತೋ ಆ ರೀತಿ ಮುಂದೆ ಎಲ್ಲಾ ಜನಗಳಲ್ಲೂ ಒಂದೇ ರಾಷ್ಟ್ರ ಭಾವನೆ ಮೂಡಿ ಬಂದಮೇಲೆ ಹಾಗೂ ಜನರಲ್ಲಿ ಸ್ನೇಹಸೌಹಾರ್ದ ಭಾವನೆಗಳು ಬೆಳೆದುಕೊಂಡು ಬಂದಿರತಕ್ಕದ್ದು ಕಂಡು ಬಂದಮೇಲೆ, ಹಾಗೂ ಜನರು ದ್ವಿಭಾಷೆಗಳಲ್ಲಿ ಪರಿಣತೆ ಹೊಂದಿದ ಮೇಲೆ, ಬೇಕಾದರೆ ದ್ವಿಭಾಷಾ ರಾಜ್ಯಗಳ ರಚನೆಯನ್ನು ಆಲೋಚನೆಗೆ ತೆಗೆದುಕೊಳ್ಳಬಹುದು. ಆದರೆ ಈಗ ಸಧ್ಯಕ್ಕೆ ನಾನು ಈ ಪ್ರದೇಶಗಳು ಮತ್ತು ಪ್ರಾದೇಶಿಕ ಪರಿಷತ್ತುಗಳನ್ನು ಸಂಪೂರ್ಣವಾಗಿ ವಿರೋಧಿಸತಕ್ಕವನಾಗಿದ್ದೇನೆ. ಆದರೆ ಈ ದಿವಸ ಈ ಜೋನಲ್ ಕೌನ್ಸಿಲ್ ಎಂಬ ಸಭೆಯಲ್ಲಿ ಆಯಾಯಾ ಪ್ರಾಂತಕ್ಕೆ ಸಂಬಂಧಪಟ್ಟ ಹಾಗೆ ಕೇಂದ್ರದ ಇಬ್ಬರು ಮಂತ್ರಿಗಳೂ ಮತ್ತು ಆಯಾ ಪ್ರದೇಶದ ಮಂತ್ರಿಮಂಡಲದಲ್ಲಿರತಕ್ಕ ಯಾರಾದರೂ ಇಬ್ಬರು ಮಂತ್ರಿಗಳೂ ಇರಬೇಕೆಂದು ಹೇಳಲಾಗಿದೆ. ಹೀಗೆ ಈ ಜನರನ್ನು ಒಳಗೊಂಡ ಈ ಸಮಿತಿಗೆ ಗಡಿ ನಿರ್ಧಾರದ ಪ್ರಶ್ನೆಯನ್ನು ನಿರ್ವಿಕಲ್ಪ ಮನಸ್ಸಿನಿಂದ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರೆಲ್ಲರೂ ಈ ಗಡಿ ಸಂಬಂಧವಾದ ವಿಚಾರಕ್ಕೆ ಒಂದು ಪಾರ್ಟಿಯಾಗಿರುತ್ತಾರೆ. ಅವರಿಗೆ ಈ ವಿಚಾರಗಳನ್ನು ಚರ್ಚೆ ಮಾಡಿ ನ್ಯಾಯವಾದ ತೀರ್ಮಾನ ಕೈಗೊಳ್ಳಲು ಬಹಳ ಕಷ್ಟವಾಗುತ್ತದೆ.

ಆದರೆ ಇದೇ ಸಂದರ್ಭದಲ್ಲಿ ಶ್ರೀಮಾನ್ ಕೆ. ಹನುಮಂತಯ್ಯನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, ಈ ಗಡಿ ಸಂಬಂಧವಾದ ಚರ್ಚೆಯನ್ನು ಈ ಸಮಿತಿಗಳಿಗೆ ವಹಿಸುವುದು ಸರಿಯಾದದ್ದಲ್ಲ, ಯಾವ ರೀತಿಯಲ್ಲೂ ವಿಹಿತವಾದದ್ದಲ್ಲ ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯವೂ ಕೂಡ ಹಾಗೆಯೇ ಇದೆ. ಈ ಗಡಿ ನಿರ್ಧಾರದ ವಿಷಯಗಳನ್ನು ಆ ಗಡಿ ನಿರ್ಧಾರ ಸಮಿತಿಗೆ ವಹಿಸುವುದರಿಂದ ಯಾರಿಗೂ ಯಾವ ಅಂಥ ಗಂಡಾಂತರವೂ ಆಗಲಾರದೆಂಬುದು ನನ್ನ ಖಚಿತವಾದ ಅಭಿಪ್ರಾಯ.

ಇನ್ನು ಈ ಲೆಜಿಸ್ಲೇಟಿವ್ ಕೌನ್ಸಿಲ್ ಸಭೆಯ ಬಗ್ಗೆ ಶ್ರೀ ಕೆ. ಪಟ್ಟಾಭಿರಾಮನ್ ಅವರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ದಿವಸ ಇಂಡಿಯಾ ದೇಶದಲ್ಲಿ ಮಧ್ಯಪ್ರದೇಶವೊಂದನ್ನು ಕೈಬಿಟ್ಟರೆ ಇನ್ನುಳಿದ ಯಾವ ಭಾಗದಲ್ಲೇ ಆಗಲಿ ಲೆಜಿಸ್ಲೇಟಿವ್ ಕೌನ್ಸಿಲ್‌ಗಳು ಅಸ್ತಿತ್ವಕ್ಕೆ ಬರಲು ಅವಕಾಶವಿಲ್ಲ. ಅದಕ್ಕೆ ಕಾರಣವೇನೆಂದರೆ—ಈ ದಿವಸ ನಾವು ಮೇಲ್ಮನೆಗಳಿಗೆ ಹಣಕಾಸಿನ ಜವಾಬ್ದಾರಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಮೇಲಾಗಿ ಆ ಮನೆಗೆ ತಾನೇ ಸ್ವತಃ ಒಂದು ಬಿಲ್ಲನ್ನು ತಂದು ಅದನ್ನು ಪಾಸ್ ಮಾಡತಕ್ಕಂಥ ಅಧಿಕಾರವಿಲ್ಲ. ಯಾವ ಒಂದು ಬಿಲ್ಲಿನ ಕಡೆಯ ಒಪ್ಪಿಗೆಯೂ ಕೂಡ ಅಸೆಂಬ್ಲಿಯಿಂದಲೇ ಆಗಬೇಕಾಗಿದೆ. ಹೀಗೆ ಈ

ದಿವಸ ಅದೊಂದು ಯಾವ ಅಧಿಕಾರವೂ ಇಲ್ಲದಂಥ ಒಂದು ಬಾಡಿಯಾಗಿದೆ. ಆದರೆ ನಮ್ಮ ದೇಶದಲ್ಲಿ ಇಷ್ಟೊಂದು ಬಡತನವಿರುವಾಗ ಈ ರೀತಿ ಇಲ್ಲಿ ಎರಡು ಶಾಸನ ಸಭೆಗಳನ್ನು ಇಟ್ಟುಕೊಂಡಿರುವುದು ನ್ಯಾಯವಲ್ಲ. ಆದರೆ ದೇಶದ ನಾನಾ ಕಡೆಗಳಲ್ಲಿ ಹೀಗೆ ಬೈಕ್ಯಾಮರಲ್ ಲೆಜಿಸ್ಲೇಚರ್‌ಗಳಿವೆ. ಹೀಗೆ ಈ ಸಭೆಗಳಿರುವುದಕ್ಕೆ ಬೇರೆ ಯಾವ ಕಾರಣವೂ ಸಹ ಇರುವುದಿಲ್ಲ. ಇದು ಕೇವಲ ಒಂದು ರಾಜಕೀಯ ಕಾರಣಕ್ಕಾಗಿ ಎಂದು ಕಾಣಬರುತ್ತಿದೆ. ಕೆಲವರಿಗೆ ಈ ರಾಜಕೀಯ ವಲಯದಲ್ಲಿ ಸಂತೃಪ್ತಿ ಅಥವಾ ಸಂತೋಷಪಡಿಸಲು ಅವಕಾಶವಿಲ್ಲವೆಂದು ಹೇಳುವುದಕ್ಕೆ ಆಗದಂತೆ ಇರಲಿ ಎಂಬ ಒಂದು ಉದ್ದೇಶಕ್ಕೋಸ್ಕರವಾಗಿ ಈ ಸನ್ನಾಹಗಳನ್ನೆಲ್ಲಾ ಮಾಡಿಕೊಂಡಿದ್ದಾರೆಯೇ ವಿನಾ ಇದರಲ್ಲಿ ಮತ್ತೇನೂ ಇಲ್ಲ. ಈ ಮನೆಯೂ ಇರಲಿ, ಆ ಮನೆಯೂ ಇರಲಿ, ಈ ಮನೆಯಲ್ಲಿ ಎಷ್ಟು ಜನಕ್ಕೆ ಸೀಟ್ ಕೊಡುವುದಕ್ಕಾಗುತ್ತದೆ, ಇಲ್ಲಿ ಸಾಧ್ಯವಿಲ್ಲದೆ ಇದ್ದಾಗ ಮೇಲ್ಮನೆಯಲ್ಲಿ ಸೀಟ್ ಕೊಡೋಣ ಎನ್ನತಕ್ಕಂಥ ಒಂದೇ ಒಂದು ಉದ್ದೇಶದಿಂದ ಮೇಲ್ಮನೆಯನ್ನು ಇಟ್ಟುಕೊಳ್ಳಲಾಗಿದೆ. ಇಂಥ ಒಂದು ಮೇಲ್ಮನೆಯನ್ನು ಇಟ್ಟುಕೊಳ್ಳುವುದಕ್ಕೆ ಈ ದಿವಸ ಒಂದು ಅವಕಾಶವಿರುವುದಾದರೆ ಅದು ಮಧ್ಯಪ್ರದೇಶಕ್ಕೆ ಮಾತ್ರ ಇರುತ್ತದೆ. ಅದನ್ನು ಬಿಟ್ಟರೆ ಉಳಿದ ಯಾವ ಪ್ರದೇಶದಲ್ಲೂ ಇದಕ್ಕೆ ಅವಕಾಶ ಕಂಡುಬರುವುದಿಲ್ಲ. ಹೀಗೆ ಅವಕಾಶವಿಲ್ಲದಿರುವಂಥ ಮತ್ತು ಪ್ರಯೋಜನವಿಲ್ಲದೆ ಇರುವಂಥ ಮನೆಯನ್ನು ತೆಗೆದುಬಿಡುವುದು ಒಳ್ಳೆಯದು. ಇದಕ್ಕೆ ಸರಿಯಾಗಿ ಈಗಲೇ ಸೂಕ್ತ ತಿದ್ದುಪಡಿಯನ್ನು ಕೂಡ ರಾಜ್ಯಾಂಗದಲ್ಲಿ ಮಾಡತಕ್ಕದ್ದು ಉಚಿತವೆಂದು ಅಭಿಪ್ರಾಯಪಡುತ್ತೇನೆ.

ಇನ್ನು ಸರ್ವಿಸ್‌ಗಳ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. I. P. S. ಮತ್ತು I.A.S. ಸರ್ವೀಸ್‌ಗಳು ಮತ್ತು ಇತರ ಸರ್ವೀಸುಗಳ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತ ಹೊರಗಡೆಯಿಂದ ಬರತಕ್ಕವರ ಮೇಲೆ ಇವರು ಒಂದು ಸವಾಲನ್ನೇ ಹಾಕಿದ್ದಾರೆ. ಏನೆಂದರೆ ಅವರು ಅವರ ಸಂಬಳದಲ್ಲಿ ಖೋತಾ ಮಾಡಿಕೊಳ್ಳಲು ಸಿದ್ಧರಾಗಿರಬೇಕಾಗುತ್ತದೆ ಎಂದು. ಈ ಹೇಳಿಕೆಯಲ್ಲಿ ಅಷ್ಟು ಬಲವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇದು ಮರ್ಜರ್ ಆಗತಕ್ಕ ಪ್ರದೇಶದವರಿಗೆ ಒಂದೂ ಅನಾನುಕೂಲವಾಗತಕ್ಕ ರೀತಿಯಲ್ಲಿರಬಾರದೆಂದು ಈ S.R. ಬಿಲ್ಲಿನಲ್ಲೇ ಹೇಳಿದ್ದಾರೆ.

> "Provided that the conditions of service applicable immediately before the appointed day to the case of any person who is required under this section to serve, as from that day, in connection with the affairs of any state shall not be varied to his disadvantage except with the previous approval of the Central Government."

ಈ ರೀತಿಯಾಗಿ ಹೇಳಿದ್ದಾರೆ. ಮುಖ್ಯಮಂತ್ರಿಗಳು ಹಾಗೆ ಹೇಳಿರತಕ್ಕದ್ದಾದರೂ ಏತಕ್ಕಾಗಿ ಎಂದರೆ, ನಮ್ಮ ಮೈಸೂರು ಸಂಸ್ಥಾನದಲ್ಲಿರುವ ನೌಕರರಿಗೂ ಕೂಡ ಹೊರಗಿನವರಿಗಿರುವಂತೆ ಹೆಚ್ಚಿನ ಸಂಬಳಸಾರಿಗೆಗಳನ್ನು ಕೊಡಬೇಕಾಗಿ ಬರಬಹುದೆಂಬ ಉದ್ದೇಶಕ್ಕಾಗಿ ಅವರು ಹಾಗೆ ಹೇಳಿರಬಹುದು. ಆದರೆ ಆಲ್ ಇಂಡಿಯಾ ಸರ್ವಿಸ್ಸುಗಳು ಇರಬೇಕೇ ಅಥವಾ ಬೇಡವೇ ಎಂದರೆ, ಇವು ಇರಲೇಬೇಕು. ಅದರೆ ಅವು ಈಗ ಇರತಕ್ಕ ರೀತಿಯಲ್ಲಿ ಸ್ವಲ್ಪ ತೊಡಕಿದೆ. ಹಿಂದೆ ಬ್ರಿಟಿಷ್‌ನವರ ಬ್ಯೂರಾಕ್ರೆಟಿಕ್ ಆಡಳಿತವಿದ್ದಂಥ ಕಾಲದಲ್ಲಿ ಅವರ ಆಡಳಿತವನ್ನು ಇಲ್ಲಿ ಭದ್ರಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅದನ್ನು ರಚನೆ ಮಾಡಿದ್ದರು. ಆದರೆ ಈ ದಿವಸ ನಾವೂ ಕೂಡ ಅದೇ ಅನುಕರಣ ರೀತಿಯಲ್ಲಿ ಕೇಡರುಗಳನ್ನು ರಚನೆ ಮಾಡಬಾರದೆಂದು ಹೇಳುತ್ತೇನೆ. ಇದರಿಂದ ನೌಕರರಲ್ಲಿ ಹೆಚ್ಚು ಅಸಮಾಧಾನಗಳು ಮೂಡುವುದಕ್ಕೆ ಅವಕಾಶವಾಗುತ್ತದೆ. ಆದಕಾರಣ ಕೆಲವು ಅಧಿಕಾರಿಗಳಿಗೆ ಅವರ ಸ್ಥಾನಮಾನಗಳನ್ನು ಮಾತ್ರ ಭದ್ರಪಡಿಸಿ, ಇತರರ ಸ್ಥಾನಮಾನಗಳ ಬಗ್ಗೆ ಹಾಗೆ ಕೈಬಿಡುವುದು ಸರಿಯಲ್ಲ. ಇದರಿಂದ ನೌಕರರಲ್ಲೇ ಬಹಳ ಅಸಮಾಧಾನಗಳು ಉಂಟಾಗಿ ಅವರು ಉತ್ಸಾಹದಿಂದ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ನಾವಾಗಿಯೇ ಈ ಒಂದು ಅಡ್ಡಿ ಅಡಚಣೆಯನ್ನು ತಂದೊಡ್ಡಿದ ಹಾಗೆ ಆಗುತ್ತದೆ. ಅದಕ್ಕಾಗಿ ಈ ವಿಷಯವನ್ನು ಪುನಃ ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇದೂ ಅಲ್ಲದೆ ಒಂದು ಪ್ರಾಂತ್ಯದಲ್ಲಿ ಒಂದೇ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆಲ್ಲಾ ಒಂದು ವಿಧವಾದ ಮತ್ತು ಒಂದೇ ರೀತಿಯಾಗಿರತಕ್ಕಂಥ ಸಂಬಳ ಸಾರಿಗೆಗಳ ಗ್ರೇಡ್ ಇಲ್ಲದಿದ್ದರೆ ಅವರೆಲ್ಲರೂ ತುಂಬ ಅಸಮಾಧಾನ ಹೊಂದಲು ಅವಕಾಶವಾಗುತ್ತದೆ. ಒಂದು ಪ್ರಾಂತ್ಯದಲ್ಲಿ ಒಂದೇ ಇಲಾಖೆಯಲ್ಲಿ ನಾಲ್ಕಾರು ರೀತಿಯ ಸಂಬಳಸಾರಿಗೆಗಳು ಒಂದೇ ದರ್ಜೆಯ ನೌಕರರಿಗೆ ಇರುವುದು ಖಂಡಿತ ಸರಿಯಾದದ್ದಲ್ಲ. ಆದುದರಿಂದ ಸರ್ಕಾರದವರು ಇದೇ ಸಂದರ್ಭದಲ್ಲಿ ಈ ವಿಚಾರವನ್ನು ಕೂಡ ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡತಕ್ಕದ್ದು ಅತ್ಯಗತ್ಯವೆಂದು ನಾನು ಅಭಿಪ್ರಾಯಪಡತಕ್ಕವನಾಗಿದ್ದೇನೆ.

ಇನ್ನು ಈ ಅಧಿಕಾರ ವಿಕೇಂದ್ರೀಕರಣದ ವಿಷಯ. ಇದು ಬಹಳ ಮುಖ್ಯವಾದ ವಿಷಯ. ಆದರೆ ನಾವು ಈ ದಿವಸ ಈ ಪ್ರಾಂತ್ಯಗಳ ಪುನರ್ವಿಂಗಡಣೆಯನ್ನು ಮಾಡಬೇಕೆಂದು ಏಕೆ ಹೇಳುತ್ತಿದ್ದೇವೆಂದರೆ—ಇದರಲ್ಲಿ ಒಂದು ದೊಡ್ಡ ಉದ್ದೇಶವೇನು ಅಡಗಿದೆಯೆಂದರೆ—ಆಯಾ ಪ್ರದೇಶದ ಜನರು ಅವರವರ ಅನುಕೂಲಕ್ಕೆ ತಕ್ಕಹಾಗೆ ಆಡಳಿತ ನಡೆಸುವುದಕ್ಕೂ ಮತ್ತು ಅವರ ಆಡಳಿತವನ್ನು ಒಂದು ಆರ್ಥಿಕ ಸುಭದ್ರತೆಯ ಮೇಲೆ ಅವರು ನಡೆಸಿಕೊಂಡು ಹೋಗುವುದಕ್ಕೂ ಅವರಿಗೆ ಅನುಕೂಲವಿರುವಂಥ ಒಂದೊಂದು ರಾಜ್ಯವನ್ನು ಏರ್ಪಾಡು ಮಾಡಬೇಕೆಂಬುದೇ ಇದರ ಮುಖ್ಯ ಉದ್ದೇಶ. ಒಟ್ಟಿನಲ್ಲಿ ದೇಶದಲ್ಲೆಲ್ಲಾ ಒಂದು ಸಮಗ್ರವಾದಂಥ ಭದ್ರತೆ-ಐಕಮತ್ಯ ಮತ್ತು ದೇಶ ಬೆಳೆಯುವುದಕ್ಕೆ ಒಂದು ಸದವಕಾಶ ಇರುವಂತೆ ಮಾಡತಕ್ಕ ಹಾದಿಯಲ್ಲಿ ಹೆಚ್ಚು ಸಾಧಕ ಬಾಧಕಗಳು ಇಲ್ಲದ ಹಾಗೆ ರಾಜ್ಯಗಳ ನಿರ್ಮಾಣ ಮಾಡಬೇಕೆಂಬುದೇ ಸರ್ಕಾರದವರ ಮುಖ್ಯೋದ್ದೇಶ.

ಈ ಪ್ರಜಾಪ್ರಭುತ್ವ ಸಾರ್ಥಕವಾಗಬೇಕಾದರೆ, ಹೆಚ್ಚು ಹೆಚ್ಚಾಗಿ ಅಧಿಕಾರದ, ಹಣದ ಮತ್ತು ರಾಜಕೀಯ ಸತ್ತೆಯ ವಿಕೇಂದ್ರೀಕರಣವಾಗಬೇಕು. ಆದರೆ ಈ ದಿನ ಯೋಜನೆಗಳನ್ನು ರಚನೆಮಾಡಿ ಕೈಕೊಳ್ಳುವ ಒಂದು ನೆಪದಲ್ಲಿ ಮತ್ತು ಭಾರತದ ಭದ್ರತೆಯ ನೆಪದಲ್ಲಿ ಹೆಚ್ಚು ಹೆಚ್ಚಾಗಿ ಅಧಿಕಾರಗಳು ಕೇಂದ್ರದ ಕೈ ಸೇರುತ್ತಾ ಇವೆ. ಹಣಕಾಸಿನ ವಿಷಯದಲ್ಲಿ ಮತ್ತು

(ಶ್ರೀ ಎಸ್. ಗೋಪಾಲಗೌಡ.)

ರಾಜಕೀಯ ಸತ್ತಾತ್ಮಕ ಅಧಿಕಾರದ ವಿಚಾರದಲ್ಲಿ ಕೇಂದ್ರೀಕರಣ ಹೆಚ್ಚು ಹೆಚ್ಚಾಗಿ ಆಗುತ್ತಾ ಇದೆ. ಅದು ದಿನ ದಿನಕ್ಕೆ ಹೆಚ್ಚುತ್ತಾ ಇದೆ. ಇಂಥ ಒಂದು ಮನೋಭಾವ ಅಥವಾ ಇಂಥ ಒಂದು ರಾಜಕೀಯ ಕಾರ್ಯಕ್ರಮಗಳು ದೇಶದ ಶಕ್ತಿಯನ್ನು ಕುಂದು ಮಾಡುವುದಲ್ಲದೆ ಪ್ರಜಾ ಪ್ರಭುತ್ವವನ್ನೇ ಅಲ್ಲಗಳೆಯುತಕ್ಕ ಕಾರ್ಯಗಳಾಗಿವೆ. ನಾವು ಸ್ವರಾಜ್ಯವನ್ನು, ಸರ್ವೋದಯದ ರಾಜ್ಯವನ್ನು ಮತ್ತು ಕೋ-ಅಪರೇಟಿವ್ ಕಾಮನ್‌ವೆಲ್ತ್ ಅನ್ನುವ ದೊಡ್ಡ ದೊಡ್ಡ ಉದ್ದೇಶವನ್ನು ಮತ್ತು ಸಮಾಜ ವಾದದ ಮಾದರಿಯ ಸಮಾಜವನ್ನು ಗುರಿಯಾಗಿಟ್ಟುಕೊಂಡಿದ್ದೇವೆ ಎಂದು ಸಾರುತ್ತಾ ಇರುವ ಜನ ಈ ದಿವಸ ಕ್ಷಣಕ್ಷಣದಲ್ಲೂ ಪ್ರಜಾಪ್ರಭುತ್ವಕ್ಕೆ ಮತ್ತು ಸಾಮಾನ್ಯ ಮನುಷ್ಯನಿಗೆ ದೊರೆಯಬಹುದಾದಂಥ, ಸಾಮಾನ್ಯ ಮನುಷ್ಯ ದಿನನಿತ್ಯದಲ್ಲಿ ಉಪಯೋಗಿಸಿಕೊಳ್ಳಬಹುದಾದಂಥ ಅಧಿಕಾರವನ್ನು ನಾವು ಕಿತ್ತುಕೊಳ್ಳುತ್ತಾ ಇದ್ದೇವೆ. ಒಂದು ಪಂಚಾಯಿತಿ ಆಗಲಿ, ಡಿಸ್ಟ್ರಿಕ್ಟ್ ಬೋರ್ಡಿಗಾಗಲಿ ಆಗಲಿ, ಇನ್ನಾವುದೇ ಒಂದು ಸಂಸ್ಥೆಗಾಗಲಿ ನಾಮಕರಣ ಮಾಡಿರತಕ್ಕ ಒಂದು ವೈಖರಿಯನ್ನು ನೋಡಿದರೂ ಕೂಡ ಇವೊತ್ತು ಆ ಮನೋಭಾವ ಎದ್ದು ಕಾಣುತ್ತಾ ಇದೆ. ಎಲ್ಲಿ ಜನತೆ ಅಧಿಕಾರವನ್ನು ತಾವೇ ನಿರ್ವಹಿಸಬಲ್ಲರೋ, ಎಲ್ಲಿ ತಮ್ಮ ಅಭಿವೃದ್ಧಿಯನ್ನು ತಾವೇ ಸಾಧಿಸಿಕೊಳ್ಳಬಲ್ಲರೋ ಅಲ್ಲಿ ಇವೊತ್ತು ಪ್ರಾಂತೀಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಕೈ ಹಾಕಿ ಅದನ್ನು ತನ್ನ ಕಡೆಗೆ ಎಳೆದುಕೊಳ್ಳತಕ್ಕಂಥ ಒಂದು ಮನೋಭಾವ ಎದ್ದು ಕಾಣುತ್ತಾ ಇದೆ. ಆ ಮನೋಭಾವ ಸಂಪೂರ್ಣವಾಗಿ ಹೋಗಬೇಕು. ಜನತೆಯನ್ನು ನಂಬದೇ ಇರತಕ್ಕ ಸರ್ಕಾರಗಳು ಯಾವ ರೀತಿ ಜನತೆಗೆ ನೀತಿಯನ್ನು ಹೇಳಲು ಅರ್ಹತೆಯನ್ನು ಪಡೆಯುತ್ತವೆ ಎಂಬ ಒಂದು ದೊಡ್ಡ ಪ್ರಶ್ನೆ ಈ ಸಂದರ್ಭದಲ್ಲಿ ಉದ್ಭವಿಸುತ್ತದೆ. ಆದ್ದರಿಂದ ಇವೊತ್ತು ಹೆಚ್ಚು ಹೆಚ್ಚಾಗಿ ಗ್ರಾಮ ಪಂಚಾಯಿತಿಗಳು, ಜಿಲ್ಲಾ ಬೋರ್ಡುಗಳು, ಸಮಿತಿಗಳು ಮತ್ತು ಪ್ರಾಂತೀಯ ಸರ್ಕಾರಗಳು ದೃಢವಾಗಿ, ಅನಂತರದಲ್ಲಿ ಕೇಂದ್ರ ಸರ್ಕಾರ ಅವುಗಳೊಡನೆ ಕೋ-ಆರ್ಡಿನೇಟ್ ಮಾಡಿ, ಈ ಎಲ್ಲ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ ಏರ್ಪಾಡು ಮಾಡಬೇಕು. ಪರದೇಶದ ಧಾಳಿಯನ್ನು ತಡೆಯುವುದಕ್ಕೆ ಡಿಫೆನ್ಸ್ ಇಲಾಖೆಯನ್ನೂ ಮತ್ತು ಅದೇ ರೀತಿ ಮುಖ್ಯವಾಗಿ ಬೇಕಾಗತಕ್ಕ ಕಮ್ಯೂನಿಕೇಷನ್ಸ್ ಇತ್ಯಾದಿಗಳನ್ನೂ ಕೇಂದ್ರ ಸರ್ಕಾರದವರು ಇಟ್ಟುಕೊಳ್ಳಬಹುದು. ಬೇರೆ ಎಲ್ಲ ಕೆಲಸಗಳನ್ನೂ ಹೆಚ್ಚು ಹೆಚ್ಚಾಗಿ ಪ್ರಾಂತ್ಯಗಳಿಗೆ ಕೊಡುವುದು ಬಹಳ ಸೂಕ್ತ ಮತ್ತು ಅದರಿಂದ ಹೆಚ್ಚು ಶೀಘ್ರವಾಗಿ ಆಯಾ ಪ್ರದೇಶಗಳು ಅಭಿವೃದ್ಧಿಯಾಗುವುದಕ್ಕೆ ಹೆಚ್ಚಿನ ಪ್ರಯೋಜನವಾಗತ್ತದೆ. ಆದ್ದರಿಂದ ಇದರಲ್ಲಿ ಅಡಕವಾಗಿರತಕ್ಕ ನಾಮಕರಣ ಪದ್ಧತಿಯನ್ನು ಅದು ಯಾವುದೇ ಸಭೆಗೆ ಆಗಿರಲಿ, ಸಣ್ಣ ಸಮಿತಿಗೇ ಆಗಿರಲಿ, ಅದನ್ನು ನಾವು ವಿರೋಧಮಾಡಬೇಕಾಗಿದೆ. ಅದನ್ನು ಕೈಬಿಡಬೇಕು ಮತ್ತು ಹೆಚ್ಚುಹೆಚ್ಚಾಗಿ ಪ್ರಾಂತ್ಯಗಳಿಗೆ ಆರ್ಥಿಕ ವಿಷಯದಲ್ಲಿ ಮತ್ತು ಆಡಳಿತ ವಿಷಯದಲ್ಲಿ ಅಧಿಕಾರವನ್ನು ಕೊಡುತ್ತಾ ಬರಬೇಕು. ಆಗ ಮಾತ್ರ ಈ ಆಡಳಿತ ಪರಿಪೂರ್ಣವಾಗುತ್ತದೆ ಮತ್ತು ಹೆಚ್ಚು ಹೆಚ್ಚು ಪರಿಪೋಷಿತವಾಗಿ ಬೆಳೆಯುವುದಕ್ಕೆ ಸಹಾಯಕವಾಗುತ್ತದೆ. ಜನತೆ ಆಗ ಸರ್ಕಾರದಲ್ಲಿ ಹೆಚ್ಚು ಹೆಚ್ಚು ಭರವಸೆಯನ್ನೂ, ನಂಬಿಕೆಯನ್ನೂ ಇಟ್ಟು ಸಹಕರಿಸುವುದಕ್ಕೆ ಅನುಕೂಲವಾಗುತ್ತದೆ. ಆಂಥ ವಿಧಿಗಳು ಈ ಮಸೂದೆಯಲ್ಲಿ ಅಡಕವಾಗುವ ರೀತಿಯಲ್ಲಿ ಈ ಕಾನೂನನ್ನು ಮಾಡಲು ನಾವು ಪ್ರಯತ್ನಪಡಬೇಕಾಗಿದೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ : ಬೌಂಡರಿ ಕಮಿಷನ್ ನೇಮಕ ಮಾಡಬೇಕು ಎನ್ನುವ ವಿಷಯ. ನಮ್ಮ ಪ್ರಾಂತ್ಯದಲ್ಲಿ ಕೆಲವು ವಿವಾದಾಸ್ಪದವಾದ ಸ್ಥಳಗಳು ಇವೆ. ಅವುಗಳನ್ನು ನೀವು ದೆಹಲಿಯಲ್ಲೋ, ಮೈಸೂರಿನಲ್ಲೋ ಕುಳಿತು ನಾಮಕರಣ ಮಾಡಿದಂಥ ಜನರು ತೀರ್ಮಾನ ಕೊಡುವುದು ಪ್ರಜಾ ಪ್ರಭುತ್ವ ಆಗುವುದಿಲ್ಲ, ಮತ್ತು ಆ ತೀರ್ಮಾನವನ್ನು ಜನತೆ ಆಹ್ವಾನಿಸಲಿ ಅಥವಾ ಒಪ್ಪಿಕೊಳ್ಳಲಿ ಎಂದು ನಿರೀಕ್ಷೆ ಮಾಡುವುದೂ ಕೂಡ ತಪ್ಪಾಗುತ್ತದೆ. ಆದ್ದರಿಂದ ಎಲ್ಲಿ ಸಂಪೂರ್ಣ ಸಂದೇಹ ಮತ್ತು ವಿವಾದ ಉಂಟಾಗಿತ್ತೋ ಅಂಥ ಪ್ರದೇಶದಲ್ಲಿ ಅಲ್ಲಿನವರನ್ನೇ ಒಳಗೊಂಡ ಒಂದು ಬೌಂಡರಿ ಕಮಿಷನ್ ರಚನೆಮಾಡಿ ಆ ಪ್ರದೇಶ ಒಂದು ತೀರ್ಮಾನವನ್ನು ಒಪ್ಪಿಸುವ ಕಾಲದಲ್ಲಿ ಅವರ ನಿರ್ಣಯಗಳನ್ನು ಕೊಡಬೇಕು. ಅಂಥ ನಿರ್ಣಯಗಳನ್ನು ನೋಡುತ್ತಲೇ ನಿಜವಾಗಿಯೂ ಒಪ್ಪಿಕೊಳ್ಳುವ ಒಂದು ತೀರ್ಮಾನವನ್ನು ನಾವು ತೆಗೆದುಕೊಳ್ಳಬೇಕು.

ಬಹುಶಃ ಈ ವಿಷಯದಲ್ಲಿ ಪುನಃ ನಮಗೆ ಹೆಚ್ಚಿನ ಅವಕಾಶ ದೊರೆಯುವುದಿಲ್ಲವೆಂದು ಕಾಣುತ್ತದೆ. ತಿದ್ದುಪಡಿಗಳ ಮೇಲೆ ಮಾತನಾಡುವಾಗ ಬಿಟ್ಟರೆ, ಬಹುಶಃ ಈಗ ಕೊನೆಯ ತೀರ್ಮಾನವನ್ನು ಕೈಕೊಳ್ಳುತ್ತಾ ಇದ್ದೇವೆ ಎಂದು ಕಾಣುತ್ತದೆ. ಈ ಸಭೆಯ ಕಾಲದಲ್ಲಿ ಈ ವಿಷಯ ಚರ್ಚೆಯಾಗಿ ಈ ರಾಜ್ಯ ಅಸ್ತಿತ್ವಕ್ಕೆ ಬರುವುದಕ್ಕೆ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದೇವೆ ಎಂದು ಹೇಳಬಹುದು. ಆದರೂ ಈ ದಿನ ಒಂದು ಒಳ್ಳೆಯ ವಾತಾವರಣ ಬಂದಿದೆ. ಹಿಂದೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಇದ್ದಂಥ ಒಂದು ಕಹಿ ವಾತಾವರಣ ಇವೊತ್ತು ಇಲ್ಲ. ಹಿಂದಿನ ಸಲ ಈ ವಿಷಯದಲ್ಲಿ ಚರ್ಚೆ ನಡೆದಾಗ ಒಂದು ಉತ್ಕಟ ಪರಿಸ್ಥಿತಿ ನಮ್ಮ ದೇಶದಲ್ಲಿ ಉಂಟಾಗಿತ್ತು. ಅದು ಕನ್ನಡಿಗರಿಗೆ ಮಾತ್ರವಲ್ಲ, ಇಡೀ ದೇಶಕ್ಕೇ ಒಂದು ದೊಡ್ಡ ಕಠಿಣವಾದ ಸಮಸ್ಯೆ ಆಗಿತ್ತು. ಇವೊತ್ತು ಅಂಥ ಒಂದು ವಾತಾವರಣ ತಿಳಿಗೊಂಡಿದೆ. ಅದು ಒಂದು ಶುಭ ಸೂಚನೆ. ಮುಂದೆ ಬರತಕ್ಕ ಒಂದು ರಾಜ್ಯಕ್ಕೆ ಒಳ್ಳೆಯ ಒಂದು ಆಹ್ವಾನವನ್ನು ಕೊಡುತ್ತಾ ಇದ್ದೇವೆ ಎಂದು ನಾವು ಧೈರ್ಯವಾಗಿ ಹೇಳಬಹುದು. ಮುಖ್ಯವಾಗಿ ಹೊರಗಡೆ ಇರತಕ್ಕ ಕನ್ನಡ ಪ್ರದೇಶಗಳವರು ಒಂದು ದೊಡ್ಡ ವ್ಯಥೆಯಿಂದ ಇದ್ದಂತೆ ಆಗಿತ್ತು. ಕನ್ನಡದ ಇತರ ಪ್ರದೇಶಗಳವರು ಈ ರಾಜ್ಯಕ್ಕೆ ಬರುವ ಒಂದು ಸಂದರ್ಭ ಅಥವಾ ಒಂದು ಹೊಸ ರಾಜ್ಯ ಆಗತಕ್ಕ ಸಂದರ್ಭದಲ್ಲಿ ಎಲ್ಲರೂ ಸೇರಿ ಒಂದೇ ಮನೋಭಾವದಿಂದ ಎಲ್ಲರೂ ಈ ರಾಜ್ಯದ ಅಭಿವೃದ್ಧಿಗಾಗಿ ದುಡಿಯುವುದಕ್ಕೆ ಮನಸ್ಸನ್ನು ಮಾಡೋಣ ಎಂದು ಹೇಳಿ ಈ ಸಂದರ್ಭದಲ್ಲಿ ಎಲ್ಲರೂ ಆಶಿಸಬಹುದಾಗಿದೆ.

ಇನ್ನು ನನ್ನ ಮಿತ್ರರು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳುತ್ತಾರೆ. ಅದು ಈ ಬಳ್ಳಾರಿ ಮತ್ತು ಕೋಲಾರದ ವಿಷಯ. ಅನೇಕರಿಗೆ ಇದು ಅಸಮಾಧಾನವನ್ನುಂಟುಮಾಡಿದೆ. ನಾನು ತಾತ್ವಿಕವಾಗಿ ಭಾಷಾವಾರು ಪುನರ್ ವಿಂಗಡನೆಗೆ ಬದ್ಧನಾಗಿದ್ದೇನೆ. ಆ ವಿವಾದ ನನಗೂ ಶ್ರೀ ನಾರಾಯಣರೆಡ್ಡಿಯವರಿಗೂ ಬಂದು, ನಮ್ಮಲ್ಲೇ ಅದು ತೀರ್ಮಾನವಾಗಿದೆ. ಕನ್ನಡದ ಯಾವುದೇ ಪ್ರದೇಶವಾಗಲಿ ಅದು ಕನ್ನಡದ ಭಾಗಕ್ಕೆ ಸೇರಲು ನನ್ನ ಅಭ್ಯಂತರವಿಲ್ಲ. ಈ ವಿಷಯದಲ್ಲಿ ಎಷ್ಟೋ ಜನ

ಯಾವ ಯಾವ ನಿಲುವನ್ನು ತೆಗೆದುಕೊಂಡಿದ್ದಾರೋ ಅವೆಲ್ಲವೂ ಸಮರ್ಥನೀಯ ಮತ್ತು ಅವುಗಳನ್ನು ಒಪ್ಪಿಕೊಳ್ಳಲೇಬೇಕು.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ನಿಮ್ಮಿಬ್ಬರ ಮಾತನ್ನು ಯಾರೂ ಕೇಳುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅದು ಬೇರೆ ವಿಷಯ. ಆದ್ದರಿಂದ ನಾವು ಯಾವ ರೀತಿ ಕನ್ನಡ ಪ್ರಾಂತ್ಯ ಆಗಬೇಕೆಂದು ಹೇಳುತ್ತೇವೆಯೋ ಹಾಗೆಯೇ ವಿಶಾಲಾಂಧ್ರ ಆಗಬೇಕು ಮತ್ತು ಇತರ ಭಾಷಾವಾರು ಪ್ರಾಂತ್ಯಗಳ ರಚನೆ ಆಗಬೇಕು ಎಂಬ ನಿಲುವನ್ನೂ ಅವರು ತೆಗೆದುಕೊಂಡರು. ಎಸ್. ಆರ್. ಸಿ. ಯವರು ತುಂಗಭದ್ರ ನೀರಿನ ಆಧಾರದ ಮೇಲೆ ಪುನಃ ಬಳ್ಳಾರಿ ಆಂಧ್ರಕ್ಕೆ ಹೋಗಬೇಕೆಂದರೂ ಕೂಡ ಇವತ್ತು ಆ ವಿಷಯದಲ್ಲಿ ಸರಿಯಾದ ಒಂದು ತೀರ್ಮಾನವನ್ನು ಕೊಟ್ಟು ಈ ಮಸೂದೆಯಲ್ಲಿ ಬಳ್ಳಾರಿ ಮೈಸೂರಿನಲ್ಲೇ ಇರಬೇಕೆಂಬ ತೀರ್ಮಾನವನ್ನು ಮಾಡಿದ್ದಾರೆ. ಅದು ಸ್ವಾಗತಾರ್ಹವಾದ ಒಂದು ನಿಲುವು. ಹಾಗೆಯೇ ನಮ್ಮ ರಾಜ್ಯದಲ್ಲಿರತಕ್ಕಂಥ ಹೆಚ್ಚಾಗಿ ತೆಲುಗು ಭಾಷೆಯಿಂದಲೇ ಆವರಿಸಿರತಕ್ಕ ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸತಕ್ಕದ್ದು ನ್ಯಾಯವಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಇದಕ್ಕೆ ಪ್ಲೆಬಿಸೈಟ್ ಬೇಕಾದರೂ ತೆಗೆದುಕೊಂಡು ಆ ರೀತಿ ಹಂಚಿಕೆಯನ್ನು ಮಾಡಬಹುದು. ಆ ರೀತಿ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆ ಹೇಳುವುದರಿಂದ ನಾನು ತಾತ್ವಿಕವಾಗಿಯೂ ಕೂಡ ನನ್ನ ನಿಲುವನ್ನು ತೋರಿಸಿದ್ದೇನೆ ಎಂಬ ಒಂದು ಸಮಾಧಾನ ನನಗೆ ಉಂಟಾಗುತ್ತದೆ ಮತ್ತು ನಮ್ಮ ಶ್ರೀ ನಾರಾಯಣ ರೆಡ್ಡಿಯವರಿಗೂ ಸಹ ಉಂಟಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಈ ಮಸೂದೆಯಲ್ಲಿ ನಿಮ್ನವರ್ಗದವರಿಗೆ ಪ್ರಾತಿನಿಧ್ಯ ಕೊಡತಕ್ಕ ಬಗ್ಗೆ ಮತ್ತು ಅಲ್ಪ ಸಂಖ್ಯಾತರಿಗೆ ರಕ್ಷಣೆಯನ್ನು ಕೊಡತಕ್ಕ ಬಗ್ಗೆ ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಅದನ್ನು ನಾನು ಸಾಮಾನ್ಯವಾಗಿ ಸ್ವಾಗತಿಸುತ್ತೇನೆ. ಒಟ್ಟಿನಲ್ಲಿ ಈ ಮಸೂದೆಯನ್ನು ಕಾರ್ಯಗತಮಾಡುವುದರಿಂದ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ—ಇವೊತ್ತು ಬರೀ ಮಾತಿನಲ್ಲಿ ಇದೆ—ಹೆಚ್ಚು ಕಾರ್ಯದಲ್ಲಿ ಬರುವುದಕ್ಕೆ ಶ್ರಮಿಸಬೇಕು ಮತ್ತು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿರತಕ್ಕ ವಿಧಿಗಳನ್ನೂ ಸಾಧ್ಯವಾದ ಮಟ್ಟಿಗೂ ನಾವು ತೊಡೆದುಹಾಕುವುದಕ್ಕೆ ಪ್ರಯತ್ನ ಪಡಬೇಕು. ಈ ಮಸೂದೆಯನ್ನು ಒಪ್ಪಿಕೊಳ್ಳುವುದೇ ಕೊನೆಯ ಗುರಿ ಅಲ್ಲ. ಹಾಗೇನಾದರೂ ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಈ ರಾಜ್ಯಗಳು ಅಸ್ತಿತ್ವಕ್ಕೆ ಬಂದ ಮಾರನೆ ಕ್ಷಣವೇ ಏನು ಬದಲಾವಣೆ ಆಗಬೇಕು ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಒಂದು ಆಧಾರದ ಮೇಲೆ ನಾವು ಮುಂದೆ ಸುಸೂತ್ರವಾಗಿ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಹೋಗತಕ್ಕ ಸಮಾನತೆಯ ರಾಜ್ಯಗಳನ್ನು ರಚಿಸಿಕೊಳ್ಳಬೇಕಾಗಿದೆ. ಅದಕ್ಕೆ ಇದು ತಳಹದಿಯೇ ಹೊರತು ಇದೇ ಕೊನೆಯ ಒಂದು ಗುರಿ ಅಲ್ಲ ಎಂಬುದನ್ನು ನಾವು ಗಮನದಲ್ಲಿಟ್ಟುಕೊಂಡು ಈ ಮಸೂದೆ ಇನ್ನಷ್ಟು ಹೆಚ್ಚು ಪರಿಪೂರ್ಣವಾದ ರೀತಿಯಲ್ಲಿ ಆಗಿ ಹೆಚ್ಚು ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಆಗಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಪ್ರಾಂತ ಪುನರ್‌ವಿಂಗಡಣೆಯ ವಿಷಯವಾಗಿ. . . .

Mr. SPEAKER.—We have taken a decision to close the general debate today and that tomorrow and the day after should be reserved for amendments. Once a decision is taken, you must stick to it, because it is taken with the agreement of the House. That ought not to be changed.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ ವಿಷಯದಲ್ಲಿ ಮಾತನಾಡುವುದಕ್ಕೆ ಇನ್ನೂ ಸ್ವಲ್ಪ ಕಾಲಾವಕಾಶ ಕೊಡಬೇಕು, ಸ್ವಾಮಿ.

Mr. SPEAKER.—Amendments are more important than general discussion.

Sri B. HUTCHE GOWDA.—After lunch, there will be only a few speakers.

Mr. SPEAKER.—I do not think other speakers will take up so much time. The House can sit for some time more today, if they like.

Sri M. PALANIYAPPAN (Ulsoor).—When the Hon'ble Members have opportunity to table amendments, they can speak on those amendments.

Mr. SPEAKER.—Members who are anxious will sit late and finish general discussion today.

(*Sri M. Linganna rose.*)

Mr. SPEAKER.—You should not change the programme often. Programme once decided upon must be adhered to.

Sri Mulka GOVINDA REDDY.—I think it can be changed with the consent of the members of the House.

ಶ್ರೀ ವಿ. ವೆಂಕಟಪ್ಪ.—ಪ್ರಾಂತ ಪುನರ್‌ವಿಂಗಡನೆಯ ವಿಷಯ ಬಂದ ಮೇಲೆ, ಅದರಲ್ಲೂ ಈ ಪುನರ್‌ವಿಂಗಡನೆ ಸಮಿತಿಯವರ ವರದಿ ಬಂದ ಮೇಲೆ, ಈ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದ ಹೇಳಿದವರ ಪೈಕಿ ನಾನೂ ಒಬ್ಬ. ಅದಕ್ಕೆ ನಾನು ಹೇಳಿದ ಕಾರಣಗಳು ಅನೇಕರಿಗೆ ಸರಿಹೋಗದೆ ಇದ್ದಿರಬಹುದು. ಆದರೆ ಬಹುಮಟ್ಟಿಗೆ ನನ್ನ ಮನಸ್ಸಿಗೆ ಮೈಸೂರು ವಿಶಾಲವಾಗುವುದರಿಂದ ಕೆಲವು ವಿಷಯಗಳಲ್ಲಿ ನಮ್ಮ ಜನರಿಗೆ ತೊಂದರೆಯಾಗುತ್ತದೆ ಎನ್ನುವ ಭಾವನೆ ಇದ್ದೇ ಇದೆ. ಈ ರೀತಿ ಮೈಸೂರು ಚಿಕ್ಕದಾಗಿ ಉಳಿಯಬೇಕು, ಈಗಿರುವ ರೀತಿಯಲ್ಲೇ ಇರಬೇಕು, ಆಡಳಿತ ದೃಷ್ಟಿಯಿಂದಲೂ ಕೂಡ ಇದು ಸರಿಯಾಗಿದೆ ಎಂದು ಹೇಳಿದಂಥ ನಮ್ಮಲ್ಲಿ ಕೆಲವರು ಈ ದಕ್ಷಿಣ ಪ್ರದೇಶ ಅಥವಾ ಬೈಲಿಂಗ್ವಲ್ ಅಥವಾ ಟ್ರೈಲಿಂಗ್ವಲ್ ಯಾವುದಾದರೂ ಸರಿಯೇ ಅಂಥ ಪ್ರಾಂತ ಆಗಬಹುದು ಎಂದು ಹೇಳಿದೆವು. ಅದರ ವಿಷಯದಲ್ಲಿ ''ಏನಿದು, ವಿಚಿತ್ರವಾಗಿ ಕಾಣುತ್ತಿದೆಯಲ್ಲಾ, ಚಿಕ್ಕದಾಗಿರಲಿ ಎಂದು ಹೇಳಿದವರು ಕರ್ನಾಟಕ ಪ್ರಾಂತ್ಯವೇ ಆಗಬಾರದು ಎಂದು ಹೇಳಿದವರು ಅದಕ್ಕಿಂತಲೂ ದೊಡ್ಡ ಪ್ರಾಂತದ ವಿಲೀನ ಆಗಬಹುದು ಎಂದು ಹೇಳುತ್ತಾರೆಯಲ್ಲ, ಅವರ ಮನಸ್ಸಿನಲ್ಲಿ ಏನಿದೆಯೋ ಎಂಬುದನ್ನು ಮನಶ್ಶಾಸ್ತ್ರಜ್ಞರೇ ಕಂಡು

(ಶ್ರೀ ವಿ. ವೆಂಕಟಪ್ಪ.)

ಹಿಡಿಯಬೇಕು '' ಎಂದು ಕೆಲವರು ಹೇಳಿದ್ದಾರೆ. ಮನಶ್ಶಾಸ್ತ್ರಜ್ಞರು ಏನು ಹೇಳುತ್ತಾರೆಯೋ ನನಗೆ ತಿಳಿಯದು. ನನಗೆ ಏನು ಕಾರಣ ತೋರಿತು ಎಂದರೆ, ಈ ಮೈಸೂರು ದೇಶ ಇರುವ ಹಾಗೆ ಇಲ್ಲದೆ, ಬದಲಾವಣೆ ಆಗುವುದರಲ್ಲಿ ಏನು ತೊಂದರೆಯಾಗುತ್ತದೆ ಎಂಬುದನ್ನು ಸ್ವಲ್ಪ ಮಟ್ಟಿಗೆ ನಾವು ಅರಿತಿದ್ದೇವೆ.

4-30 P.M.

ಈಗ ಬಳ್ಳಾರಿ ನಮ್ಮ ಜೊತೆಯಲ್ಲಿ ಸೇರಿತು. ಆದರೆ ಬಳ್ಳಾರಿಯ ಸ್ಥಿತಿ ಏನಾಗಿದೆ ಎಂಬ ವಿಷಯದಲ್ಲಿ ಅಲ್ಲಿನ ಮಾನ್ಯ ಸದಸ್ಯರು ಈ ಸಭೆಯಲ್ಲಿ ವಿಶದವಾಗಿ ಹೇಳಿದ್ದಾರೆ. ಅಲ್ಲಿ ಕೆಲವು ಮೈಸೂರು ಕಾನೂನುಗಳಿವೆ, ಕೆಲವು ಮದರಾಸಿನ ಕಾನೂನುಗಳಿವೆ. ಕೆಲವು ಅಧಿಕಾರಿಗಳು ಅಲ್ಲಿ ಯಾವ ರೀತಿ ವರ್ತನೆ ಮಾಡುತ್ತಿದ್ದಾರೆ, ನಮ್ಮ ದೇಶಕ್ಕೆ ಸೇರಿದ್ದರಿಂದ ಪೋಲೀಸಿನವರು ಅಲ್ಲಿ ಯಾವ ರೀತಿ ರಕ್ಷಣೆಯನ್ನು ನೋಡಿಕೊಂಡು ಆಡಳಿತವನ್ನು ನಡೆಸುತ್ತಿದ್ದಾರೆ ಎನ್ನುವುದನ್ನು ಬಳ್ಳಾರಿಯ ಮಿತ್ರರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ಬಳ್ಳಾರಿ ನಮ್ಮ ಸಂಸ್ಥಾನಕ್ಕೆ ಸೇರಿದ ಮೇಲೆ ನಮ್ಮ ಜನರಿಗೆ ಹೇಗೆ ಕೆಲವು ತೊಂದರೆಗಳುಂಟಾಯಿತೆಂಬುದನ್ನು ನಾನು ಅನೇಕ ವೇಳೆ ಈ ಸಭೆಯಲ್ಲಿ ಹೇಳಿದ್ದೇನೆ. ಮೈಸೂರು ವಿಶಾಲವಾದರೆ, ಮುಂದೆ ಆ ರೀತಿ ಆಗುವುದಾದರೆ, ನಾವು, ನಮ್ಮ ದೇಶದ ಜನರು, ಸ್ವಲ್ಪಮಟ್ಟಿಗೆ ಹೆಚ್ಚು ಕಂದಾಯ ಕೊಡಬೇಕಾಗುತ್ತದೆ. ಮುಖ್ಯ ಮಂತ್ರಿಗಳೇನೋ ತಮ್ಮ ಭಾಷಣದಲ್ಲಿ ನಾವು ಕೊಟ್ಟಂಥ ಸಂಬಳವನ್ನು ನಮ್ಮಲ್ಲಿಗೆ ಬಂದು ಸೇರುವ ಅಧಿಕಾರಿಗಳು ತೆಗೆದುಕೊಳ್ಳಬೇಕು, ಹಾಗಿಲ್ಲದೆ ಇದ್ದರೆ ಕಷ್ಟವಾಗುತ್ತದೆ ಎಂದು ಹೇಳಿದರು. ಅಧಿಕಾರವಿರುವಾಗ ಸ್ವಲ್ಪ ಮಟ್ಟಿಗೆ ನಡೆಸಿದರೂ ನಡೆಸುವುದಕ್ಕಾಗುತ್ತದೆಯೋ ಏನೋ. ಆದರೆ ಮನುಷ್ಯನ ಸ್ವಭಾವವನ್ನು ಬದಲಾವಣೆ ಮಾಡುವುದು ಕಷ್ಟ. ನಮ್ಮಲ್ಲಿ ಅಷ್ಟರ ಮಟ್ಟಿನ ತ್ಯಾಗ ಬುದ್ಧಿ ಏನಾದರೂ ಇದ್ದು, ದೇಶದ ಸೇವೆ ಮಾಡುವುದಕ್ಕೋಸ್ಕರ ಈ ಕಾರ್ಯವನ್ನು ಒಪ್ಪಿಕೊಂಡಿದ್ದೇವೆ, ಅದನ್ನು ನಡೆಸಿಕೊಂಡು ಬರಬೇಕು ಎಂದು ಹೇಳತಕ್ಕ ಜನ ಬಹಳ ವಿರಳ. ಯಾರೂ ಇಲ್ಲವೇ ಇಲ್ಲವೆಂದು ಹೇಳಲಾರೆ; ಆದರೆ ಬಹಳ ವಿರಳವೆಂದು ಮಾತ್ರ ಹೇಳುತ್ತೇನೆ. ಆದುದರಿಂದ ಏನಾಗುತ್ತದೆಂದು ನಾವು ಊಹಿಸಬಹುದು. ಬಳ್ಳಾರಿಯ ಸ್ನೇಹಿತರು ಕೆಲವರು, ತಮ್ಮ ಸಂಬಳಗಳು ಕಡಿಮೆಯಾಯಿತೆಂದು ಪೋಲೀಸಿನವರು ಯಾವ ರೀತಿ ವರ್ತನೆ ಮಾಡುತ್ತಿದ್ದಾರೆಂದೂ, ಬೇರೆ ವಿಧದಲ್ಲಿ ಸಂಪಾದನೆ ಮಾಡುವುದಕ್ಕೆ ಸ್ವಲ್ಪವೂ ಭಯ ಪಡುವುದಿಲ್ಲವೆಂದೂ ಹೇಳಿದರು ಎಂಬುದಾಗಿ ಆಗಲೇ ತಿಳಿಸಿದ್ದೇನೆ. ಹಾಗೆ ಆ ವಿಧವಾದ ಮನೋಭಾವ ಅಧಿಕಾರಿಗಳಲ್ಲಿ ಬೆಳೆದರೆ ನಮ್ಮ ದೇಶದಲ್ಲಿ ಜನರಿಗೆ ಸೌಕರ್ಯ ಉಂಟಾಗುತ್ತದೆಂದು ಹೇಳುವುದಕ್ಕೆ ಸಾಧ್ಯವೇ? ನಮ್ಮ ಮೈಸೂರಿನಲ್ಲಿ ಒಂದು ಕಟ್ಟಡದಲ್ಲಿರತಕ್ಕವರು ಕೆಲವು ಸಂಬಳಗಳನ್ನು ತೆಗೆದುಕೊಳ್ಳುತ್ತಾರೆ. ಇನ್ನೊಂದು ಕಡೆ ಇಲ್ಲಿ ಸೆಕ್ರೆಟೇರಿಯಟ್‌ನಲ್ಲಿ ಇರತಕ್ಕವರು ಅದಕ್ಕಿಂತ ಕಡಿಮೆ ಸಂಬಳ ತೆಗೆದುಕೊಳ್ಳುತ್ತಾರೆ. ಇದು ಯಾರಿಗಾದರೂ ಸರಿ ಎಂದು ತೋರುತ್ತದೆಯೇ ಎಂದು ಅನೇಕ ಜನರು ಕೇಳುತ್ತಾರೆ. ಇವರೇನೋ ಬೇರೆ ಬೇರೆ ಆಡಳಿತಕ್ಕೆ ಸೇರಿದವರು, ಆ ರೀತಿ ಇದೆ ಎಂದು ಹೇಳಬಹುದು. ಆದರೆ ಒಂದೇ ಆಡಳಿತಕ್ಕೆ ಸೇರಿ, ನಮ್ಮ ಮೈಸೂರಿನ ಸ್ಥಿತಿಯಲ್ಲಿ ಎಲ್ಲ ಅಧಿಕಾರಿಗಳೂ ಇರಬೇಕು, ನಾವೇನು ಸಂಬಳ ಕೊಡುತ್ತೇವೆಯೋ ಅದಕ್ಕೇ ಒಪ್ಪಿಕೊಳ್ಳಬೇಕೆಂದರೆ ವಿಧಿ ಇಲ್ಲದೆ ಒಪ್ಪಿಕೊಳ್ಳಬಹುದು. ಆದರೆ ನಮ್ಮ ಆಡಳಿತ ದೃಷ್ಟಿಯಿಂದ ಅದು ಸರಿಹೋಗುತ್ತದೆಯೇ, ಚೆನ್ನಾಗಿ ನಡೆಯುತ್ತದೆಯೇ, ಜನಗಳ ಕಷ್ಟವೇನಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಹೀಗೆ ಅನೇಕ ವಿಧವಾದ ತೊಂದರೆಗಳು ಬರುತ್ತವೆ. ಶ್ರೀಮಾನ್ ಲಕ್ಕಪ್ಪನವರು ಇವತ್ತಿನ ದಿವಸ ಏನು ಹೇಳಿದರೋ, ಆವಾಗ ನಾನಿರಲಿಲ್ಲ. ಅವರು ಮೈಸೂರು ವಿಲೀನ ವಿರೋಧ ಸಮ್ಮೇಳನದ ಅಧ್ಯಕ್ಷರಾಗಿ ಒಂದು ಭಾಷಣಮಾಡಿ, ವಿಷಯಸಂಗ್ರಹ ವರದಿಯಲ್ಲಿರತಕ್ಕ ಅನೇಕ ವಿಷಯಗಳನ್ನು ಕ್ರೋಢೀಕರಿಸಿ, '' ನಮ್ಮ ಮೈಸೂರು ದೇಶದಲ್ಲಿರತಕ್ಕ ನಾವುಗಳು ಇಲ್ಲಿ ರಸ್ತೆಗಳು ಕಡಿಮೆ ಎಂದು ಹೇಳುತ್ತೇವೆ. ನಮ್ಮ ಮೈಸೂರು ದೇಶದಲ್ಲಿ ಹತ್ತು ಸಾವಿರ ಚದರ ಮೈಲಿಗಳಿಗೆ ಎಷ್ಟು ರಸ್ತೆಗಳಿವೆಯೋ ಇತರ ಕಡೆಗಳಲ್ಲಿ, ಈಗ ನಮ್ಮ ದೇಶಕ್ಕೆ ಸೇರಬೇಕು ಎಂದು ಏನು ತೀರ್ಮಾನವಾಗಿದೆಯೋ ಆ ಪ್ರಾಂತಗಳಲ್ಲಿ, ಆ ರಸ್ತೆಗಳನ್ನು ನಮ್ಮ ದೇಶದ ಮಟ್ಟಕ್ಕೆ ತರಬೇಕಾಗುತ್ತದೆ. ಸಾಧಾರಣವಾಗಿ ಹಾಗೆ ಮಾಡಬೇಕಾದದ್ದು ಕರ್ತವ್ಯ. ಯಾವ ಸರ್ಕಾರವಾದರೂ ಮಾಡಲೇಬೇಕು. ಹಾಗೆ ಮಾಡಬೇಕಾದರೆ ಕಮಿಟಿಯವರು ಹೇಳಿರುವ ರೀತಿಯಲ್ಲಿ ಸುಮಾರು 12½ ಕೋಟಿ ರೂಪಾಯಿಗಳು ಬೇಕಾಗುತ್ತವೆ '' ಎಂದು ಹೇಳಿದ್ದಾರೆ. ಹೀಗೆ ಪ್ರತಿಯೊಂದು ವಿಷಯದಲ್ಲಿಯೂ ನಮ್ಮ ದೇಶಕ್ಕೆ ಸಮಾನವಾಗಿ ಆ ಪ್ರಾಂತಗಳನ್ನು ಮಾಡಬೇಕಾದರೆ ಹೆಚ್ಚು ಹಣಬೇಕಾಗುತ್ತದೆ ಎಂಬುದು ವ್ಯಕ್ತವಾಗಿದೆ. ಆ ಹಣವನ್ನು ಒದಗಿಸಬೇಕಾದರೆ ನಮ್ಮ ದೇಶದ ಜನರು ಇನ್ನೂ ಹೆಚ್ಚು ಕಂದಾಯ ಕಾಣಿಗೆಗಳನ್ನು ಕೊಡಬೇಕು. ಈ ಭಾರವನ್ನು ಹೊರತಕ್ಕ ಶಕ್ತಿ ನಮ್ಮ ಜನರಿಗಿಲ್ಲವೆಂಬುದನ್ನು ಅನೇಕ ವರ್ಷಗಳಿಂದ ಹೇಳಿಕೊಂಡು ಬಂದಿದ್ದೇವೆ. ಅದು ಈಗ ಹೆಚ್ಚಾಗತಕ್ಕದ್ದು ಸರಿಯಲ್ಲವೆಂದು ನನ್ನ ಮತ್ತು ನಮ್ಮಲ್ಲಿ ಕೆಲವರ ಅಭಿಪ್ರಾಯ. ಆದುದರಿಂದ ಈ ರೀತಿ ಆಗದೆ ಇದ್ದರೆ ಒಳ್ಳೆಯದು. ಅವರುಗಳು ಬೇರೆ ಒಂದು ಪ್ರಾಂತವನ್ನು ಮಾಡಿಕೊಳ್ಳುವುದರಲ್ಲಿ ಯಾವ ತೊಂದರೆಯೂ ಆಗಲಾರದು. ಆ ರೀತಿ ಮಾಡಿಕೊಳ್ಳಬೇಕು ಎಂದು ಸೂಚನೆ ಮಾಡಿದೆವು.

ದಕ್ಷಿಣಪ್ರಾಂತ ಅಥವಾ ಎರಡು ಮೂರು ಭಾಷೆಗಳನ್ನಾಡತಕ್ಕ ಪ್ರದೇಶಗಳು ಸೇರಿ ಪ್ರಾಂತಗಳಾಗಬೇಕು ಎಂದು ಸೂಚನೆ ಬಂದಾಗ, ಈಗ ದೊಡ್ಡ ಪ್ರಾಂತ ಮಾಡುವುದರಲ್ಲಿ ಸ್ವಲ್ಪ ಅಸಮಂಜಸವಾಗುತ್ತದೆ, ಕಷ್ಟವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೆ; ಹಾಗೆ ಆಗುವುದನ್ನು ಯಾವ ರೀತಿ ಒಪ್ಪುವುದಕ್ಕೆ ಸಾಧ್ಯವೆಂಬುದು ಹೊಳೆದಿರಲಿಲ್ಲ. ಶ್ರೀಮಾನ್ ವೀರಣ್ಣಗೌಡರು ಅವರ ಹೇಳಿಕೆಯನ್ನು ಕೊಟ್ಟಾಗಲೂ ಕೂಡ ನನಗೆ ಮನಸ್ಸಿನಲ್ಲಿ ಸ್ವಲ್ಪ ಮಟ್ಟಿನ ಶಂಕೆ ಇತ್ತು; ಇದನ್ನು ಒಪ್ಪಿಕೊಂಡರೆ ಸರಿ ಹೋಗುತ್ತದೆಯೋ ಇಲ್ಲವೋ ಎಂಬ ಶಂಕೆ ಇತ್ತು. ಆ ಮೇಲೆ ಯಾರಾರು ಈ ರೀತಿ ಎರಡೆರಡು ಸಂಸ್ಥಾನ ಅಥವಾ ಮೂರು ಸಂಸ್ಥಾನಗಳು ಆಗಬೇಕು ಎಂದು ಸೂಚನೆ ಮಾಡಿದ್ದರೋ ಅಂಥವರು ಒಂದು ಹೇಳಿಕೆಯನ್ನು ಕೊಟ್ಟರು. ಅದರಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ.

ಡಾಕ್ಟರ್ ಬಿ. ಸಿ. ರಾಯ್ ಅವರು ಹೀಗೆ ಹೇಳಿದ್ದಾರೆ:

"Dr. Roy added, that the land revenue system, tenancy laws, modes of taxation, raising of re-

venue and provision for social services might continue to be distinct in one State as against the other. Schemes for these had been framed on a particular basis and it would be unwise to interfere with them immediately, unless it be by common consent.''

ಎಂದು ಹೇಳಿದ್ದಾರೆ. ಆದುದರಿಂದ ನಾನು ಈ ದೊಡ್ಡ ಪ್ರಾಂತವಾಗುವುದರಲ್ಲಿ ಏನು ತೊಂದರೆಯಾಗುತ್ತದೆ ಎಂದು ತಿಳಿದುಕೊಂಡಿದ್ದೇನೋ ಇದನ್ನು ಒಪ್ಪಿಕೊಳ್ಳುವುದಾದರೆ, ಅವರು ಹೇಳಿದ ರೀತಿಯಲ್ಲಿ ನಡೆಯುವುದಾದರೆ, ನಮಗೆ ಬಹುಮಟ್ಟಿಗೆ, ನಮ್ಮ taxation system ನಮ್ಮ land revenue system ಅವೆಲ್ಲವೂ ಇರುವ ರೀತಿಯಲ್ಲಿ ಇನ್ನೂ ಕೆಲವು ಕಾಲ ಇರುವುದಕ್ಕೆ ಅವಕಾಶವಾಗುತ್ತದೆ. ಅದರಿಂದ ಏನೇನೂ ತೊಂದರೆಯಾಗಲಾರದು. ಆದುದರಿಂದ ಇದರಲ್ಲಿ ತಪ್ಪೇನೂ ಕಾಣುವುದಿಲ್ಲ ಎಂದು ನನಗೆ ತೋರಿತು. ಅವರು ಇನ್ನೂ ಮುಂದೆ ಹೋಗಿ

"Without it, no such union would be viable for there was no attempt on the part of one State to dominate over the other. He assured that in border areas two languages would be broadly encouraged ; each State would continue its own life and have a common approach to major problems. He said that the development plans for each area of the two States and the Five-Year Plan proposed by each State and approved by the National Planning Commission would continue to be implemented in that area in future although future development may be the common objective of the two States.''

ಎಂದು ಹೇಳಿದ್ದಾರೆ.

ಹೀಗೆ ಅವರು ಹೇಳಿರತಕ್ಕಂತೆ ಈ ಪ್ರಾಂತಗಳು ಬದಲಾವಣೆಯಾಗಿ ಆ ರೀತಿ ನೆಡೆಯುವುದಾದರೆ ನಾವು ಏನು ತೊಂದರೆಯಾಗುತ್ತದೆ ಎಂದು ತಿಳಿದುಕೊಂಡಿದ್ದೆವೋ ಆ ತೊಂದರೆ ಬಹುಮಟ್ಟಿಗೆ ಆಗಲಾರದು ; ಆದುದರಿಂದ ಈ ರೀತಿಯಾಗತಕ್ಕದ್ದು ನ್ಯಾಯವೆಂದು ಹೇಳಿದೆವು. ಈಗಲೂ ಕೂಡ ಒಂದೇ ಒಂದು ಭಾಷೆಯನ್ನು ಆಡತಕ್ಕ ಆಧಾರದ ಮೇಲೆ ದೇಶಗಳ ವಿಂಗಡಣೆಯಾಗಬೇಕು ಎಂದು ಹೇಳತಕ್ಕ ತತ್ವ ಅಷ್ಟು ಸರಿ ಎಂದು ನನಗೆ ಮನವರಿಕೆಯಾಗಿಲ್ಲ. ಆ ವಿಷಯದಲ್ಲಿ ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಅದನ್ನು ಇಲ್ಲವೆನ್ನುವ ಹಾಗಿಲ್ಲ. ನಮ್ಮ ದೇಶದಲ್ಲಿ ಪ್ರಖ್ಯಾತರಾದ ವಿದ್ವಾಂಸರೂ, ರಾಜಕಾರಣಿಗಳೂ ಆದ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಮದರಾಸು ವಿಶ್ವವಿದ್ಯಾನಿಲಯದಲ್ಲಿ ಪ್ರಕಟವಾಗತಕ್ಕ ಪತ್ರಿಕೆಗೆ ಒಂದು article ಬರೆದು ಈ ರೀತಿಯಾಗಿ ಹೇಳಿದಾರೆ;

"The variety of languages in a country is no more to be deplored than the variety of its soil, climate or in the *fauna* and *flora* or in its material resources. Each separate language produces a separate literature and promotes a separate culture and when many different languages live side by side, they react upon one another and develop a composite culture distinguished by many times of excellence of minds and intellect. If community of language makes for mass strength, diversity of languages makes for richness of content in culture. If each nation has to rise to its highest possible stature in the achievement of its intellect and imagination, it has to provide for the free growth and harmonious development of each of these several languages. Each linguistic group is thus a special nationality making its own contribution to the variegated tapestry of the whole nation's intellectual and artistic life.''

ಆದುದರಿಂದ ನಾವೂ ಸಹ "ಮೈಸೂರು ದೇಶ composite State, ಅನೇಕ ಭಾಷೆಗಳನ್ನಾಡುವವರಿದ್ದಾರೆ, ನಾವು ಬರೀ ಭಾಷೆಯ ಆಧಾರದಮೇಲೆ ನಮ್ಮ ವಾದವನ್ನು ಹೂಡಿಲ್ಲ'' ಎಂದು ಹೇಳುತ್ತಿದ್ದೇವೆ. ಹಾಗೆ ಆಗಬಹುದಾದ ಪಕ್ಷದಲ್ಲಿ, ಇತರ ಬೇರೆ ಭಾಷೆಯನ್ನಾಡುವ ಪ್ರಾಂತಗಳ ಜೊತೆಯಲ್ಲಿ ಸೇರುವುದರಲ್ಲಿ ಏನು ತೊಂದರೆ ಇದೆ ಎನ್ನುವುದನ್ನು ಹೇಳಿಲ್ಲ. ಸುಮ್ಮನೆ ಅವರು ಸ್ವಲ್ಪ, ಇವರು ಸ್ವಲ್ಪ ಬಂದರೆ ಬರಲಿ ಎಂದು ಹೇಳಬಹುದು. ಆದರೆ ದೊಡ್ಡ ದೊಡ್ಡ ಸಂಸ್ಥಾನಗಳು ಸೇರಿ ಇನ್ನೂ ಸ್ವಲ್ಪ ದೊಡ್ಡದಾಗಲಿ ಎಂದರೆ ಆವಾಗ ಅದಕ್ಕೆ ಆಗುವುದಿಲ್ಲವೆನ್ನುವುದು ನಮಗೆ ಅರ್ಥವಾಗದೆ ಇದೆ. ಇದನ್ನು ನಮ್ಮ ಮನಶ್ಯಾಸ್ತ್ರಜ್ಞರು ಕಂಡು ಹಿಡಿಯಬೇಕು ಎಂದು ಹೇಳುತ್ತೇನೆ. ಏತಕ್ಕೆ ಇದೆಲ್ಲ ಅರ್ಥವಾಗಲಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಆದುದರಿಂದ ಈ ದೇಶದ ಒಗ್ಗಟ್ಟು ಮತ್ತು ಮೇಲ್ಮೆಯ ದೃಷ್ಟಿಯಿಂದ ಈ ರೀತಿಯಾಗಿ ಒಂದೆರಡು ಪ್ರದೇಶಗಳು ಕೂಡ ಒಟ್ಟಾಗತಕ್ಕದ್ದು ಒಳ್ಳೆಯದೆಂದು ಇತ್ತೀಚೆಗೆ ಅಮೃತಸರ ಕಾಂಗ್ರೆಸ್ ಅಧಿವೇಶನದಲ್ಲಿಯೂ ಕೂಡ ಹೇಳಿದ್ದಾರೆ. ಅದರಲ್ಲಿ ಬಹುಮಟ್ಟಿಗೆ ನಾವು ಒಪ್ಪದೆ ಇರತಕ್ಕ ವಿಷಯಗಳು ಯಾವುವು ಇವೆ ಎಂಬುದನ್ನು ಯಾರೂ ಹೇಳಿಲ್ಲ. ಮತ್ತೆ ಈಗ ಕನ್ನಡ ಪ್ರದೇಶವಾಗುವುದರಲ್ಲಿ ಒಂದು ವಿಷಯವನ್ನು ಶ್ರೀಮಾನ್ ವೀರಣ್ಣಗೌಡರು ಹೇಳಿದ್ದಾರೆ. ನಾವೆಲ್ಲರೂ ಒಗ್ಗಟ್ಟಿನಿಂದ, unanimous ಆಗಿ ಒಪ್ಪಿಕೊಂಡಿದ್ದೇವೆಂದು ಮುಖ್ಯಮಂತ್ರಿಗಳು ಹೇಳಿದರು. ಅದು ಸರಿಯಲ್ಲ. ಬಹುಮಟ್ಟಿನ ಜನರು ಅದಕ್ಕೆ ವಿರೋಧವಾದ ಅಭಿಪ್ರಾಯವನ್ನಿಟ್ಟುಕೊಂಡಿರತಕ್ಕ

(ಶ್ರೀ ವಿ. ವೆಂಕಟಪ್ಪ)

ವರಿದ್ದಾರೆಂದು ಶ್ರೀಮಾನ್ ವೀರಣ್ಣಗೌಡರು ಹೇಳಿದರು. ಆ ವಿಷಯವನ್ನು ಮುಖ್ಯಮಂತ್ರಿಗಳೇ ಈ ರೀತಿ ಹೇಳಿದ್ದಾರೆ :—" The people of Mysore are not happy in agreeing to the formation of Karnataka. Compelled by pressure, they have agreed." ಬಳ್ಳಾರಿಯ ಹತ್ತಿರ ಕಂಪಲಿಯಲ್ಲೋ ಏನೋ ಸಕ್ಕರೆ ಕಾರ್ಖಾನೆಯ ಪ್ರಾರಂಭೋತ್ಸವವನ್ನು ನೆರವೇರಿಸುವಾಗಲೂ ಹೇಳಿದ್ದಾರೆ. ಅವರು ಹೇಳಿರುವುದು ವಾಸ್ತವವಾದ ಅಂಶ; ಎಲ್ಲರಿಗೂ ಗೊತ್ತಿದೆ. ಯಾವ ಕಾರಣದಿಂದ ಅನೇಕರು ಓಟುಮಾಡುವುದಕ್ಕೆ ಸಾಧ್ಯವಾಗಲಿಲ್ಲ, ಎಜಿಟೇಷನ್ ಎಂದು ಹೇಳುವುದನ್ನು ಮಾಡುವುದಕ್ಕೆ ದೊಡ್ಡ ಕಾರ್ಯಕ್ರಮ ಹಾಕಲಿಲ್ಲ ಎಂಬುದು ಗೊತ್ತಿದೆ. ಸರ್ಕಾರದ ಅಭಿಪ್ರಾಯವನ್ನು ನಾವೆಲ್ಲಾ ಒಪ್ಪಿದೆವು ಎಂದು ಅವರೇನು ಹೇಳಿದರೋ ಏನೋ ಗೊತ್ತಿಲ್ಲ.

ಇನ್ನೊಂದು ವಿಷಯವನ್ನು ನಾನು ಪ್ರಸ್ತಾಪ ಮಾಡದೆ ವಿಧಿಯಿಲ್ಲ. ಶ್ರೀಮಾನ್ ಹನುಮಂತಯ್ಯನವರು ಗುಬ್ಬಿಯಲ್ಲಿ ಭಾಷಣಮಾಡುತ್ತಾ "ಶ್ರೀಮಾನ್ ವೆಂಕಟಪ್ಪನವರು ನಾನು ರಾಜಿನಾಮೆ ಕೊಡಬೇಕೆಂದು ಹೇಳಿದ್ದಾರೆ, ನನ್ನ ಕ್ಷೇತ್ರದಲ್ಲಿ ಆ ರೀತಿ ತೀರ್ಮಾನವನ್ನು ಮಾಡಿಸಿದ್ದಾರೆ, ಆದರೆ ಅಲ್ಲಿ ಹೇಗಿರುತ್ತದೆ ಎಂಬುದನ್ನು ನಾನು ಅಲ್ಲಿಗೆ ಹೋದಮೇಲೆ ಪರಿಶೀಲನೆ ಮಾಡುತ್ತೇನೆ, ಅಲ್ಲಿ ಜನ ಏನು ಹೇಳುತ್ತಾರೋ ನೋಡುತ್ತೇನೆ." ಎಂದು ಹೇಳಿದರು. ರಾಮನಗರಕ್ಕೆ ಬಂದು ಕೆಲವರನ್ನು ಕರೆಸಿಕೊಂಡು ಅವರು ಒಂದು ಭಾಷಣವನ್ನು ಮಾಡುತ್ತಾ, ಅಲ್ಲಿ ಮಾಡಿರತಕ್ಕದ್ದು ಸರಿ, ದೇಶದಲ್ಲಿ ಯಾರಿಗೆ ಏನೂ ಕೇಡಾಗುವುದಿಲ್ಲ ಎಂದು ವಾದ ಹೂಡುವುದಕ್ಕೆ ಬದಲಾಗಿ, "ಕೆಲವರು ಬಂದು ಪಿಸುಮಾತಿನಲ್ಲಿ ಒಕ್ಕಲಿಗರಿಗೆ ತೊಂದರೆಯಾಗುತ್ತದೆ, ಲಿಂಗಾಯಿತರು ಬಹುಮತದವರಾಗುತ್ತಾರೆ ಎಂದು ಕಿವಿಯಲ್ಲಿ ಹೇಳಿದರೆ ನಂಬಬೇಡಿ" ಎಂದು ಹೇಳಿದರು. ಇದು ಬಹಳ ವಿಷಾದದ ಸಂಗತಿ, ನಾವು ಯಾರಿಗೂ ಆ ರೀತಿ ಹೇಳತಕ್ಕವರಲ್ಲ. ನನ್ನ ವಿಷಯ ಶ್ರೀಮಾನ್ ಹನುಮಂತಯ್ಯನವರಿಗೆ ಗೊತ್ತಿದೆ. ಪಿಸುಮಾತಿನಲ್ಲಿ ಹೇಳತಕ್ಕ ಹೇಡಿಗಳೇನೂ ನಾವಲ್ಲ. ಆ ಭಾವನೆಯನ್ನಿಟ್ಟುಕೊಂಡು ನಾನಂತೂ ಇದುವರೆಗೆ ಯಾವ ಕಾರ್ಯವನ್ನೂ ಮಾಡಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಶ್ರೀ ಹನುಮಂತಯ್ಯನವರೇನು ಈ ಹೊತ್ತಿನ ದಿವಸ ಜನರಲ್ ಹಾಸ್ಟಲಾಗಬೇಕು, ಎಲ್ಲ ಜಾತಿಯವರಿಗೂ ಒಂದೇ ಹಾಸ್ಟಲನ್ನು ಮಾಡಬೇಕು ಎಂದೇನು ಹೇಳುತ್ತಿದ್ದಾರೋ ಅದನ್ನು 1918ನೆಯ ಇಸವಿಯಿಂದ ನಾವು ನಡೆಸಿಕೊಂಡು ಬಂದಿದ್ದೇವೆ. ಇದು ಶ್ರೀ ಹನುಮಂತಯ್ಯನವರಿಗೂ ಗೊತ್ತಿದೆ. ಚನ್ನಪಟ್ಟಣದಲ್ಲಿ ಒಂದು ಒಕ್ಕಲಿಗರ ಹಾಸ್ಟಲನ್ನು ಸ್ಥಾಪನೆ ಮಾಡಿತು. ಆ ವಿದ್ಯಾರ್ಥಿನಿಲಯದಲ್ಲಿ ಇಲ್ಲಿರುವ ಕೆಲವು ಮಿತ್ರರೂ ಇದ್ದರು. ಆದ್ದರಿಂದ ಬರೀ ಮಾತಿಗಾಗಿ ನಾನು ಇದನ್ನು ಹೇಳುತ್ತಿಲ್ಲ. ಶ್ರೀ ಬಿ. ಎಲ್. ಬೋರಣ್ಣಗೌಡರು, ಶ್ರೀ ಕರಿಯಪ್ಪನವರು, ಶ್ರೀ ವಿರಣ್ಣಗೌಡರು ಮತ್ತು ಇನ್ನೂ ಕೆಲವರು ಮಿತ್ರರಿದ್ದಾರೆ, ಅವರಿಗೆ ವಿಷಯ ಚೆನ್ನಾಗಿ ಗೊತ್ತಿದೆ. ಆಗಿನ ಕಾಲದಲ್ಲಿ, ಯಾವ ಕಾಲದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಎಂಬ ಹುರುಪು ಬಹಳ ಹೆಚ್ಚಿನಿಂದ ನಡೆಯುತ್ತಿತ್ತೋ ಅಂಥ ಕಾಲದಲ್ಲಿ ಯಾವ ವಿಧವಾದ ವ್ಯತ್ಯಾಸವೂ ಇಲ್ಲದೆ ಎಲ್ಲ ಜಾತಿಯವರೂ ಆ ಹಾಸ್ಟಲಿನಲ್ಲಿದ್ದರು. ಬೆಸ್ತರು, ಕುರುಬರು, ಕುಂಬಾರರು ಮೊದಲಾದ ಎಲ್ಲ ಜಾತಿಯವರೂ ಕೆಲವುಕಾಲ ನಮ್ಮಲ್ಲಿ ಊಟ ಮಾಡುತ್ತಿದ್ದರು. ನಮ್ಮ ಹಾಸ್ಟಲಿನಲ್ಲಿದ್ದ ಲಿಂಗಾಯಿತರು ಕೆಲವರು ಬೇರೆಕಡೆ ಊಟಮಾಡುತ್ತಿದ್ದರು. ನಾನು ರಾಜಕೀಯಕ್ಕೆ ಬಂದ ಮೇಲೆ ಯಾವಾಗಲೂ 'ಒಂದು ಕೋಮಿನವರು ಮುಂದುವರಿಯುತ್ತಿದ್ದಾರೆ, ನಾವು ಹಿಂದುಳಿದಿದ್ದೇವೆ, ನಮ್ಮನ್ನೂ ಹಾಗೆ ಮುಂದುವರಿಸಿ' ಎಂದು ಹೇಳಿದವನು ನಾನಲ್ಲ, ಆ ವಿಧವಾಗಿ ನಾನು ಮುಂದುವರಿದಿಲ್ಲ. ಇಂಥ ಆಪಾದನೆಯನ್ನು ಶ್ರೀಮಾನ್ ಹನುಮಂತಯ್ಯನವರೇಕೆ ಮಾಡಿದರೋ ಏನೋ ಗೊತ್ತಿಲ್ಲ. ಜನರನ್ನು ಉದ್ರೇಕಗೊಳಿಸಿ ಅವರನ್ನು ನಮ್ಮ ಮೇಲೆ ಎತ್ತಿ ಕಟ್ಟುವುದಕ್ಕೆ ಇಂಥ ಮಾತುಗಳನ್ನು ಆಡಿದ್ದಾರೆಂದು ನಾನು ಹೇಳದೆ ಬೇರೆ ವಿಧಿ ಇಲ್ಲ. ನಾವು ನಿಜವಾಗಿಯೂ ದೇಶದ ಹಿತದೃಷ್ಟಿಯಿಂದ ನಮ್ಮ ದೇಶದ ಜನಕ್ಕೆ ತೊಂದರೆಯಾಗುತ್ತದೆಯೋ ಏನೋ ಎನ್ನುವ ಭಾವನೆಯಿಂದ ಈ ಕರ್ಣಾಟಕ ಪ್ರಾಂತರಚನೆಯನ್ನು ವಿರೋಧಿಸಿದೆವು.

Mr. SPEAKER.—Is that necessary on this Bill ? Hon'ble Member can avoid some of them.

ಶ್ರೀ ವಿ ವೆಂಕಟಪ್ಪ.—ಸ್ವಾಮಿ, ಈ ರೀತಿ ತಪ್ಪು ಭಾವನೆಯನ್ನುಂಟುಮಾಡತಕ್ಕಂಥ ಪ್ರಯತ್ನ ಮಾಡಬಾರದು. ನಾವು ಮೈಸೂರು ಮೈಸೂರಾಗಿಯೇ ಉಳಿದರೆ ಚೆನ್ನಾಗಿರುತ್ತದೆಂದು ಇಟ್ಟುಕೊಂಡಿರುವ ಭಾವನೆ ಎಲ್ಲರ ಹಿತದೃಷ್ಟಿಯಿಂದ ಉಂಟಾದುದು. ನಾವು ಏನೊಂದು ಊಹೆಮಾಡಿಕೊಂಡಿದ್ದೇವೋ ಆ ಕಷ್ಟಗಳು ಮುಂದೆ ಬರುವುದಾದರೆ ಆಗ ನಮ್ಮ ಸ್ನೇಹಿತರು ನಾವು ನಿಜವಾಗಿ ದೇಶದ ಹಿತದೃಷ್ಟಿಯಿಂದ ಹೇಳಿದ್ದೇವೆಯೋ ಅಥವಾ ಅವರು ಹೇಳಿದ್ದರೇ ಎಂಬುದನ್ನು ಚೆನ್ನಾಗಿ ಅರಿತುಕೊಳ್ಳುತ್ತಾರೆ.

ಇನ್ನು ಈ ಬಿಲ್ಲಿನ ವಿಷಯದಲ್ಲಿ ನಾವು ಕೆಲವು ಸೂಚನೆಗಳನ್ನು ಹೇಳಿದ್ದೇವೆ. ಅವು ಬಹಳಮಟ್ಟಿಗೆ ಲೀಡರ್ ಅವರು ಒಪ್ಪಿಕೊಳ್ಳುವ ರೀತಿಯಲ್ಲಿರುವುದರಿಂದ ಆ ವಿಷಯದಲ್ಲಿ ಹೆಚ್ಚಾಗಿ ಏನನ್ನೂ ಹೇಳದೆ ಈಗ ಒಂದೇ ಭಾಷೆಯ ದೃಷ್ಟಿಯಿಂದ ವಾದಗಳನ್ನು ಮಾಡತಕ್ಕದ್ದು ಉತ್ತಮವಾಗಲಾರದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಕೊರಟಗೆರೆ-ಮಧುಗಿರಿ—ಅನುಸೂಚಿತ ಜಾತಿಗಳು).—ಅಧ್ಯಕ್ಷರೆ, ಈದಿನ ಎಸ್. ಆರ್. ಸಿ. ವರದಿಯಮೇಲೆ ತಯಾರಾಗಿರುವ ಡ್ರಾಫ್ಟ್ ಬಿಲ್ ನಮ್ಮ ಮುಂದೆ ಬಂದಿದೆ. ಈಗ ಅದರ ಮೇಲೆ ನಮ್ಮ ಸ್ನೇಹಿತರು ಕೆಲವರು ಭಾಷಣ ಮಾಡಿದ್ದಾರೆ. ಹಿಂದೆ ಈ ವಿಚಾರದಲ್ಲಿ ಈ ವರದಿ ನಮ್ಮ ಮುಂದೆ ಬಂದಾಗ್ಗೆ ಈ ಸಭೆಯಲ್ಲಿ ಚರ್ಚೆ ನಡೆಸತಕ್ಕ ಕಾಲದಲ್ಲಿ ಏನೊಂದು ತೀವ್ರ ವಾತಾವರಣವಿತ್ತೋ ಅದು ಈ ದಿವಸ ಕಂಡುಬರುತ್ತಿಲ್ಲ. ಇದು ಬಹಳ ಸುಖವಾಗಿ ಕಾಣುತ್ತದೆ. ಉಭಯತ್ರರೂ ಇದಕ್ಕೆ ಕಾರಣರು. ಆ ಪರಿಸ್ಥಿತಿಯಲ್ಲಿ ಉಜ್ವಲವಾತಾವರಣವಿದ್ದು ಚರ್ಚೆ ಸಹ ಬಹಳ ತೀವ್ರವಾಗಿ ನಡೆಯಿತು. ಈ ದಿವಸ ಆ ಪರಿಸ್ಥಿತಿ ಬದಲಾಯಿಸಿ ಬಹಳ ಸೌಹಾರ್ದದಿಂದ ಈ ಬಿಲ್ಲನ್ನು ಎಲ್ಲರೂ ಒಪ್ಪತಕ್ಕ ಸಂದರ್ಭವಿದೆಯೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಈ ರೀತಿಯಾಗಿ ಸ್ವಲ್ಪ ದಿನಗಳ ಹಿಂದೆ ಭಾಷಾವಾರು ಆಧಾರದ ಮೇಲೆ ಪ್ರಾಂತಗಳನ್ನು ಕಟ್ಟುವುದಕ್ಕೆ ಬದಲಾಗಿ ಕೆಲವಾರು ಭಾಷೆಗಳು ಸೇರಿದ ಪ್ರಾಂತಗಳನ್ನು ಕಟ್ಟತಕ್ಕ ತೀರ್ಮಾನ,—ಅದರಲ್ಲೂ ದಕ್ಷಿಣ ಪ್ರಾಂತವೆಂಬ ಹೆಸರನ್ನೂ ಸಹ ಅನೇಕರು ಹೇಳಿದರು.—ಅದು ಬಂದ ಮೇಲೆ ಅನೇಕ ಮಿತ್ರರು ಈಗಿರತಕ್ಕ ಕರ್ಣಾಟಕ ಪ್ರಾಂತವೆಂದೇನು ಮಾಡುತ್ತಿದ್ದಾರೋ ಅದಕ್ಕಿಂತಲೂ

ಇದು ಉತ್ತಮವಾದ ಸಲಹೆಯಿರಬಹುದು ; ಎಲ್ಲರೂ ಸೇರಿ ನಾನಾ ಭಾಷೆಯವರು ಸೇರಿ ಸೌಹಾರ್ದದಿಂದ ಕೂಡಿ ಒಂದು ದೊಡ್ಡ ದೇಶ ಮಾಡಿದರೆ ಅದು ಉತ್ತಮವಾಗಬಹುದು ಎಂದು ನಂಬಿಕೊಂಡು ಒಂದು ಉದಾರ ಧ್ಯೇಯದಿಂದ ಹೇಳುತ್ತಿದ್ದಾರೆ. ಅವರ ಮೇಲೆ ಆಪಾದನೆ ಮಾಡುವುದಿಲ್ಲ. ಇಂಡಿಯಾ ದೇಶದ ಭದ್ರತೆ ಈ ರೀತಿ ದಕ್ಷಿಣಪ್ರಾಂತ ಮಾಡುವುದರಿಂದ ಉಳಿಯುವುದಾದರೆ ಅದಕ್ಕೆ ಸ್ವಾಗತ ನೀಡುತ್ತೇವೆ ಎಂದು ಅನೇಕರು ನುಡಿದರು. ನನಗಾದರೂ ಅನ್ನಿಸುತ್ತದೆ, ಬಹಳ ವರ್ಷಗಳಿಂದ ನಾನಾ ಭಾಷೆಗಳಿಂದ ಕೂಡಿದ ಬೊಂಬಾಯಿ, ಮದರಾಸು ಈ ಎರಡು ಪ್ರಾಂತಗಳಲ್ಲಿ ಭಿನ್ನಭಿನ್ನ ಅಭಿಪ್ರಾಯ ಬಂದು ಪ್ರತ್ಯೇಕ ಪ್ರಾಂತವಾಗಬೇಕು, ಭಾಷಾ ಆಧಾರದ ಮೇಲೆ ಪ್ರತ್ಯೇಕ ಪ್ರಾಂತವಾಗಬೇಕು ಎಂದು ಅಲ್ಲಿ ಬಹಳ ವರ್ಷಗಳಿಂದಲೂ ಒತ್ತಾಯಮಾಡಿದರು. ಅದರ ಮೇಲೆ ಇತ್ತೀಚೆಗೆ ಎಸ್. ಆರ್. ಕಮಿಷನ್ ಬಂದ ಮೇಲೆ ವರದಿ ತಯಾರುಮಾಡಿ ಪ್ರತ್ಯೇಕ ಪ್ರಾಂತ ಮಾಡಬೇಕೆಂದು ಬಿಲ್ಲನ್ನು ತಯಾರಿಸಿದರು. ಈಚೆಗೆ ಅವು ಪುನಃ ಸೇರಬೇಕೆಂಬ ಅಭಿಪ್ರಾಯವಿದೆ. 150 ವರ್ಷಗಳಿಂದಲೂ ಅವರು ಜೊತೆಯಲ್ಲಿದ್ದು ಪ್ರತ್ಯೇಕವಾಗಬೇಕೆಂಬ ಭಾವನೆಯನ್ನು ಈಗಲೂ ಬಿಟ್ಟಿಲ್ಲ. ಪ್ರತ್ಯೇಕ ಪ್ರಾಂತ ಮಾಡಬೇಕೆಂಬ ದೊಡ್ಡ ಸಮಸ್ಯೆ ಇಡೀ ಇಂಡಿಯಾ ದೇಶದಲ್ಲಿ ಶುರುವಾಗಿ ಈ ದಿವಸ ನಮ್ಮ ಮುಂದಿದೆ. ಬಿಲ್ಲು ಬಂದು ಹಸ್ತಗತವಾಗಿದೆ. ಅದನ್ನು ಜಾರಿಗೆ ಕೊಡಬಹುದೇ, ಅದರ ಮೇಲೆ ಯಾವ ರೀತಿ ವಾತಾವರಣವಿದೆ ಎಂಬುದು ನಮ್ಮ ಅನುಭವಕ್ಕೆ ಬಂದಿಲ್ಲ. ಈ ಮಧ್ಯೆ ದಕ್ಷಿಣ ಪ್ರಾಂತ ಮಾಡಬೇಕು ಅಥವಾ ದ್ವಿಭಾಷಾ ಪ್ರಾಂತಮಾಡಬೇಕು ಎಂಬ ಸೂಚನೆಯಿದೆ. ಇದುವರೆಗಿನ ಅನುಭವದಂತೆ ಪ್ರತ್ಯೇಕ ರಾಜ್ಯ ಮಾಡಿದರೆ ಈ ದಿವಸ ನಾವು ಅನುಭವಿಸುವುದಕ್ಕೆ ಅವಕಾಶವಿಲ್ಲ. ದಕ್ಷಿಣಪ್ರಾಂತ ಮಾಡಿದರೆ ಅದರಿಂದ ಎಷ್ಟರಮಟ್ಟಿಗೆ ಸಹಾಯವಾಗುತ್ತದೆಂಬುದನ್ನು ನಾವು ಸ್ವಲ್ಪ ಪರಿಶೀಲಿಸಬೇಕಾಗುತ್ತದೆ.

5 P.M.

ಇದು ಒಳ್ಳೆಯ ಉದ್ದೇಶವೇ ಇರಬಹುದು. ಇದು ಇಂಡಿಯಾದೇಶದ ಭದ್ರತೆಗೆ ಅನುಕೂಲವಾಗಿಯೇ ಇರಬಹುದು. ಆದರೆ ಇದನ್ನು ಮಾಡದೆಯಿದ್ದರೆ ನಮ್ಮ ದೇಶದ ಭದ್ರತೆಯೇ ಇರುವುದಿಲ್ಲ, ಇರತಕ್ಕಂಥ ಭದ್ರತೆಯೆಲ್ಲಾ ಹೋಗಿ ಬಿಡುತ್ತದೆ ಎಂದು ಹೇಳುವುದಕ್ಕೆ ಯಾವ ಕಾರಣವೂ ಇಲ್ಲ. ಈಗ ಉತ್ತರ ಪ್ರದೇಶ, ದಕ್ಷಿಣ ಪ್ರದೇಶ ಅಥವಾ ಪ್ರಾಂತ್ಯಗಳು, ಮಧ್ಯಪ್ರದೇಶ ಹೀಗೆ ಬಲವಾದ ಪ್ರಾಂತ್ಯಗಳನ್ನು ಏರ್ಪಡಿಸುವುದರಿಂದ ಇಂಡಿಯಾ ದೇಶದ ಭದ್ರತೆ ಇನ್ನೂ ಹೆಚ್ಚಾಗುತ್ತದೆಂದು ತಾವು ಹೇಳುವುದಾದರೆ, ಇದರಿಂದ ನಾನಾ ಕಲಹಗಳೂ ಮತ್ತು ವ್ಯಾಜ್ಯಗಳೂ ಪುನಃ ಪ್ರಾರಂಭವಾಗಿ ನೀವು ಅಪೇಕ್ಷಿಸುತ್ತಿರುವಂಥ ಆ ಭದ್ರತೆಗೆ ಒಂದು ಸಂಚಕಾರ ಬರಬಹುದೆಂದು ನನಗೆ ಅನ್ನಿಸುತ್ತಿದೆ. ಈ ಒಂದು ಭದ್ರತೆಯ ಕಾರಣಕ್ಕಾಗಿಯೇ ತಾವು ಈ ಪ್ರದೇಶಗಳನ್ನು ಎಂದರೆ ಈ ದ್ರಾವಿಡಸ್ಥಾನವನ್ನು ಆ ಉತ್ತರ ಪ್ರದೇಶಕ್ಕೆ ಗಂಟು ಹಾಕಬೇಕೆಂದು ಹೇಳುವುದಾದರೆ, ಇದರಿಂದ ದೇಶಕ್ಕೆ ತುಂಬ ಧಕ್ಕೆ ಬರುತ್ತದೆಂದು ನನಗನಿಸುತ್ತದೆ. ಹಾಗೆ ದೇಶದ ಭದ್ರತೆಗಾಗಿಯೇ ಈ ರೀತಿ ದೊಡ್ಡ ದೊಡ್ಡ ಪ್ರಾಂತ್ಯಗಳನ್ನು ಕಟ್ಟಬೇಕೆಂದು ಹೇಳುವುದಾದರೆ ಯೂಪಿ, ಕೇರಳ, ತೆಲುಗು ಪ್ರಾಂತ್ಯ, ತಮಿಳುನಾಡು ಈ ಪ್ರಾಂತ್ಯಗಳೂ ಒಂದಾಗಲಿ. ಬಹುಶಃ ಆ ಉತ್ತರ ಭಾಗದಲ್ಲೇನೋ ಹಿಂದಿ ಭಾಷೆಯನ್ನಾಡತಕ್ಕ ಜನರೇ ಜಾಸ್ತಿಯಾಗಿರಬಹುದು. ಈಗ ಅದೊಂದು ವೈಯಬಲ್‌ಸ್ಟೇಟ್ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ನಾನಾದರೂ ಕೇವಲ ಈ ಭಾಷೆ ಒಂದರಮೇಲೆಯೇ ರಾಜ್ಯಕಟ್ಟಬೇಕೆಂದು ಹೇಳುತ್ತಿಲ್ಲ. ಹೀಗೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವುದು ಕನ್ನಡ ಮಾತನಾಡತಕ್ಕ ಜನಗಳು ಎಲ್ಲೆಲ್ಲಿದ್ದಾರೋ ಅವರೆಲ್ಲರೂ ಒಂದು ಕಡೆ ಸೇರಿದರೆ ಒಬ್ಬೊರಿಗೊಬ್ಬರು ಅವರ ವ್ಯವಹಾರಗಳನ್ನು ಒಂದು ಭಾಷೆಯಲ್ಲಿ ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ ಎನ್ನುವುದಕ್ಕೇ ಹೊರತು ಕೇವಲ ಈ ಭಾಷೆ ಆಧಾರದಮೇಲೆ ರಾಜ್ಯಗಳ ಪುನರ್ವಿಂಗಡಣೆ ಮಾಡುತ್ತಿಲ್ಲ. ಈ ದಿವಸ ನಮ್ಮ ಸ್ಟೇಟ್‌ನಲ್ಲಿ ಈ ಭಾಷೆ ಆಧಾರ ಒಂದನ್ನೇ ಇಟ್ಟುಕೊಂಡು ನಾವೇನೂ ಈ ಪ್ರಾಂತ್ಯಗಳ ವಿಂಗಡಣೆ ಮಾಡಿಲ್ಲ. ಈ ದಿವಸ ನಮ್ಮಲ್ಲಿ ತೆಲುಗು, ತಮಿಳು ಮಾತನಾಡತಕ್ಕಂಥ ಜನಗಳೂ ಇದ್ದಾರೆ. ಆದರೆ ಇಲ್ಲಿ ಇತರ ಎಲ್ಲ ಭಾಷೆಗಳಿಗಿಂತಲೂ ಕನ್ನಡ ಮಾತನಾಡತಕ್ಕಂಥ ಜನರು ಹೆಚ್ಚಾಗಿರುತ್ತಾರೆ. ಈ ದೇಶ ಒಂದು ಕಾಂಪೋಜಿಟ್ ಕ್ಯಾರಕ್ಟರ್ ಹೊಂದಿರತಕ್ಕದ್ದಾಗಿದೆ. ಹೀಗಿರುವಾಗ, ಬರಿ ಭಾಷೆಯೊಂದರ ಆಧಾರದಮೇಲೆ ರಾಜ್ಯ ಪುನರ್ವಿಂಗಡಣೆ ಮಾಡುತ್ತಿಲ್ಲವೆಂಬ ನೆಪದ ಮೇಲೆ ಇಲ್ಲಿ ನಾನಾ ಭಾಷೆಗಳ ಜನರನ್ನು ತಂದು ಹಾಕಿ ಒಬ್ಬೊರಿಗೊಬ್ಬರಿಗೆ ವ್ಯಾಜ್ಯತಂದು ಹಾಕಬೇಕೆಂಬ ಇರಾದೆ ನನಗಿಲ್ಲ. ಕೋಲಾರ ಜಿಲ್ಲೆಯಲ್ಲಿ ತೆಲುಗು ಮಾತನಾಡತಕ್ಕ ಜನರೇ ಜಾಸ್ತಿಯಾಗಿದ್ದಾರೆ, ಕೆ. ಜಿ. ಎಫ್. ನಲ್ಲಿ ತಮಿಳು ಮಾತನಾಡತಕ್ಕವರು ಜಾಸ್ತಿ ಇರುತ್ತಾರೆ. ಆದರೆ ಈ ನಮ್ಮ ಬೆಂಗಳೂರಿನಲ್ಲಿ ತಮಿಳು, ತೆಲುಗು, ಕನ್ನಡ ಈ ಎಲ್ಲ ಭಾಷೆಗಳಲ್ಲೂ ಮಾತನಾಡತಕ್ಕ ಜನಗಳಿರುತ್ತಾರೆ, ಈಗಲೇ ಈ ಸ್ಟೇಟ್ ಒಂದು ಕಾಂಪೋಜಿಟ್ ಸ್ಟೇಟಾಗಿದೆ. ಆದುದರಿಂದ ಇದನ್ನು ಇನ್ನು ಹೆಚ್ಚಿಸುವುದು ಬೇಡ, ಈಗ ಇರತಕ್ಕ ಮೈಸೂರು ಹೀಗೆಯೇ ಮೈಸೂರಾಗಿರಲಿ ಎಂದು ಹೇಳುವುದಕ್ಕೆ ಬದಲಾಗಿ ಇದು ಇನ್ನೂ ಈ ಆಡಳಿತ ಸೌಕರ್ಯಕ್ಕಾಗಿ ವಿಶಾಲವಾಗಬೇಕಾದದ್ದು ಅಗತ್ಯವೆಂಬ ತೀರ್ಮಾನಕ್ಕೆ ಬಂದಿದ್ದೇವೆ. ಈಗ ನಮ್ಮ ಮುಂದಿರತಕ್ಕ ಪ್ರಶ್ನೆ ಈ ರಾಜ್ಯ ಹೀಗೆ ಎಲ್ಲಿಯವರೆಗೆ ವಿಸ್ತಾರವಾಗಬೇಕು ಎನ್ನುವುದೇ ಆಗಿದೆ. ಇದರಲ್ಲಿ ಈಗ ಕೆಲವರಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಮೂಡಿವೆ. ಕೆಲವರು ದಕ್ಷಿಣಕ್ಕೆಲ್ಲ ಒಂದೇ ಪ್ರದೇಶವಿರಬೇಕೆಂದು ಹೇಳುತ್ತಿದ್ದಾರೆ. ಮತ್ತೆ ಕೆಲವರು ಕನ್ಯಾಕುಮಾರಿಯಿಂದ ಹಿಡಿದು ಕಾಶಿಯವರೆಗೂ ಒಂದೇ ರಾಜ್ಯವಿರಲೆಂದು ಹೇಳಬಹುದು. ಆದರೆ ಇದೆಲ್ಲಾ ಆಗದಮಾತು. ಈಗ ಸದ್ಯಕ್ಕೆ, ಈ ಮೈಸೂರನ್ನೊಳಗೊಂಡ ಕನ್ನಡ ಪ್ರಾಂತ್ಯ ನಿರ್ಮಾಣವಾಗಲಿ ಎಂದು ಹೇಳಿದರೆ 'ಅದು ಬೇಡ ದಕ್ಷಿಣ ಕರ್ಣಾಟಕ, ಉತ್ತರ ಕರ್ಣಾಟಕ ಎಂಬ ಪ್ರಾಂತ್ಯಗಳು ಮೊದಲು ವಿಶಾಲವಾಗಲಿ ಅನಂತರ ಅದು ಯಾವ ರೀತಿ ಆಗುತ್ತದೆ ಎಂಬುದನ್ನು ಪರೀಕ್ಷೆ ಮಾಡಿ ನೋಡಿದ ಮೇಲೆ ಈ ರೀತಿ ಒಂದು ವಿಶಾಲ ಕನ್ನಡ ಪ್ರಾಂತ್ಯ ನಿರ್ಮಾಣ ಮಾಡೋಣವೆಂದು ಕೆಲವರು ಹೇಳುತ್ತಿದ್ದಾರೆ. ಆದರೆ ಏತಕ್ಕಾಗಿ ಹೀಗೆ ಹೇಳುತ್ತಿದ್ದಾರೆಂಬುದೇ ನನಗಿನ್ನೂ ಅರ್ಥವಾಗುವುದಿಲ್ಲ. ಅವರು ಹೇಳಿರತಕ್ಕದ್ದನ್ನು ನಾನು ತಪ್ಪೆಂದು ಹೇಳುವುದಿಲ್ಲ. ನಾವು ಒಂದೆರಡು ವರ್ಷ ಕಾದು ನೋಡೋಣ. ಈಗ ಸದ್ಯಕ್ಕೆ ನಮ್ಮ ಮುಂದೆ ಬಂದಿರತಕ್ಕ ಕನ್ನಡ ಪ್ರಾಂತ್ಯವನ್ನು ನಿರ್ಮಾಣಮಾಡೋಣ, ಅನಂತರ ಬೇಕಾದರೆ ಆಂಧ್ರ-ಕರ್ಣಾಟಕ ಅಥವಾ ಕರ್ಣಾಟಕ-

(ಶ್ರೀ ಆರ್. ಚೆನ್ನಿಗರಾಮಯ್ಯ.)

ಕೇರಳ ಪ್ರದೇಶಗಳ ವಿಚಾರವನ್ನು ಪ್ರತ್ಯೇಕವಾಗಿ ಪರಿಶೀಲನೆಗೆ ಇಟ್ಟುಕೊಳ್ಳೋಣ ಎಂದರೆ ಅವರಿಗೆ ನಾವು ಹೇಳುತ್ತಿರುವುದು ಸರಿಯಾಗಿ ಅರ್ಥವಾಗುತ್ತಿಲ್ಲ. ಆದರೆ ಅವರು ಹೇಳುತ್ತಿರುವುದೂ ಸಹ ನಮಗೆ ಇನ್ನೂ ಸರಿಯಾಗಿ ಅರ್ಥವಾಗಿಲ್ಲ. ಈ ದಿವಸ ನಮ್ಮ ಮುಂದೆ ಬಂದಿರತಕ್ಕ ಪ್ರಶ್ನೆ ಮೈಸೂರು ಮೈಸೂರಾಗಿಯೇ ಇರಲಿ ಎನ್ನುವುದಲ್ಲ. ಈ ಪ್ರಶ್ನೆಯೇನೂ ಈಗ ಚರ್ಚೆಗೆ ಬಂದಿಲ್ಲ. ಆದುದರಿಂದ ನಾವು ಈಗ ನಮ್ಮ ಚರ್ಚೆಯಲ್ಲಿ ಈ ವ್ಯತ್ಯಾಸವನ್ನು ಗ್ರಹಿಸದೆ ಚರ್ಚೆ ನಾಡಿದ ಪಕ್ಷದಲ್ಲಿ ಅದು ಅನುಚಿತವಾಗಬಹುದೆಂದು ನನಗೆ ಅನಿಸುತ್ತಿದೆ. ಆದರೆ ಕೆಲವರು ಈ ದಿವಸ ಈ ರೀತಿಯಾಗಿ ಪ್ರಾಂತಗಳು ಪುನರ್ವಿಂಗಡಣೆಯಾದ ಪಕ್ಷದಲ್ಲಿ ಇಂಡಿಯಾದೇಶದ ಭದ್ರತೆಗೆ ಧಕ್ಕೆ ಬರುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಭದ್ರತೆಗೆ ಅಂಥ ತೊಂದರೆಯೇನೂ ಬರುವುದಿಲ್ಲ. ಅವರ ಕೈಯಲ್ಲಿ ಮಿಲಿಟರಿ ಸಿಬ್ಬಂದಿಯಿದೆ. ಅವರ ಕೈಯಲ್ಲಿ ಹಣಕಾಸಿನ ಸ್ವಾತಂತ್ರ್ಯವಿದೆ. ಈ ದಿವಸ ಕೇರಳಕ್ಕೆ ಧಕ್ಕೆ ಬರುವುದಾಗಿದ್ದರೆ ಅದನ್ನು ನಾವು ತಪ್ಪಿಸಲು ಸಾಧ್ಯವಿಲ್ಲ. ಹಾಗೆ ಧಕ್ಕೆ ಬರುವುದಾಗಿದ್ದರೆ ಮುಂದೆ ದಕ್ಷಿಣ ಪ್ರದೇಶವಾದರೂ ಆ ಧಕ್ಕೆ ಇದ್ದೇ ಇರುತ್ತದೆ, ಆಗಲೂ ಬಂದೇ ಬರುತ್ತದೆ ಅಥವಾ ಕೇರಳ ಮೈಸೂರು ಸೇರಿದ್ದಾಗ್ಯೂ ಆ ಧಕ್ಕೆ ಆಗಲೂ ಬಂದೇ ಬರುತ್ತದೆ. ಹೀಗೆ ಧಕ್ಕೆ ತರುವುದೂ ಬಿಡುವುದೂ ಸಂಪೂರ್ಣವಾಗಿ ಅವರ ಕೈಲಿದೆ. ಹೀಗಿರುವಾಗ ದೇಶವನ್ನು ವಿಶಾಲ ಮಾಡುವುದರಿಂದ ಈ ಭದ್ರತೆ ಉಳಿಯುತ್ತದೆ ಇಲ್ಲದಿದ್ದರೆ ಇಲ್ಲ ಎಂದು ಹೇಳತಕ್ಕ ಮಾತಿನಲ್ಲಿ ಅರ್ಥವಿಲ್ಲ. ಈ ದಕ್ಷಿಣ ಪ್ರದೇಶವಾದರೇನೇ ನಮ್ಮ ದೇಶದ ಭದ್ರತೆ ಉಳಿಯುತ್ತದೆ, ಇಲ್ಲದಿದ್ದರೆ ಆ ಭದ್ರತೆ ಉಳಿಯುವುದಿಲ್ಲ ಎಂದು ಹೇಳತಕ್ಕ ಮಾತು ನನಗೇಕೋ ಅರ್ಥವೇ ಆಗುತ್ತಿಲ್ಲ. (ಸಭೆಯಲ್ಲಿ ಗದ್ದಲ). ಇಲ್ಲಿಯವರೆಗೂ ಈ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದ ವೇಳೆಯಲ್ಲಿ ಅವರು ಅವರ ಅಭಿಪ್ರಾಯವೇನಿದೆಯೋ ಅದನ್ನು ಹೇಳಲಿ ಎಂಬುದಾಗಿ ಒಂದು ವಿಶಾಲ ಮನೋಭಾವನೆಯನ್ನಿಟ್ಟುಕೊಂಡು ನಾನು ಸುಮ್ಮನೆ ಕುಳಿತಿದ್ದೆನು. ಆದರೆ ನಾನು ಮಾತನಾಡುವಾಗ ಅವರೂ ಸಹ ಅಷ್ಟೇ ವಿಶಾಲ ಭಾವನೆಯನ್ನಿಟ್ಟುಕೊಂಡು ಸುಮ್ಮನಿರಬೇಕೆಂಬ ಭಾವನೆ ಅವರಿಗಿರುವುದಿಲ್ಲ. ಆದರೆ ಈಗ ಇಬ್ಬರಿಗೂ ರುಚಿಕರವಾಗಿರುವಂತೆ ಮಾತನಾಡೋಣ ಎಂತಲೇ ಈಗ ಈ ಬಿಲ್ಲು ನಮ್ಮ ಮುಂದೆ ಬಂದಿದೆ. ಈಗ ಇಲ್ಲಿ ಕೆಲವರಲ್ಲಿ ಮೂಡಿರತಕ್ಕಂಥ ಆ ಒಂದು ಜಿಜ್ಞಾಸೆ ಅವರಿಗೆ ಒಂದು ಸರಳವಾದ ಮನಸ್ಸು ಇಲ್ಲದಿರುವ ಕಾರಣ ಬಂದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅವರು ಈ ದಿವಸ ನಮ್ಮ ಮುಂದೆ ಬಂದಿರತಕ್ಕ ಈ ಬಿಲ್ಲು ಸರಿಯಾಗಿಲ್ಲ ಎಂದು ಹೇಳುವುದಕ್ಕೆ ಕಾರಣಗಳೇನೂ ಇಲ್ಲ. ಅಷ್ಟೇ ಅಲ್ಲದೆ ನಾವು ಮುಂದೆ ಆಲೋಚನೆ ಮಾಡಬೇಕೆಂದಿರುವ ವಿಷಯ ಕೂಡ ಸರಿಯಾದದ್ದೆಂದು ಈಗಲೇ ಹೇಳುವುದಕ್ಕಾಗುವುದಿಲ್ಲ. ಆದರೆ ಈಗ ನಮ್ಮ ಮುಂದೆ ಬಂದಿರತಕ್ಕ ವಿಚಾರ ಯಾವರೀತಿ ಆಗುತ್ತದೆ ಎನ್ನುವುದನ್ನು ಮೊದಲು ನೋಡೋಣ. ನಮಗಿನ್ನೂ ಸರಿಯಾಗಿ ಇದೇ ಅರ್ಥವಾಗಿಲ್ಲ. ಹೀಗಿರುವಾಗ ಸುಮ್ಮನೆ ಕೆಲವರು ತಮ್ಮ ಮನಸ್ಸಿನಲ್ಲಿ ಯಾವುದೋ ಒಂದು ಭೀತಿಯನ್ನಿಟ್ಟುಕೊಂಡು ಹೀಗೆಲ್ಲಾ ವಾದ ಮಾಡುತ್ತಿರುವುದಕ್ಕೆ ಕಾರಣವಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಹೊರಗಡೆಯಿಂದ ಬರತಕ್ಕವರು ಬಹಳ ಚೆಲೋ ಮಂದಿ.

ಶ್ರೀ ಆರ್. ಚೆನ್ನಿಗರಾಮಯ್ಯ.—ಹೊರಗಡೆಯಿಂದ ಬರತಕ್ಕವರೆಲ್ಲ ಬಹಳ ಚೆಲೋ ಮಂದಿ ಎಂಬುದಾಗಿ ಶ್ರೀ ಜೆ. ಮಹಮ್ಮದ್ ಇಮಾಂ ಅವರು ಹೇಳುತ್ತಾರೆ. ನನಗೀಗ ಮುಖ್ಯವಾಗಿ ಬಂದಿರತಕ್ಕ ಒಂದು ಆಶ್ಚರ್ಯಕರವಾದಂಥ ವಿಚಾರ ಯಾವುದು ಎಂದರೆ—ಈ ದಕ್ಷಿಣ ಪ್ರದೇಶದ ವಿಚಾರ ಆಂಧ್ರದ ಲೆಜಿಸ್ಲೆಟಿವ್ ಅಸೆಂಬ್ಲಿಯಲ್ಲಿ ಚರ್ಚೆಗೆ ಬಂದಿಲ್ಲ. ಮದರಾಸಿನವರಿಗೆ ಈ ವಿಚಾರ ಬೇಕಾಗಿಲ್ಲ. ಕೇರಳದವರಿಗೆ ಇದು ಇಷ್ಟವಿಲ್ಲ. ಹೀಗೆ ಈ ದಿವಸ ಆ ಯಾರೊಬ್ಬರಿಗೂ ಬೇಕಿಲ್ಲದಂಥ ಭದ್ರತೆಯ ಪ್ರಶ್ನೆ ಈಗ ಕೇವಲ ನಮ್ಮೊಬ್ಬರ ತಲೆಯ ಮೇಲೆ ಬಿದ್ದಿರುವ ಹಾಗೆ ಕಾಣುತ್ತಿದೆ. ಆದರೆ ಇಂಡಿಯಾ ದೇಶದಲ್ಲಿ ಈ ಬೈಲಿಂಗ್ವಲ್ ಸ್ಟೇಟುಗಳನ್ನು ಮಾಡತಕ್ಕಂಥ ಜವಾಬ್ದಾರಿ ಎಲ್ಲರ ಮೇಲೂ ಬಿದ್ದಿದೆ. ಈ ರೀತಿ ಒಂದು ಬೈಲಿಂಗ್ವಲ್ ಸ್ಟೇಟನ್ನು ಮಾಡುವುದರಿಂದ ಮುಂದೆ ಆ ದೇಶದ ಆಡಳಿತ ಸುಲಲಿತವಾಗಿ ನಡೆಯುತ್ತದೆ ಎನ್ನುವ ವಿಚಾರದಲ್ಲಿ ಇಲ್ಲಿಯವರೆಗೆ ಯಾರೊಬ್ಬರೂ ತಮ್ಮ ಖಚಿತವಾದಂಥ ಅಭಿಪ್ರಾಯಗಳನ್ನು ಕೊಟ್ಟಿರುವುದಿಲ್ಲ. ಹಾಗೆ ಅವರಾರು ಈ ಬಗ್ಗೆ ಒಂದು ಖಚಿತಾಭಿಪ್ರಾಯವನ್ನು ವ್ಯಕ್ತಪಡಿಸದೆ ಇರುವಾಗ ನಾವೇ ಬಲವಂತದಿಂದ ಹೇಳುವುದಕ್ಕೆ ಹೋಗುವುದು ಹೇಗಾಗಿರುತ್ತದೆ, ಎಂದರೆ—ಹೆಣ್ಣು ಸ್ವರದ್ರೂಪಿ. ಆದುದರಿಂದ ನಾನು ಮದುವೆಯಾಗುತ್ತೇನೆಂದು ಹೇಳಿದರೆ, ಆಕೆ ಈತನ ಮುಖವನ್ನು ಸಹ ನಾನು ನೋಡುವುದಿಲ್ಲವೆಂದು ಹೇಳುತ್ತಿರುವ ಹಾಗೆ ಕಂಡು ಬರುತ್ತಿದೆ. ಆದರೆ ಈ ಪ್ರಶ್ನೆಯ ವಿಚಾರದಲ್ಲಿ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳವರೆಲ್ಲರೂ ಒಂದು ಸಹಕಾರ ಭಾವನೆಯಿಂದ ಸ್ನೇಹ ಸೌಹಾರ್ದಯುತವಾದ ಸನ್ನಿವೇಶಗಳನ್ನು ಉಂಟುಮಾಡಿದರೆ ಆಗ ನಾವೆಲ್ಲರೂ ಸೇರಿ ಈ ಪ್ರಶ್ನೆಯನ್ನು ಪರಿಶೀಲನೆ ಮಾಡಬಹುದು. ಆಗಲೂ ಕೂಡ ಶೇಕಡ 50 ಜನ ಒಪ್ಪಿದರೆ ಇನ್ನು ಉಳಿದ 50 ಜನರು ಇದಕ್ಕೆ ಒಪ್ಪದೆ ಇರಬಹುದು. ಈಗಾಗಲೇ ನಮ್ಮಲ್ಲಿ ಅನೇಕರು ಈ ಬೈಲಿಂಗ್ವಲ್ ಸ್ಟೇಟುಗಳು ಬೇಡ, ನಮಗೆ ಆ ದಕ್ಷಿಣ ಪ್ರದೇಶವೂ ಬೇಡ, ಮುಂದೆ ಬೇಕಾದರೆ ನೋಡೋಣ ಎಂದು ಹೇಳುತ್ತಿದ್ದಾರೆ. ಈ ದಿವಸ ನೀವು ಕೆಲವರು ಏನು ಇದನ್ನು ಒಂದು ಭೂತ ಎಂದು ತಿಳಿದುಕೊಂಡಿದ್ದೀರೋ ಆ ಮನೋಭಾವವನ್ನು ಬಿಡಿ ಎಂದು ಹೇಳುತ್ತೇನೆ. ನಾವು ನಮ್ಮ ಅಭಿಪ್ರಾಯಗಳನ್ನು ಕಾಲ ಬಂದ ಹಾಗೆ ಬೇಕಾದರೆ ಬದಲಾವಣೆ ಮಾಡಿಕೊಳ್ಳಬಹುದು.

ಶ್ರೀ ವಿ. ವೆಂಕಟಪ್ಪ.—ನಾವು ಈಗ ಹೊಸದಾಗಿ ಬರತಕ್ಕ ಜನರಿಗಾಗಿ ಹೆದರುತ್ತಿಲ್ಲ; ದೇಶದ ಭದ್ರತೆಗಾಗಿ ಕೆಲವು ವಿಷಯಗಳನ್ನು ಪರ್ಯಾಲೋಚನೆ ಮಾಡಬೇಕಾಗಿದೆ ಎಂದು ಹೇಳುತ್ತಿದ್ದೇವೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಆದರೆ ತಾವು ಆ ಭದ್ರತೆಯೆನ್ನುವುದನ್ನು ಯಾವುದಕ್ಕೆ ಹೇಳುತ್ತಿದ್ದೀರಿ ಎನ್ನುವುದನ್ನು ಬಾಯಿ ಬಿಟ್ಟು ಸರಿಯಾಗಿ ಹೇಳುತ್ತಿಲ್ಲ. ಗುಂಭವಾಗಿಯೇ ಹೇಳುತ್ತಿದ್ದೀರಿ. ತಾವು ಹಾಗೆ ಗುಂಭವಾಗಿ ಹೇಳುತ್ತಿದ್ದರೆ ಅದು ನನಗೆ ಅರ್ಥವಾಗುತ್ತಿಲ್ಲ. ಆದರೆ ಈ ನಿಮ್ಮ ಗುಂಭಾರ್ಥ ಶ್ರೀ ಶಿವನಂಜೇಗೌಡರಿಗೆ ಅರ್ಥವಾದಷ್ಟು ಕೂಡ ನಮಗೆ ಅರ್ಥವಾಗುತ್ತಿಲ್ಲ. ಇದು ನಮ್ಮ ದುರದೃಷ್ಟ!

ಕೇರಳದ ವಿಚಾರದಲ್ಲಿ ಇವೊತ್ತಿನ ದಿನ ಅಲ್ಲಿರತಕ್ಕ ರಾಜಕೀಯ ಪರಿಸ್ಥಿತಿಯಲ್ಲಿ ಭದ್ರತೆ ಇಲ್ಲ, ಇವೊತ್ತು ಸುವ್ಯವಸ್ಥಿತವಾದ ಸರ್ಕಾರ ನಡೆಯುವುದಕ್ಕೆ ಅವಕಾಶವಿಲ್ಲ ಎಂದು ಹೇಳಿ ಅದು ಮದರಾಸಿಗಾಗಲಿ ಮೈಸೂರಿಗಾಗಲಿ ಸೇರಬೇಕೆಂದು ಹೇಳುತ್ತಾರೆ. ಒಟ್ಟಿನಲ್ಲಿ ತಿರುವಾಂಕೂರು-ಕೊಚ್ಚಿನ್ ಸಂಸ್ಥಾನ ಇಲ್ಲದ

ಹಾಗಾಯಿತು. ಈ ದೃಷ್ಟಿಯಿಂದ ಶ್ರೀ ಲಕ್ಕಪ್ಪನವರು ಬಹಳ ಒಳ್ಳೆಯ ಸೂಚನೆ ಕೊಟ್ಟರು. ತಿರುವಾಂಕೂರು-ಕೊಚ್ಚಿನ್‌ನಲ್ಲಿ ಸುವ್ಯವಸ್ಥಿತವಾದ ಸರ್ಕಾರ ಇಲ್ಲದೇ ಹೋದರೆ ಎಲ್ಲವನ್ನೂ ಮೈಸೂರಿಗೇ ಆಗಲಿ, ಮದರಾಸಿಗೇ ಆಗಲಿ ಸೇರಿಸುವುದಕ್ಕೆ ಬದಲಾಗಿ ಮೈಸೂರಿಗೆ ಅಕ್ಕಪಕ್ಕದಲ್ಲಿರುವ ಪ್ರಾಂತ್ಯ ಮೈಸೂರಿಗೆ ಸೇರಲಿ, ಮದರಾಸಿಗೆ ಅಕ್ಕಪಕ್ಕದಲ್ಲಿರುವ ಪ್ರಾಂತ್ಯ ಮದರಾಸಿಗೆ ಸೇರಲಿ. ಆ ರೀತಿ ಮಾಡಿದರೆ ಉದ್ದೇಶ ನೆರವೇರುತ್ತದೆ, ಭದ್ರತೆ ಬರುತ್ತದೆ ಎನ್ನುವುದಾದರೆ ಅದಕ್ಕೆ ನಮ್ಮ ತಕರಾರು ಏನೂ ಇಲ್ಲ, ಹೀಗೆ ಶ್ರೀ ಲಕ್ಕಪ್ಪನವರು ಹೇಳಿದಂತೆ ಛಿದ್ರಮಾಡಿ ಸೇರಿಸತಕ್ಕ ಅವಕಾಶ ಇದ್ದರೆ, ಅದರಿಂದ ದೇಶದ ಭದ್ರತೆಗೆ ಅನುಕೂಲವಾಗುತ್ತದೆ, ಒಳ್ಳೆಯದಾಗುತ್ತದೆ ಎಂದರೆ, ಅದಕ್ಕೆ ನನ್ನ ಪ್ರತಿಭಟನೆ ಏನೂ ಇಲ್ಲ.

ಈ ರೀತಿ ಇವೊತ್ತಿನ ಪರಿಸ್ಥಿತಿಗೆ ತಕ್ಕ ಹಾಗೆ ಈಗ ಬಂದಿರತಕ್ಕ ಬಿಲ್ಲನ್ನು ನಾವೆಲ್ಲರೂ ಒಂದೇ ಮನಸ್ಸಿನಿಂದ, ಸೌಹಾರ್ದದಿಂದ ಒಪ್ಪಿಕೊಳ್ಳೋಣ ; ಮುಂದೆ ಕೆಲವು ದಿನಗಳ ನಂತರ ಬದಲಾವಣೆಗಳಾಗಬೇಕಾಗಿ ಕಂಡುಬಂದರೆ, ನಮ್ಮ ಕೈಯಲ್ಲಿದೆ, ಯಾವ ರೀತಿ ಬೇಕಾದರೂ ಬದಲಾವಣೆ ಮಾಡಿಕೊಳ್ಳಬಹುದು. ಆದ್ದರಿಂದ ಎಲ್ಲರೂ ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ನಮ್ಮ ಮುಂದೆ ಇರತಕ್ಕಂಥ ಈ ಡ್ರ್ಯಾಫ್ಟ್ ಎಸ್. ಆರ್. ಬಿಲ್ಲಿಗೆ ಜನ್ಮವನ್ನು ಕೊಟ್ಟಂಥ ಎಸ್ಸಾರ್ಸಿ ಕಮಿಷನ್ ವರದಿಯ ಮೇಲೆ ಮಾತಾಡುವಾಗ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುವಾಗ ಈ ರೀತಿಯಾಗಿ ಹೇಳಿದ್ದೇನೆ :

> ". . . . the unity and safety of India would be adversely affected if the States in India are reorganised on the basis of language. I therefore oppose the recommendations of the S.R.C."

ಸ್ವಾಮಿ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕಂಥ ಈ ಬಿಲ್ಲೂ ಕೂಡ, ಶ್ರೀ ಗೋಪಾಲಗೌಡರು ಸಮರ್ಥನೆ ಮಾಡಿ ಹೇಳಿದ ಹಾಗೆ, ಭಾಷೆಯನ್ನೇ ಮುಖ್ಯ ಆಧಾರವಾಗಿಟ್ಟುಕೊಂಡು ದೇಶದ ಪುನರ್‌ವಿಂಗಡಣೆಯನ್ನು ಮಾಡಬೇಕೆಂದು ಹೇಳಿ ರೂಪಿಸಿರತಕ್ಕಂಥಾದ್ದು. ಈ ರೀತಿಯಾಗಿ ಭಾಷೆಯ ಆಧಾರದ ಮೇಲೆ ಇಂಡಿಯಾ ದೇಶವನ್ನು ಪುನರ್ವಿಂಗಡಣೆಮಾಡತಕ್ಕಂಥಾದ್ದು ಬಹುಶಃ ಇಂಡಿಯಾ ದೇಶದ ಇತಿಹಾಸದಲ್ಲಿ ಇದೇ ಪ್ರಥಮ ಬಾರಿ.

ಕೆಲವು ಸದಸ್ಯರು.—ಇಲ್ಲ, ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಸ್ವಲ್ಪ ಸೂಕ್ಷ್ಮವಾಗಿ ಇಂಡಿಯಾ ದೇಶದ ಎರಡು ಸಾವಿರ ಮೂರು ಸಾವಿರ ವರ್ಷದ ಚರಿತ್ರೆಯನ್ನೆಲ್ಲಾ ತೆಗೆದುಕೊಂಡರೂ ಕೂಡ ಯಾವ ಚಕ್ರಾಧಿಪತ್ಯದ ಕಾಲದಲ್ಲೂ ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ನಮ್ಮ ದೇಶದ ವಿಂಗಡಣೆ ಆಗಿಲ್ಲ; ರಾಜ್ಯವನ್ನೂ ಕೂಡ ಯಾರೂ ಕಟ್ಟಿರಲಿಲ್ಲ.

ಒಬ್ಬ ಸದಸ್ಯರು.—ಆಗ ಈ ರೀತಿ ಪ್ರಜಾಪ್ರಭುತ್ವ ಇರಲೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಂಥ ಒಂದು ಪ್ರಯೋಗ ನಮ್ಮ ದೇಶದಲ್ಲಿ ಈಗ ನಡೆಯಬೇಕಾಗಿ ಬಂದಿದೆ. ನಾನು ಭಾಷೆಯ ಆಧಾರದ ಮೇಲೆ ರಾಜ್ಯವನ್ನು ಪುನರ್ವಿಂಗಡಣೆ ಮಾಡುವುದು ಸರಿಯಲ್ಲ ಎಂದು ಹೋದ ಸಾರಿ ಕೂಡ ಸಮರ್ಥನೆ ಮಾಡಿದೆ. ಅದರ ಜೊತೆಗೆ ಮೈಸೂರು ಪ್ರಾಂತ ಇದ್ದದ್ದು ಇದ್ದ ಹಾಗೆಯೇ ಇರುವುದು ಒಳ್ಳೆಯದು ಎಂದು ಏಕೆ ನಾನು ಸಮರ್ಥನೆ ಮಾಡುತ್ತೇನೆ ಎನ್ನುವುದನ್ನೂ ಕೂಡ ನನ್ನ ಭಾಷಣದಲ್ಲಿ ಹೇಳಿದ್ದೇನೆ. "Small State" ಅಥವಾ "Big State" ಎಂಬ ಒಂದು ವಾದ ಏನಿದೆ, ಆ ವಾದವನ್ನೇ ಆಧಾರವಾಗಿಟ್ಟುಕೊಂಡು ಇಂಡಿಯಾ ದೇಶವನ್ನು ಸಣ್ಣ ಸಣ್ಣ ಪ್ರಾಂತ್ಯಗಳಾಗಿ ಅಥವಾ ವೈಯಬಲ್ ಯೂನಿಟ್ಸ್ ಆಗಿ ವಿಂಗಡಣೆ ಮಾಡುವುದು ಸರಿಯಾದ ಕೆಲಸ. ಈ ಮೈಸೂರು ಪ್ರಾಂತ್ಯ ಆ ರೀತಿಯಾದ ಒಂದು ವೈಯಬಲ್ ಯೂನಿಟ್ ಆಗಿದೆ, ಒಂದು ಎಕನಾಮಿಕ್ ಯೂನಿಟ್ ಆಗಿ ಕೂಡ ಇದೆ. ಅನೇಕ ವರ್ಷಗಳಿಂದ ಈ ಪ್ರಾಂತ ಹೀಗೆಯೇ ನಡೆದು ಬಂದು ಬಹಳ ಅಭಿವೃದ್ಧಿಯನ್ನು ಕೂಡ ಹೊಂದಿದೆ. ಇದನ್ನೇ ಒಂದು ದೃಷ್ಟಾಂತವಾಗಿ ತೆಗೆದುಕೊಂಡು ಇದನ್ನೇ ಒಂದು ಮಾದರಿಯಾಗಿ ಇಟ್ಟುಕೊಂಡು ಇಂಡಿಯಾ ದೇಶದ ಇತರ ಪ್ರಾಂತ್ಯಗಳನ್ನು ಈ ಆಧಾರಕ್ಕೆ ಅನುಸರಿಸಿ ವಿಂಗಡಣೆ ಮಾಡುವುದನ್ನು ಒಪ್ಪಬೇಕು ಎಂದು ಹೇಳಿ ಪ್ರತಿಪಾದನೆ ಮಾಡಿದ್ದೆ. ಹಿಂದೆ ಸ್ಟೇಟ್ಸ್ ರೀ-ಆರ್ಗನೈಸೇಷನ್ ವರದಿಯಲ್ಲೂ ಕೂಡ, ಈ ವಿಚಾರವಾಗಿ ಒಂದು Chapter ನಲ್ಲಿ, ಇದನ್ನು ಪ್ರಸ್ತಾಪಿಸಿದ್ದಾರೆ. ಸಣ್ಣ ಪ್ರಾಂತ್ಯಗಳು ಅಂದರೆ ಹೇಗಿರಬೇಕು, ಅದರಿಂದ ಒಳ್ಳೆಯದೇನು, ಕೆಟ್ಟದ್ದೇನು, ದೊಡ್ಡ ಪ್ರಾಂತ್ಯ ಮಾಡುವುದರಿಂದ ಒಳ್ಳೆಯದೇನು ಕೆಟ್ಟದ್ದೇನು ಎಂಬ ಎಲ್ಲ ವಿಷಯಗಳನ್ನೂ ವಿಮರ್ಶೆಮಾಡಿ ರೀ-ಆರ್ಗನೈಸೇಷನ್ ಕಮಿಷನ್ನಿನವರು ದೊಡ್ಡ ಪ್ರಾಂತ್ಯ ಆಗುವುದೇ ಸರಿ ಎಂದು ಹೇಳಿ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಅದೇ ಅಭಿಪ್ರಾಯವನ್ನು ಭಾರತದ ಪ್ರಧಾನ ಮಂತ್ರಿಗಳಾದ ಪಂಡಿತ ಜವಹರಲಾಲ್ ನೆಹರೂ ಅವರೂ ಕೂಡ ರಾಜ್ಯ ಸಭೆಯಲ್ಲಿ ಈ ಎಸ್. ಆರ್. ಸಿ. ವರದಿಯ ಮೇಲೆ ಚರ್ಚೆ ನಡೆದಂಥ ಕಾಲದಲ್ಲಿ ಆ ಚರ್ಚೆಗೆ ಉತ್ತರವಾಗಿ ಮಾತನಾಡುತ್ತಾ ಈ ರೀತಿಯಾಗಿ ಹೇಳಿರುತ್ತಾರೆ :—

> "My general approach towards the problem of States Reorganisation in the past has been rather in favour of small States; when I say a small State, I do not mean a small State with all the paraphernalia of the big State today because that would be quite impossible. A multitude of Governors, a multitude of High Courts, a multitude of public services, all over spread out—that would become quite impossible—but broadly speaking, my original approach was in favour of small States tied up together, a number of States in larger grouping. Now the more I have thought of this matter—and we have given obviously a great deal of thought to it, more especially since the

(ಶ್ರೀ ಡಿ. ದೇವರಾಜ ಅರಸ್.)

publication of this report—I confess that I have changed my opinion, and I have come converted to the idea of large States and, in fact, I am rather sorry that in this respect they have recommended some small States, and I say this for a variety of reasons.''

ಈ ರೀತಿಯಾಗಿ ತಾವು ಈ ವರದಿ ಬಂದ ಮೇಲೆ ಸಣ್ಣ ಪ್ರಾಂತ್ಯಗಳೇ ಇರುವುದು ಒಳ್ಳೆಯದು ಎನ್ನುವ ತಮ್ಮ ಹಿಂದಿನ ಅಭಿಪ್ರಾಯವನ್ನು ಈ ಕಾರಣಗಳಿಗಾಗಿ ಮಾರ್ಪಾಡುಮಾಡಿಕೊಂಡೆ ಎಂದು ಹೇಳಿ 'I confess I have changed my opinion' ಎಂದು ಹೇಳುತ್ತಾ ಇದ್ದಾರೆ. ಹಾಗೆ ಇವೊತ್ತಿನ ದಿವಸ ಸಣ್ಣ ಪ್ರಾಂತ ಆಗುವುದಕ್ಕಿಂತ ದೊಡ್ಡ ದೊಡ್ಡ ಪ್ರಾಂತ್ಯಗಳೇ ಆಗಬೇಕೆಂದು ಹೇಳತಕ್ಕ ಒಂದು ವಾದಕ್ಕೆ ಇಂಡಿಯಾ ಸರ್ಕಾರವೇ ಪುರಸ್ಕಾರ ಕೊಟ್ಟು ಮತ್ತು ಇಂಡಿಯಾ ಸರ್ಕಾರವೇ ಅದನ್ನು ಒಂದು (policy) ಪಾಲಿಸಿ ಆಗಿ ಕೂಡ (adopt) ಅಡಾಪ್ಟ್ ಮಾಡಿ ಕೊಂಡಿದ್ದಾರೆ ಎನ್ನುವುದು ಈ ಬಿಲ್ಲನ್ನು ನಾವು ನೋಡಿದರೆ ಅರ್ಥವಾಗುತ್ತದೆ. ಆದಕಾರಣ ನಾನು ಹಿಂದೆ ಏನೇನು ವಾದಮಾಡಿದ್ದೆ, ಮೈಸೂರು ಸಂಸ್ಥಾನ ಸಣ್ಣ ಸಂಸ್ಥಾನವಾಗಿರುವುದು ಒಳ್ಳೆಯದು ಎಂದು ಅದನ್ನು ಈಗ ಬದಲಾಯಿಸಿಕೊಳ್ಳಬೇಕಾಗಿದೆ. I also find, Sir, that I have been converted and have to change my opinion in view of what has been stated by our beloved leader Pandit Jawaharlal Nehru.

Mr. SPEAKER.—Ideas are bound to change on account of experience.

A MEMBER.—Also on account of exigencies!

ಶ್ರೀ ಡಿ. ದೇವರಾಜ ಅರಸ್.—ದೊಡ್ಡ ಪ್ರಾಂತಗಳಾಗುವುದರಿಂದ ಹೇಗೆ ಒಳ್ಳೆಯದು ಎಂದು ಅವರು ಅನೇಕ ವಿಷಯಗಳನ್ನು ಉದಹರಿಸಿ ಹೇಳಿದ್ದಾರೆ. ದೇಶದಲ್ಲಿ ಹಿಂದೆ ನಾವು ರಾಜಕೀಯಕ್ಕಾಗಿ ಹೋರಾಟ ಮಾಡುತ್ತಿದ್ದೆವು. ಆ ಕಾಲ ಈಗ ಕಳೆದುಹೋಗಿದೆ. ಈಗ ಆರ್ಥಿಕವಾಗಿ, ಸಾಮಾಜಿಕವಾಗಿ, ಬದಲಾವಣೆಗಳನ್ನು ಮಾಡುವುದಕ್ಕೋಸ್ಕರವಾಗಿ ನಾವು ದುಡಿಯಬೇಕು ಎಂದು ಕೂಡ ಹೇಳಿದ್ದಾರೆ. ಅದೇ ರೀತಿಯಾಗಿ ನಮ್ಮ ದೇಶದಲ್ಲಿ ಈಗ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿ ಅವುಗಳನ್ನೆಲ್ಲ ಕಾರ್ಯರೂಪಕ್ಕೆ ತರತಕ್ಕ ಒಂದು ಸನ್ನಿವೇಶದಲ್ಲಿ ನಾವಿದ್ದೇವೆ. ಈ ಎಲ್ಲ ದೃಷ್ಟಿಯಿಂದ ನೋಡುವುದಾದರೆ ದೊಡ್ಡ ಪ್ರಾಂತಗಳು ಇರುವುದು ಉತ್ತಮವೆಂದು ಬಹುಜನರ ಅಭಿಪ್ರಾಯವಾಗಿದೆ. ಇಂಡಿಯಾ ಸರ್ಕಾರದ ಒಂದು ನೀತಿ ಕೂಡ ಅದಕ್ಕೆ ಮನ್ನಣೆ ಕೊಟ್ಟಿದೆ. ಆದರೆ ಭಾಷೆಯ ಆಧಾರದ ಮೇಲೆ ಈ ರೀತಿಯಾಗಿ ಪ್ರಾಂತಗಳನ್ನು ಮಾಡುವುದು ಸರಿಯೇ, ಸೂಕ್ತವೇ ಎಂದು ಕೇಳಿದರೆ, ಇವೊತ್ತು ಕೂಡ ನನ್ನ ಖಚಿತವಾದ ಅಭಿಪ್ರಾಯವೇನಿದೆ ಎಂದರೆ ಭಾಷೆಯ ಆಧಾರದಮೇಲೆ ದೇಶವನ್ನು ವಿಭಜನೆ ಮಾಡುವುದು ಖಂಡಿತ ಸೂಕ್ತವಲ್ಲ. ಭಾಷೆಯ ಆಧಾರದಮೇಲೆ ದೇಶವನ್ನು ವಿಂಗಡಣೆ ಮಾಡತಕ್ಕದ್ದು ಸೂಕ್ತವಲ್ಲವೆಂದು ನಾವು ಹೇಳುವಾಗ ಮಾನ್ಯ ಸ್ನೇಹಿತರಾದ ಶ್ರೀ ಚೆನ್ನಿಗರಾಮಯ್ಯನವರು ಅಂಥ ಪ್ರಬಲವಾದ ಕಾರಣಗಳೇನಿವೆ, ಇದರಿಂದ ಏನು ಕೆಡಕಾಗಿದೆ, ಇದನ್ನು ಯಾರೂ ಹೇಳಲಿಲ್ಲ, ಇತ್ಯಾದಿ ಇತ್ಯಾದಿ ಮಾತನಾಡಿದರು. ಸ್ವಾಮಿ, S.R.C. ವರದಿ ಹೊರಬಿದ್ದಮೇಲೆ ಅನೇಕ ಸಂಸ್ಥಾನಗಳಲ್ಲಿ ಚರ್ಚೆಯಾಗಿ, ಅದರಿಂದ ಉಂಟಾದ ಉದ್ರೇಕದಿಂದ ಅನೇಕ ಪ್ರದೇಶಗಳಲ್ಲಿ ಏನು ಅನಾಹುತವಾಯಿತು ಎಂಬುದನ್ನೆಲ್ಲ ಇಲ್ಲಿ ವಿವರಣೆ ಮಾಡಬೇಕಾದ ಅಗತ್ಯವಿಲ್ಲ. ನಮ್ಮ ದೇಶದಲ್ಲಿ ಕೆಲವು ದಿವಸಗಳ ಹಿಂದೆ ನಡೆದಂಥ ಅನಾಹುತಗಳನ್ನೂ ದುರ್ಘಟನೆಗಳನ್ನೂ ನಾವು ಯೋಚಿಸುವುದಾದರೆ ಭಾಷೆಯ ಆಧಾರದಮೇಲೆ ಪ್ರಾಂತಗಳನ್ನು ಪುನರ್ವಿಂಗಡಣೆ ಮಾಡುವುದು ಸೂಕ್ತವೇ, ಅಲ್ಲವೇ, ಎಂಬುದು ತಿಳಿಯುತ್ತದೆ. ಹಿಂದೆ ಯಾವ ಮಾನ್ಯ ಸ್ನೇಹಿತರು ಸರಿ ಎಂದು ವಾದಮಾಡಿದರೋ ಅವರು ಬದಲಾವಣೆ ಮಾಡಿಕೊಳ್ಳುವುದಕ್ಕೆ ಇದು ಸಕಾಲವೆಂದು ಅಂಥ ಸ್ನೇಹಿತರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಭಾಷೆಯ ಆಧಾರದಮೇಲೆ ಬೊಂಬಾಯಿನಲ್ಲಿ ಗಲಭೆ ಆಗಲಿಲ್ಲ. ಬೊಂಬಾಯಿಯನ್ನು ಮಹಾರಾಷ್ಟ್ರಕ್ಕೇ ಸೇರಿಸಬೇಕು ಎನ್ನುವ ವಿಚಾರಕ್ಕಾಗಿ ಗಲಭೆಗಳಾದುವು.

ಶ್ರೀ ಡಿ. ದೇವರಾಜ ಅರಸ್.—ಬೊಂಬಾಯಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆನ್ನುವುದಕ್ಕೆ ಮೂಲಾಧಾರವೇನು ಎನ್ನುವುದನ್ನು ಶ್ರೀಮಾನ್ ಚೆನ್ನಿಗರಾಮಯ್ಯನವರು ನೋಡಬೇಕು. ಬೊಂಬಾಯಿಯಲ್ಲಿ ಮಹಾರಾಷ್ಟ್ರ ಭಾಷೆಯನ್ನು ಮಾತನಾಡತಕ್ಕ ಜನರು ಬಹು ಸಂಖ್ಯೆಯಲ್ಲಿದ್ದಾರೆ. ಭಾಷೆಯನ್ನೇ ಮುಖ್ಯಾಧಾರವಾಗಿಟ್ಟುಕೊಂಡು, ಬೊಂಬಾಯಿನಲ್ಲಿ ಮರಾಠಿ ಭಾಷೆಯನ್ನು ಮಾತನಾಡತಕ್ಕವರ ಸಂಖ್ಯೆ ಇತರ ಭಾಷೆಯನ್ನು ಮಾತನಾಡತಕ್ಕವರ ಸಂಖ್ಯೆಗಿಂತ ಹೆಚ್ಚಾಗಿದೆ, ಎಂಬ ಆಧಾರದಮೇಲೆ ಬೊಂಬಾಯಿ ಪಟ್ಟಣವನ್ನು ಮಹಾರಾಷ್ಟ್ರ ಪ್ರಾಂತಕ್ಕೆ ಸೇರಿಸಬೇಕು ಎಂದು ವಾದಮಾಡುತ್ತಿದ್ದಾರೆ. ಅನೇಕರು ಕಾಸರಗೋಡು ಪ್ರದೇಶವು ಕೇರಳದಲ್ಲಿರಬೇಕೇ, ಮೈಸೂರು ಪ್ರಾಂತಕ್ಕೆ ಸೇರಬೇಕೇ ಎಂದು ಹೇಳುವಾಗ ಯಾವ ಆಧಾರದಮೇಲೆ ಹೇಳುತ್ತಾರೆ ಎಂದು ಪ್ರಶ್ನೆ ಮಾಡುತ್ತೇನೆ. ಇಡೀ ಇಂಡಿಯಾ ದೇಶದಲ್ಲಿ ಯಾವ ಪ್ರಾಂತ್ಯದವರೇ ಆಗಲಿ, ನಮ್ಮ ಪ್ರಾಂತ್ಯಕ್ಕೆ ಈ ಊರು ಬೇಕು, ಈ ಹಳ್ಳಿ ಬೇಕು, ಈ ರಸ್ತೆ ಬೇಕು, ಈ ತಾಲ್ಲೂಕು ಬೇಕು ಎಂದು ಕೇಳುವವರೆಲ್ಲರೂ, ತಮ್ಮ ತಮ್ಮ ಭಾಷೆಯನ್ನು ಮಾತನಾಡತಕ್ಕ ಜನರು ಈ ಭಾಗದಲ್ಲಿ ಹೆಚ್ಚಾಗಿದ್ದಾರೆ, ಈ ಊರಿನಲ್ಲಿ ಹೆಚ್ಚಾಗಿದ್ದಾರೆ, ಇದೆಲ್ಲವೂ ನಮಗೇ ಸೇರಬೇಕು ಎಂದು ಕೇಳುವುದೆಲ್ಲಾ ಭಾಷೆಯ ಆಧಾರದ ಮೇಲೆ ಮತ್ತೆ ಬೇರೆ ಯಾವ ಕಾರಣವೂ ಇಲ್ಲ. ಹೀಗೆ ಈ ಎಲ್ಲ ಕಾರಣಗಳಿಂದಲೂ ನಾವು ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ಪ್ರಾಂತಗಳನ್ನು ಪುನರ್ವಿಂಗಡಣೆ ಮಾಡುವುದು ಸರಿಯಲ್ಲವೆಂದು ನಾನು ಹಿಂದೆ ಹೇಳಿದುದಕ್ಕಿಂತಲೂ ಹೆಚ್ಚು ಸಮರ್ಥನೆ ಮಾಡಿ ಹೇಳುವುದಕ್ಕೆ ಅವಕಾಶ ದೊರೆತಿದೆ. ಈ ಎಲ್ಲ ಸಂದರ್ಭಗಳನ್ನೂ ನೋಡಿ ಇದಕ್ಕೆ ಸರಿಯಾದ ಮಾರ್ಗವನ್ನು ಕಂಡು ಹಿಡಿಯಬೇಕೆಂದು ದೇಶದ ಮುಖಂಡರೆಲ್ಲ ಯೋಚನೆ ಮಾಡಿ, ಪ್ರಥಮವಾಗಿ Zonal Councils ಮಾಡುವುದು ಸರಿ ಎಂದು ಆ ಅಭಿಪ್ರಾಯವನ್ನು ದೇಶದ ಮುಂದಿಟ್ಟರು. Zonal Councils ಮಾಡಬೇಕು ಎಂಬ ಅಭಿಪ್ರಾಯಕ್ಕೆ, ನನಗೆ

ತಿಳಿದಿರುವ ಮಟ್ಟಿಗೆ, ದೇಶಾದ್ಯಂತ ಎಲ್ಲ ಮೂಲೆಗಳಿಂದಲೂ ಸ್ವಾಗತ ದೊರೆಯಿತು. ಅದಾದಮೇಲೆ ಕೆಲವೇ ದಿವಸಗಳಲ್ಲಿ ದ್ವಿಭಾಷಾಪ್ರಾಂತ ಅಥವಾ ತ್ರಿಭಾಷಾಪ್ರಾಂತ ಎಂದರೆ ಒಂದು ಭಾಷೆಯನ್ನು ಮಾತನಾಡತಕ್ಕ ಎರಡು ಮೂರು ಪ್ರಾಂತಗಳನ್ನು ಸೇರಿಸಿ ಒಟ್ಟಿಗೆ ಒಂದು ಪ್ರಾಂತ ಮಾಡಬೇಕು ಎಂಬ ಅಭಿಪ್ರಾಯ ಹೊರಬಂತು. ಅದು ಯಾವ ಕಾರಣದಿಂದಲೋ ಈ ಅಭಿಪ್ರಾಯ ದೇಶದಲ್ಲಿ ಹೊರಬಿದ್ದಾಗ ಗಲಾಟೆಗಳೆಲ್ಲ ಒಂದೇ ಒಂದು ವಾರದಲ್ಲಿ ಸ್ವಲ್ಪ ಶಮನಕ್ಕೆ ಕೂಡ ಬಂದವು ಎಂದರೆ ತಪ್ಪಾಗಲಾರದು. ಇದೇ ಅಭಿಪ್ರಾಯವನ್ನೇ ಅನುಸರಿಸಿ ಹೀಗೆ ಎರಡು ಅಥವಾ ಮೂರು ಬೇರೆ ಬೇರೆ ಭಾಷೆಯನ್ನು ಮಾತನಾಡತಕ್ಕ ಪ್ರಾಂತಗಳನ್ನು ಸೇರಿಸಿ ದಕ್ಷಿಣ ಪ್ರದೇಶವನ್ನು ಮಾಡಬೇಕು ಎನ್ನುವ ಅಭಿಪ್ರಾಯವೂ ಹೊರಬಂತು. ಇದೇ ಅಭಿಪ್ರಾಯವನ್ನು ಅಮೃತಸರದ ಕಾಂಗ್ರೆಸ್ ಅಧಿವೇಶನದಲ್ಲಿ ದಕ್ಷಿಣ ಪ್ರಾಂತವೆಂದಿಲ್ಲದೆ ಹೋದರೂ ಕೂಡ ದ್ವಿಭಾಷಾ ಪ್ರಾಂತ (bilingual States) ಮಾಡಬೇಕು ಎನ್ನುವ ತತ್ವವನ್ನು ಅಳವಡಿಸಿ ಮಾಡಿದ ಠರಾವನ್ನು ಅನುಮೋದನೆ ಮಾಡಿದರು. ಆದರೆ ಇಂಥ ಎರಡು ಭಾಷೆಗಳನ್ನು ಮಾತನಾಡತಕ್ಕ ಪ್ರಾಂತಗಳನ್ನು ಸೇರಿಸಿ bilingual States ಮಾಡುವುದಕ್ಕೆ ನಮಗೆ ಬಂದಿರತಕ್ಕ ಪ್ರಮಾದವೇನು; ಇದಕ್ಕೆ ಇನ್ನೂ ಸ್ವಲ್ಪ ದಿವಸ ಕಾದುನೋಡೋಣ; ಈಗಾಗಲೆ ಯಾಕೆ ಮಾಡಬೇಕು? ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಅವರು ಹೇಳುವುದರಲ್ಲಿ ತಿರುಳಿಲ್ಲ, ಈಗಲೇ ಮಾಡಿದರೆ ಸರಿ, ಇಲ್ಲದೆ ಹೋದರೆ ಅನಾಹುತವಾಗುತ್ತದೆಂದು ನಾನೂ ಸಹ ಅಭಿಪ್ರಾಯ ಪಡುವುದಿಲ್ಲ. ದ್ವಿಭಾಷಾ ಅಥವಾ bilingual States ಮಾಡುವುದಕ್ಕೆ ಅಭಿಪ್ರಾಯ ಯಾವರೀತಿ ಇದೆ ಎಂದರೆ ಕೆಲವರು ಈಗಾಗಲೇ ಆಗುವುದು ಸೂಕ್ತವೆಂದು ಹೇಳುತ್ತಾರೆ, ಮತ್ತೆ ಕೆಲವರು ಈಗ ಕೂಡದು, ಇನ್ನೂ ಕೊಂಚ ದಿವಸ ಕಾದುನೋಡೋಣವೆಂದು ಹೇಳುತ್ತಾರೆ. ಒಟ್ಟಿನಲ್ಲಿ ಒಂದು ವಿಚಾರವನ್ನು ಮುಖ್ಯವಾಗಿ ಅರಿಯಬೇಕಾದ್ದೇನೆಂದರೆ, ಇದು ಕೆಡಕು ಮಾಡತಕ್ಕದ್ದಲ್ಲ, ಇದರಿಂದ ಒಳ್ಳೆಯದಾಗುವುದು ಎನ್ನುವುದನ್ನು ಸರ್ವೇಸಾಧಾರಣವಾಗಿ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಒಪ್ಪಿದ ಹಾಗಾಯಿತು. ಈ ಅಭಿಪ್ರಾಯಕ್ಕೇನೋ ಎಲ್ಲರೂ ಮನ್ನಣೆ ಕೊಟ್ಟರು. ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರರು ಕೂಡ ಇದನ್ನು ಸ್ವಾಗತಿಸಿ ಒಂದು ಠರಾವನ್ನು ಪಾಸ್ ಮಾಡಿದ್ದಾರೆ. ಆದರೆ ಸಂಬಂಧಪಟ್ಟ ಪ್ರಾಂತಗಳು, ಶ್ರೀಮಾನ್ ಚೆನ್ನಿಗರಾಮಯ್ಯನವರು ವಿನೋದವಾಗಿ ಹೇಳಿದ ಹಾಗೆ 'ಗಂಡು ಬೇಕು ಎಂದರೆ ಹೆಣ್ಣು ಬೇಡವೆನ್ನುತ್ತದೆ' ಎಂಬಂತೆ, ಈಗ ಈ ಪ್ರದೇಶ ರಚನೆ ಬೇಡವೆಂದು ಹೇಳುತ್ತಿದ್ದಾರೆ. ಇದಕ್ಕೇನು ಮಾಡೋಣ? ಸಂಬಂಧಪಟ್ಟ ಪ್ರಾಂತಗಳು ಕೆಲವರು ಇದನ್ನು ಒಪ್ಪಿದ್ದಾರೆ, ಯಾವ ಪ್ರಾಂತ್ಯದವರೂ ಕೂಡ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ ಇತ್ಯಾದಿ ಕಾರಣಗಳಿರುವುದರಿಂದ ನಾವು ಯಾಕೆ ಇದಕ್ಕೆ ಅಭಿಪ್ರಾಯ ಕೊಡಬೇಕಾದ್ದಿದೆ, ಇದರ ಅಗತ್ಯ ಏನಿದೆ ಎಂದು ಪ್ರಶ್ನೆ ಮಾಡಿದರು.

5-30 P.M.

ಈ ಪ್ರಶ್ನೆಗೆ ನನ್ನ ಉತ್ತರ ಇಷ್ಟೆ. ಯಾರಾದರೂ ಒಬ್ಬರು ಮುಂದೆ ಬಂದು ಈ ಅಭಿಪ್ರಾಯ ನೀಡಬೇಕು; somebody must bell the cat. ನೀನು ಹೇಳು, ನೀನು ಹೇಳು ಎಂದು ಮದುವೆಯ ಕಾಲದಲ್ಲಿ ಆರತಿ ಹಾಡು ಹಾಡುವಾಗ ಹೇಳುವಹಾಗೆ ಹೇಳಿದರೆ ಹೇಗೆ? ಯಾರಾದರೂ ಒಬ್ಬರು ಶುರುಮಾಡಿ ಈ ಅಭಿಪ್ರಾಯಕ್ಕೆ ಮನ್ನಣೆ ಕೊಡಿ ಎಂದರೆ ಆ ಅವಕಾಶ ಮೈಸೂರು ಸಂಸ್ಥಾನಕ್ಕೆ, ನಮಗೆ, ಇದ್ದಪಕ್ಷದಲ್ಲಿ ನಾವೇಕೆ ಮೊದಲು ಅದನ್ನು ಮಾಡಬಾರದು? ಒಂದುವೇಳೆ ದ್ವಿಭಾಷಾಪ್ರಾಂತ ಮಾಡುತ್ತೇವೆಂದರೆ, ಪ್ರಾಂತಗಳು ಒಟ್ಟಿಗೆ ಸೇರಬೇಕೆಂದರೆ ಮೈಸೂರು ಕೂಡ ಆ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತದೆ, ಸ್ವಾಗತ ನೀಡುತ್ತದೆ ಎಂದು ಹೇಳಿದಾಕ್ಷಣ ತಪ್ಪೇನೂ ಆಗುವುದಿಲ್ಲ, ನಮ್ಮ ಮರ್ಯಾದೆಗೇನೂ ಕುಂದು ಬರುವುದಿಲ್ಲ. ಈ ಅಭಿಪ್ರಾಯ ಒಳ್ಳೆಯದು ಎಂದು ಎಲ್ಲರೂ ಹೇಳಿದರೆ ಅದಕ್ಕೆ ನಾವು ಈಗಲೇ ಸ್ವಾಗತ ನೀಡಬೇಕು. ಹಾಗೆ ಸ್ವಾಗತ ನೀಡಿದಾಕ್ಷಣ ಈ ಹೊತ್ತೇ ದಕ್ಷಿಣ ಪ್ರದೇಶ ಆಗುತ್ತದೆಂದು ದಿಗಿಲು ಪಡಬೇಕಾಗಿಲ್ಲ. ಅಥವಾ ಈ ಬಿಲ್ಲಿನಲ್ಲಿರುವ ಹೊಸ ಮೈಸೂರು ಪ್ರಾಂತ ಅಥವಾ ಕರ್ಣಾಟಕ ಪ್ರಾಂತ ಆಗಬಾರದೆಂದು ಹೇಳಿದಹಾಗೂ ಆಗುವುದಿಲ್ಲ. ದಕ್ಷಿಣ ಪ್ರದೇಶವಾಗಲಿ ಅಥವಾ ದ್ವಿಭಾಷಾ ಪ್ರಾಂತವಾಗಲಿ ಕೇರಳ ಮೈಸೂರು ಸೇರಿ ಹೊಸ ಪ್ರಾಂತವಾಗಲಿ ಇವು ಯಾವವಾಗಲಿ ಆಗಬೇಕಾದ ಪ್ರಮೇಯ ಬಂದರೂ, ಮೈಸೂರು ಈಗಿರುವ ರೀತಿಯಲ್ಲೇ ಉಳಿಯಲು ಸಾಧ್ಯವಿಲ್ಲ. ಅಲ್ಲದೆ ಕರ್ಣಾಟಕ ಪ್ರಾಂತ್ಯವಾಗುವುದನ್ನು ತಪ್ಪಿಸಲೂ ಸಾಧ್ಯವಿಲ್ಲ. ಹೊಸ ಮೈಸೂರು ಅಥವಾ ಕರ್ಣಾಟಕ ಪ್ರಾಂತ್ಯವನ್ನು ಮಾತ್ರ ದ್ವಿಭಾಷಾ ಪ್ರಾಂತ್ಯ ರಚನೆಗೆ ಸೇರಿಸಲು ಸಾಧ್ಯ. ಅಂದಮೇಲೆ ಈಗಿರುವ ಮೈಸೂರನ್ನೇ ದ್ವಿಭಾಷಾ ಪ್ರಾಂತ್ಯ ಮಾಡಲು ಸಾಧ್ಯವಿಲ್ಲ. ದಕ್ಷಿಣ ಅಥವಾ ದ್ವಿಭಾಷಾ ಪ್ರಾಂತ್ಯ ಕೂಡದು ಎಂದು ವಿರೋಧ ವ್ಯಕ್ತಪಡಿಸುವವರು ಈ ರೀತಿಯಾದ ಶಂಕೆಯಿಂದ ವಿರೋಧಿಸಬೇಕಾಗಿಲ್ಲ. ಆದ್ದರಿಂದ ಈ ಬಿಲ್ಲಿನಲ್ಲಿ ಅಡಕವಾಗಿರುವ ಮುಖ್ಯ ತತ್ವವನ್ನು, ದೊಡ್ಡ ದೊಡ್ಡ ಪ್ರಾಂತಗಳನ್ನು ನಿರ್ಮಾಣಮಾಡಬೇಕೆಂಬ ಒಂದು ತತ್ವವನ್ನು, ಇಂಡಿಯಾ ಸರ್ಕಾರದವರು ಒಂದಲ್ಲ ಒಂದು ರೀತಿಯಲ್ಲಿ ಅಡಾಪ್ಟ್ ಮಾಡಿಕೊಂಡಿರುವುದರಿಂದ, ಅನಿವಾರ್ಯವಾಗಿ ನಾವು ಅದನ್ನು ಒಪ್ಪಲೇಬೇಕಾಗಿ ಬಂದಿರುವುದರಿಂದ, ನಾನು ಅದನ್ನು ಒಪ್ಪುತ್ತೇನೆಂದು ಹೇಳುವಾಗ ಈ ಒಂದು ಹೊಸ ಅಭಿಪ್ರಾಯವೇನಿದೆ, ದಕ್ಷಿಣ ಪ್ರಾಂತವಾಗಲಿ ಅಥವಾ ಎರಡು ಬೇರೆ ಭಾಷೆ ಮಾತನಾಡುವ ಪ್ರಾಂತ ಸೇರಿ ಒಂದು ಪ್ರಾಂತವಾಗಲಿ ಎಂದು ಹೇಳುವ ಅಭಿಪ್ರಾಯವೇನಿದೆ ಅದಕ್ಕೆ ಮನ್ನಣೆಯನ್ನು ಕೂಡ ಕೊಡುವುದು ಸೂಕ್ತ, ಅದನ್ನ ನಾವು ಸ್ವಾಗತ ಮಾಡುವುದು ಸೂಕ್ತ ಎಂದು ಅಭಿಪ್ರಾಯ ಪಡುತ್ತೇನೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸತಕ್ಕ ಕಾಲದಲ್ಲಿ ಬಹಳ ಚೆನ್ನಾಗಿ ವಿವರಣೆ ಮಾಡಿ ಹೇಳಿದ್ದಾರೆ. ಮತ್ತು ಬೇರೆ ಪ್ರಾಂತದ ಜನರು ಇದಕ್ಕೆ ಒಪ್ಪದೆ ಇದ್ದು ಅಥವಾ ಯಾರೂ ಕೂಡ ಧೈರ್ಯಮಾಡಿ ಮುಂದೆ ಬಂದು ಈ ಅಭಿಪ್ರಾಯಕ್ಕೆ ಬೆಂಬಲಕೊಡುತ್ತೇವೆಂದು ಹೇಳದಿರುವಾಗ ನಮ್ಮ ಸಭಾನಾಯಕರಾದ ಮುಖ್ಯಮಂತ್ರಿಗಳು ಇದಕ್ಕೆ ಮನ್ನಣೆಕೊಟ್ಟು ಬಹು ಧೈರ್ಯತಾಳಿ, ದಕ್ಷಿಣ ಪ್ರದೇಶದ ರಚನೆಯ ವಿಚಾರವನ್ನು ಮೈಸೂರಿನವರು ಹೊರಪ್ರಾಂತ್ಯದ ಜನರು ಮುಂದೆ ಬರುತ್ತಾರೋ ಇಲ್ಲವೋ ಎಂದು ಕಾದು ನೋಡುವುದರ ಬದಲು ನೇರವಾಗಿ ಒಪ್ಪುವುದು ಸೂಕ್ತ ಎಂದು ಒಂದು ನಿಲುವನ್ನು ತೆಗೆದುಕೊಂಡಿರುವುದು ತುಂಬ ಸ್ವಾಗತಾರ್ಹವಾದ ವಿಚಾರ. ಇದಕ್ಕಾಗಿ ನಾನು

(ಶ್ರೀ ಡಿ. ದೇವರಾಜ ಅರಸ್.)

ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಫಸ್ಲಾಲಿ ಕಮಿಷನವರ ವರದಿಯನ್ನು ಚರ್ಚಿಸುವ ಅವಕಾಶ ದೊರೆತಾಗ ನಾವು ನಮ್ಮ ಸಂತೋಷವನ್ನು ವ್ಯಕ್ತಪಡಿಸಿ ಒಂದೆರಡು ವಿಷಯಗಳಲ್ಲಿ ಮಾತ್ರ ಕಳವಳವನ್ನು ಸೂಚಿಸಿದ್ದೆವು. ಈಗ ಈ ಪ್ರಾಂತ ಪುನರ್ವಿಂಗಡಣೆ ಮಸೂದೆ ಕೇಂದ್ರ ಸರ್ಕಾರದಿಂದ ಬಂದು ನಮ್ಮ ಮುಂದೆ ಇರುವ ಸಂದರ್ಭದಲ್ಲಿ ನಾವು ಅದನ್ನು ಸಂತೋಷದಿಂದ ಸ್ವಾಗತಿಸಬೇಕಾಗಿದೆ. ಒಟ್ಟು 26 ಪ್ರಾಂತ ಸರ್ಕಾರಗಳಿಂದ ಆಳಲ್ಪಡುತ್ತಿರತಕ್ಕಂಥ ಭಾರತವನ್ನು 15 ರಾಜ್ಯ ಸರ್ಕಾರಗಳಾಗಿ ವಿಂಗಡಿಸಬೇಕು, 7 ಸಣ್ಣ ಸಣ್ಣ ಪ್ರದೇಶಗಳನ್ನು ಯೂನಿಯನ್ ಪ್ರದೇಶವಾಗಿ ವಿಂಗಡಿಸಬೇಕು ಎಂದು ಮಾಡಿರುವ ಮಸೂದೆ ಭಾರತಾದ್ಯಂತ ಬಹುಸಂಖ್ಯಾ ಜನರಿಗೆ ಒಂದು ಸಮಾಧಾನವನ್ನು ತಂದಿದೆಯೆಂದು ನಾವು ಧಾರಾಳವಾಗಿ ಹೇಳಬಹುದು. ಮೈಸೂರಿನ ಮಟ್ಟಿಗೆ ಹೇಳುವುದಾದರೆ ಫಸ್ಲಾಲಿ ಸಮಿತಿಯವರ ಶಿಫಾರ್ಸಿನ ಫಲವಾಗಿ ಬಳ್ಳಾರಿ ಮೈಸೂರಿನಿಂದ ಸಿಡಿದು ಹೋಗಬಹುದೆಂಬ ಭೀತಿ ಆವರಿಸಿತ್ತು. ಆ ಭೀತಿ ನಿವಾರಣೆಯಾಗಿ ಬಳ್ಳಾರಿ ಮೈಸೂರಿಗೆ ಸೇರಿದ ಪ್ರಾಂತ ಪುನಃ ಮೈಸೂರಿಗೇ ಕೊಡಲ್ಪಟ್ಟಿದೆ. ಇದು ಸಂತೋಷವನ್ನು ವ್ಯಕ್ತಪಡಿಸಬೇಕಾದ ವಿಚಾರ. ಹೀಗೆ ಇನ್ನೂ ಒಂದೆರಡು ಪ್ರದೇಶಗಳು ಈ ಹೊಸ ಪ್ರಾಂತದೊಳಗೆ, ಸಂಸ್ಥಾನದೊಳಗೆ ಬರುವಂಥ ಅವಕಾಶವಾಗಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈಗಲಾದರೂ ಕೂಡ ಕಾಲ ಮಿಂಚಿಲ್ಲ. ಪಾರ್ಲಿಮೆಂಟ್ ಮುಂದೆ ಈ ಬಿಲ್ಲು ಚರ್ಚಿಸಲ್ಪಡುವಾಗ ಈ ವಿಷಯವನ್ನು ಗಮನದಲ್ಲಿಟ್ಟು ಆಲೋಚಿಸಬಹುದು. ಅಲ್ಲದೆ ಈ ವರದಿಯ ಪೀಠಿಕೆಯಲ್ಲಿ ನಮೂದಿಸಿದಂತೆ ಆಡಳಿತ ಸೌಕರ್ಯಕ್ಕಾಗಿ ಕೆಲವು ಸಣ್ಣಪುಟ್ಟ ಬದಲಾವಣೆ ಮಾಡುವ ಸಲುವಾಗಿ ಬೌಂಡರಿ ಕಮಿಷನ್ ಮಾಡುವ ಉದ್ದೇಶ ಕೂಡ ಸರ್ಕಾರಕ್ಕಿದೆಯೆಂದು ತಿಳಿದು ಬರುವುದರಿಂದ ಒಂದು ಆಶೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಹೊರಗಡೆಯಿಂದ ಬರಬೇಕಾದ ಪ್ರದೇಶಗಳಲ್ಲಿ ಕಾಸರಗೋಡಿನ ಕಡೆಗೆ ನಾನು ತಮ್ಮ ಗಮನವನ್ನು ಸೆಳೆಯುತ್ತೇನೆ. ಚಂದ್ರಗಿರಿ ನದಿಯ ಉತ್ತರ ಭಾಗದಲ್ಲಿ ಬಹುಮಂದಿ ಜನರು ಕನ್ನಡಿಗರು. ಅಲ್ಲಿರುವ 36 ಗ್ರಾಮಪಂಚಾಯಿತಿಗಳ ಪೈಕಿ 34 ಗ್ರಾಮ ಪಂಚಾಯಿತಿಗಳ ಜನರು ಕನ್ನಡ ನಾಡಿಗೇ ತಮ್ಮನ್ನು ಸೇರಿಸಬೇಕೆಂದು ಆಗಲೇ ಅರಿಕೆಯನ್ನು ಸಲ್ಲಿಸಿದ್ದಾರೆ; ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರು, ಅಲ್ಲಿನ ರಾಜಕೀಯ ಪಕ್ಷದ ನಾಯಕರು ಈ ರೀತಿ ತಮ್ಮ ಕೋರಿಕೆಯನ್ನು ಸಲ್ಲಿಸಿದ್ದಾರೆ. ಅಲ್ಲಿರುವ ಸುಮಾರು 144 ಶಾಲೆಗಳಲ್ಲಿ 124 ಶಾಲೆಗಳಲ್ಲಿ ಕನ್ನಡವೇ ಮಾಧ್ಯಮ ಭಾಷೆಯಾಗಿದೆ. ಅಲ್ಲದೆ ಮೊದಲಿನಿಂದಲೂ ಚಂದ್ರಗಿರಿಯ ದಕ್ಷಿಣ ಭಾಗ ಹೊಸದುರ್ಗ ಸಬ್ ತಾಲ್ಲೂಕು ಎಂಬ ಹೆಸರನ್ನು ಹೊಂದಿ ಮೊದಲಿನಿಂದ ಮಲೆಯಾಳಿ ಸಂಸ್ಕೃತಿ ಪ್ರಭಾವವುಳ್ಳದ್ದಾಗಿದೆ. ಉತ್ತರ ಭಾಗ ಮಾತ್ರ ಇಂಥ ಎಲ್ಲ ಸಂಪರ್ಕವನ್ನೂ ಬಿಟ್ಟಿದೆ. ಕಾಸರಗೋಡಿನ ಕಾಲೇಜುಗಳಿಂದ ಹೊರಬರುವವರಿಗೆ, ಕೇರಳದಲ್ಲಿ, ಬಹುಶಃ ಕೇರಳ ತನ್ನ ಭಾಷೆಯನ್ನೇ ಆಡಳಿತ ಭಾಷೆಯಾಗಿ ಸ್ವೀಕರಿಸಿದಾಗ, ಉದ್ಯೋಗವನ್ನು ಮಾಡುವುದಕ್ಕೆ ಅವಕಾಶ ಕೂಡ ಸಿಕ್ಕುವುದು ಕಷ್ಟವಾದೀತು. ಭಾಷೆ, ಆಡಳಿತ ಸೌಕರ್ಯ, ಆರ್ಥಿಕ ಭದ್ರತೆ ಇವು ಮೂರನ್ನೂ ತಳಹದಿಯಾಗಿಟ್ಟುಕೊಂಡು ಈ ಪ್ರಾಂತವಿಂಗಡಣೆ ಕೆಲಸಕ್ಕೆ ಈ ದಿವಸ ನಾವು ಪ್ರಾಧಾನ್ಯತೆ ಕೊಡಲೇ ಬೇಕಾಗಿದೆ. ಭಾಷೆಗೆ ಪ್ರಾಧಾನ್ಯತೆ ಇಲ್ಲದೆ ಹೋದರೆ ನಾವು ಈ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನರಲ್ಲಿ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆಯನ್ನುಂಟುಮಾಡಿ ರಾಷ್ಟ್ರ ಬೆಳೆಸಬೇಕೆಂದು ಹೇಳುವುದನ್ನು ಸಾಧಿಸುವುದಕ್ಕೆ ಖಂಡಿತ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಮೊದಲಿನಿಂದಲೂ ಒಂದು ಸಂಪ್ರದಾಯವಿದೆ. ಹೀರೋವರ್ಷಿಪ್ ಎನ್ನುವಂತೆ ಒಬ್ಬ ವ್ಯಕ್ತಿಯಲ್ಲಿ ಅಂಥ ಶ್ರದ್ಧೆಯಿಟ್ಟು ತಮ್ಮ ಹೊಣೆಗಾರಿಕೆಯನ್ನು ಇನ್ನೊಬ್ಬರ ಮೇಲೆ ಹಾಕಿ ನಿಶ್ಚಿಂತರಾಗಿ ಬಾಳುತ್ತಿರುವುದರಿಂದಲೇ ಈ ದಿವಸ ಈ ಸನ್ನಿವೇಶ ಬರುವುದಕ್ಕೆ ಕಾರಣವಾಗಿದೆ. ವ್ಯಷ್ಟಿಗೂ ಸಮಷ್ಟಿಗೂ ಸಮನ್ವಯ ಸರಿಯಾದ ಎಲ್ಲೆಯಲ್ಲಿ ಆಗಬೇಕಾದರೆ ಅದು ಭಾಷೆಯಿಂದ ಸಾಧ್ಯ. ಆದ್ದರಿಂದ ಮಿತವಾದ ಭಾಷಾಭಿಮಾನ ಗೌರವಯುತವಾಗಿದೆ, ಪೂಜನೀಯವಾಗಿದೆ, ಅಭಿಮಾನ ಪೂರ್ವಕವಾಗಿದೆ. ಇದು ಪ್ರತಿಯೊಬ್ಬರೂ ಒಪ್ಪತಕ್ಕ ವಿಚಾರ. ಭಾಷಾವಾರು ಪ್ರಾಂತವು ರಾಷ್ಟ್ರದ ಐಕ್ಯಮತ್ಯಕ್ಕೆ ಭಂಗತರುವುದೆಂಬ ಕಲ್ಪನೆ ನ್ಯಾಯವಲ್ಲ. ಅದು ಜನರಲ್ಲಿ ಅಗತ್ಯವಾಗಿ ಆಗಬೇಕಾದ ಒಂದು ಜಾಗ್ರತಿಯನ್ನು ಮಾಡುವುದಕ್ಕೆ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಬಂದಿದೆ. ಹಿಂದಿನ ಎಷ್ಟೋ ಸಂದರ್ಭಗಳಲ್ಲಿ ಕಾಂಗ್ರೆಸ್ಸು ಭಾಷಾವಾರು ಪ್ರಾಂತಕ್ಕೆ ಮನ್ನಣೆ ಕೊಟ್ಟಿತು. ದುರದೃಷ್ಟವಶಾತ್ ಬೊಂಬಾಯಿ ಘಟನೆಯಿಂದ ರಾಷ್ಟ್ರ ನಾಯಕರು ಮನನೊಂದು ಬೇಸತ್ತಿದ್ದಾರೆ. ಆದ್ದರಿಂದ ಅಮೃತಸರದ ಸಮ್ಮೇಳನದಲ್ಲಿ ಭಾಷಾವಾರು ತತ್ವಕ್ಕೆ ಬದಲಾಗಿ ಇನ್ನೊಂದು ಸಲಹೆಯನ್ನು ತಾತ್ಕಾಲಿಕವಾಗಿ ಚಿಕಿತ್ಸೆಯ ರೂಪದಲ್ಲಿ ನೀಡಿದರು. ಆದರೆ ಈಗ ಈ ದಕ್ಷಿಣ ಪ್ರದೇಶ ರಚನೆಗೆ ಬೆಂಬಲವಿದ್ದ ಹಾಗೆ ಖಂಡಿತ ಕಂಡುಬಂದಿಲ್ಲ. ಏನೇ ಆಗಲಿ ಈ ದ್ವಿಭಾಷಾ ಮತ್ತು ಬಹು ಭಾಷಾ ಪ್ರಾಂತ್ಯಗಳ ರಚನೆಗೆ ಬಂದಿರತಕ್ಕ ಸಲಹೆಗಳು ಖಂಡಿತವಾಗಿಯೂ ವ್ಯಾವಹಾರಿಕ ದೃಷ್ಟಿಯಿಂದ ಪ್ರಕೃತದಲ್ಲಿ ಯೋಗ್ಯವಾದವುಗಳಲ್ಲವೆಂದು ನನ್ನ ಅಭಿಪ್ರಾಯ. ಹಾಗೂ ಒಂದುವೇಳೆ ಈ ದ್ವಿಭಾಷಾ ಅಥವಾ ಬಹು ಭಾಷಾರಾಜ್ಯಗಳನ್ನು ನಿರ್ಮಾಣಮಾಡಬೇಕೆಂಬ ಅಭಿಪ್ರಾಯವಿರುವುದಾದರೆ, ದಕ್ಷಿಣ ಭಾರತದಲ್ಲೆಲ್ಲಾ ರಾಷ್ಟ್ರಭಾಷಾ ಪ್ರಚಾರವು ಹೆಚ್ಚಿನ ಪ್ರಮಾಣದಲ್ಲಿ ನಡೆದು ಸಾರಿಗೆ ಸಾಧನೆಗಳು ಹೆಚ್ಚಿ ಎಲ್ಲ ಮೂಲೆಗಳಿಗೂ ರೈಲ್ವೆ ಸಂಪರ್ಕಗಳು ಏರ್ಪಟ್ಟ ನಂತರ ಪರಿಶೀಲಿಸಬಹುದಾದ ವಿಷಯ ಇದು. ನೂತನ ಮೈಸೂರು ಪ್ರಾಂತ್ಯ ನಿರ್ಮಾಣವಾಗಲಿರುವ ಈ ಸುಸಂದರ್ಭದಲ್ಲಿ ನಾವುಗಳೆಲ್ಲಾ ನಮ್ಮ ನಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಈ ಪ್ರಾಂತ್ಯಗಳನ್ನು ಸುಲಲಿತವಾದ ಹಾದಿಯಲ್ಲಿ ನಿರ್ಮಿಸಿಕೊಳ್ಳತಕ್ಕಂಥ ಒಂದು ದೊಡ್ಡ ಜವಾಬ್ದಾರಿ ನಮ್ಮೆಲ್ಲರಮೇಲೂ ಬಿದ್ದಿದೆ. ಯಾರು ಈ ಹಿಂದೆ ಈ ಮೈಸೂರು ಒಂದು ಪ್ರತ್ಯೇಕ ಪ್ರಾಂತ್ಯವಾಗಿರಬೇಕು ಎಂದು ಆಗ್ರಹಪೂರ್ವಕವಾದ ವಾದವನ್ನು ಹೂಡಿದ್ದರೋ ಅವರೆಲ್ಲರೂ ಸಹ ಈ ದಿವಸ ಬಹಳ ವಿಶಾಲ ಹೃದಯದಿಂದ ನಮ್ಮೆಲ್ಲರಿಗಿಂತಲೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೊಡ್ಡ ದೊಡ್ಡ ಪ್ರಾಂತ್ಯಗಳು ನಿರ್ಮಾಣವಾಗಬೇಕೆಂದು ಹೇಳಿರತಕ್ಕದ್ದು ಸಂತೋಷ ಮತ್ತು ಸೋಜಿಗವಾದಂಥ ವಿಚಾರ. ಈ ಹಿಂದೆ ಒಂದಾನೊಂದು ಕಾಲದಲ್ಲಿ ವಿದ್ಯಾರಣ್ಯರು ಈ ಕರ್ನಾಟಕದಲ್ಲಿ ಸುವರ್ಣ ವೃಷ್ಟಿಯನ್ನೇ ಸುರಿಸಿದ್ದರೆಂದು ಹೇಳುತ್ತಿದ್ದರು. ನಿಜವಾಗಿಯೂ ಅವರು ಚಿನ್ನದ ಮಳೆಯನ್ನು ತರಿಸಿದ್ದರು

ಎಂದು ಅದರ ಅರ್ಥವಲ್ಲ. ಹಾಗೆ ಹೇಳುತ್ತಿದ್ದುದರ ಅರ್ಥ ಆ ದಿವಸ ಈ ಕರ್ಣಾಟಕ ನಾಡಿನಲ್ಲಿ ಅಷ್ಟು ಐಶ್ವರ್ಯ ಮತ್ತು ಸುಭಿಕ್ಷೆಗಳು ತುಂಬಿ ತುಳುಕುತ್ತಿದ್ದುವೆಂದು ಹೇಳುವುದಕ್ಕೆ ಆ ರೀತಿ ಹೇಳಿದ್ದಾರೆ. ಆದರೆ ಈ ದಿವಸ ನಮಗೆ ಮತ್ತೆ ಅಂಥ ಒಂದು ಸುದೈವದ ನಾಡನ್ನು ಕಾಣುವಂಥ ಅವಕಾಶ ಉಂಟಾಗಿದೆ. ಈ ಹೊಸ ಪ್ರಾಂತ್ಯದಲ್ಲಿ ತನ್ನದೇ ಆದ ಒಂದು ಸಂಸ್ಕೃತಿ, ಭಾಷೆ, ಕಲೆ ಇತ್ಯಾದಿಗಳೆಲ್ಲಾ ಮತ್ತೆ ಬೆಳೆದು, ಕೃಷಿ ಕೈಗಾರಿಕೆಗಳ ಅಭಿವೃದ್ಧಿಯಿಂದ ಕೂಡಿ ಈ ನಾಡು ಭಾರತಾಂಬೆಗೆ ತನ್ನ ಒಂದು ಹೆಚ್ಚಿನ ಸೇವೆಯನ್ನು ಸಲ್ಲಿಸತಕ್ಕಂಥ ಒಂದು ಮಹಾ ಸುದೈವವು ನಮಗೀಗ ದೊರೆತಿದೆ ಎಂದು ಭಾವಿಸಿ ನಾವೆಲ್ಲರೂ ಅನ್ಯೋನ್ಯತೆಯಿಂದ ಇದಕ್ಕಾಗಿ ಶ್ರಮಿಸೋಣ, ದುಡಿಯೋಣ. ಇಂಥ ಒಂದು ರಾಜ್ಯ ಬೇಗ ಉದಯವಾಗಲಿ ಎಂದು ಹಾರೈಸಿ ಈ ಮಸೂದೆಯನ್ನು ಸ್ವಾಗತಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri Mulka GOVINDA REDDY.—I oppose this Draft of the States Reorganisation Bill, 1956 and connected proposals for amendment of the Constitution. It is true that most of us wanted reorganisation of the States. As they are at present existing, they are not organised on any rational principle. What we have asked for has not been achieved under this Draft Bill. They have accepted one principle for certain areas and another principle for some other areas. Though there are some welcome provisions under this Bill, there are other provisions which are reactionary and retrograde. We all wanted that the distinction of classification between States and States should go. They have accepted that principle and they have abolished Part A, Part-B and Part C States. While that is welcome, they have tried to introduce another distinction, namely, States and Union Territories. The provision regarding Union Territories is retrograde and reactionary for the simple reason that these 7 Union Territories, namely, Delhi, Bombay, Manipur, Tripura, Himachal Pradesh, Andaman and Nicobar Islands and Laccadives and other islands, these Union Territories are going to be ruled by the Centre, thereby denying the fundamental right of a citizen to be ruled by his own elected representatives. The Legislative Assemblies that were functioning in some of these areas are going to be wiped off and the Central Government is going to rule these territories through their Chief Commissioners. When we have sworn by the principle of democracy, how can we as true democrats accept this retrograde step of the Government of India? Bombay, it is recognised on all hands, is a progressive city. It has contributed to the culture and eminence of India and, as we all know, the citizens of Bombay were second to none in their sacrifices for achieving freedom for India. Is it not unfortunate that those people should today be denied an opportunity of getting themselves ruled through their elected representatives?

Under the Draft Bill, the institution of Rajpramukh has been abolished. We all demanded that that retrograde and anachronic institution should be done away with. It is good that the Government of India have accepted that demand and they have abolished that institution. At the same time I would urge that the privy purses allowed to the Rajpramukhs should also go. In the place of Rajpramukhs, Governors are going to be appointed. Their salaries are not going to be varied under this Bill. When we have accepted the socialistic pattern of society as our goal, is it not time that we should try to narrow down the gulf that is now existing between the incomes of these Governors and the ordinary citizens?

Sir, language is the main basis on which the States are going to be found under the provisions of this Bill, though in the Punjab they have not accepted that principle. I would say that language is the main criterion for Government carving out the State. While that is the case, may I know why the people of the Punjab who have all along fought with other Indians for the freedom of India, should be denied having a Punjab Sabha in the northern part of India? Similarly Bombay—it has been admitted by the Prime Minister himself as forming a geographical part of Maharashtra and it is not included in the new Maharashtra State. That shows that the Government of India have yielded to the pressure tactics of big bourgeoisies. All the happenings, that too all the unhappy incidents that emanated after the decision of the Government of India regarding Bombay were due because of this one discrimi-

(SRI MULKA GOVINDA REDDY.)

nating policy that was adopted by the Government of India. I told Sri Mariappa that I at any rate do not justify the unbridled violence that took place in Bombay and equally I do not justify the unbridled violence resorted to by Morarji's Policy in Bombay. Under this Bill they want to make Bombay, a predominantly Maharashtra city, a Centrally administered territory and Belgaum to be included in Karnataka. Some of my friends are clamouring for a place, for a firka whose name we have not heard or some other area like Kasargod; what right and what justification have we to fight for the continued inclusion of Belgaum in the Karnataka State? Similarly, when they have sworn by one simple criterion, namely, that language should be the basis for the formation of a State, why should 25 lakhs of people here speaking Telugu in areas where they are predominant and contiguous to the Andhra State, against their will, be asked to continue to stay in a unilingual State which they want to form?

A MEMBER.—It is a big question.

Sri Mulka GOVINDA REDDY.—The pleading that Mysore is a composite State and the bigger Mysore is going to be a composite State is only to hoodwink the gullible public. If we accept that language should be the criterion for the formation of a State, we should ask that those areas where the Telugu-speaking people are more than 51 per cent should be included in the Andhra State. Sir, the question of language fanaticism is a very deplorable one. The effect of language fanaticism is going to have very serious repercussions on the people and also on the unity and solidarity of India. Immediately after the publication of the S.R.C. Report, in the University of Mysore, where all cultured people are supposed to be an Assistant Professor was canvassing that in a particular department there were no Kannada speaking people as Professors and it was high time that the non-Kannada people who were occupying the places of professorship in that department should be asked to go out of the University. When that is the feeling in the mind of the so called educated people, what would be the feeling in the minds of the ordinary people, I shudder to think. It is possible that, if the present affairs were to continue, the linguistic minorities are going to be liquidated as the Jews were tried to be liquidated in the Hitler's Germany. Such will be the fanaticism of language.

While I was speaking on the Andhra State Bill, Sri Puttaswamy posed a pertinent question whether if this language fanaticism was adhered to or carried to a logical conclusion, people speaking a different language other than that of the majority of the people, would have to be transported to a State where the people speaking that language are in a predominantly majority position. I am afraid this language fanaticism may drive us to that pitch.

6 P.M.

There are some provisions in this Bill While I spoke on the S.R.C. Report, I had pleaded that there should be equal representation for all States in the Council of States. Now, on account of the S. R. Bill, we are not going to form States with similar area or population strength. There will be certain States with 6 or 7 crores of population and others with a crore and odd. While, I agree that there should be representation in the House of people according to the strength of the population, I am of the view that there should be equal representation for all the States in the Council of States. After the formation of these States, according to the Bill, the Council of States is not going to be reorganised or reconstituted. I feel that it should be reconstitued afresh. Otherwise, there may not be proper representation for the other States which are going to come into existence after 1st October 1956. I see no reason why, in a federal country like India, there should be bi-cameral legislatures in the States. Sri K. Pattabhi Raman, in his inimitable style and with all the emphasis at his command, has forcibly advanced the view that these Councils which do not serve any purpose should be done away with, and, that on the other hand,

the number of Members of the State Legislatures might be increased. At present, in Mysore, we have got 105 members. The ratio of the Members of the Assembly to that of the Members of Parliament that are sent from Mysore is 1 : 9 Under this Bill, after the new Mysore State is formed that ratio is reduced. It will be in the proportion of 1 : 7. For Assam, they have already allowed a ratio of 1 : 9 and when we have urged for the abolition of the Legislative Council which is more or less used for bringing in Government henchmen, it is but right that the number of people that are eligible to sit in the Assembly should be increased and 1 : 9 is a fair ratio which we should all accept. There is an additional basis for this plea, Sir. After the States are reorganised, the constituencies are going to be delimited. At present the constituencies in Mysore have already been delimited and the proportion is 1 : 9 and if we continue the same proportion there will not be any need for delimiting constituencies in the existing State of Mysore, and in the areas that are going to come into Mysore where there is already delimitation, by redelimiting these constituencies, we will not be lessening the strength. On the other hand, we will be increasing the number and decreasing the area of the constituencies which will be also welcomed by those persons from those areas. Regarding delimitation of constituencies, formerly the Commission was holding public sittings thereby giving opportunities to all concerned to express their grievances, to urge their arguments and to place their cards before the Commission. But such a vital method of consulting the people has been done away with under this Bill. Sir, I would urge that it should be revised so as to allow consultation with people and give an opportunity to them to express their views while re-delimitation of constituencies takes place.

Sir, Sri Gopala Gowda, Sri Pattabhi Raman and others and Sri Imam have time and again stressed and I have also stressed that we should not allow too much of concentration of power in the hands of the people at Delhi. I remember, Sir, that Pandit Jawaharlal Nehru had written an article in the "Modern Review" some years ago when I was a student wherein he had said that if proper checks are not placed, it is possible that Jawaharlal Nehru might become a dictator. Sir, today, what he said some years ago, I am afraid, has come true. He had warned us that we should be aware of the in roads that Jawaharlal would be making into the democratic rights of the people. We did not heed his warning and today if we do not put effective checks, this dictatorship will continue.

Sri T. MARIAPPA (Mysore City—North).—Is it the proper forum wherein the Centre is not represented to defend itself, to call them to account on certain matters, Sir?

Sri Mulka GOVINDA REDDY.—The Chief Minister and some others have repeatedly pointed out as to how for everything they will have to ask the Centre for assistance. It was clearly understood that the Centre should have control over defence, communications and external affairs.

Mr. SPEAKER.—What is the relevant clause in the Bill to which the Hon'ble Member is referring?

Sri Mulka GOVINDA REDDY.—Zonal Council which is proposed to be presided over by a Central Minister.

Mr. SPEAKER.—At that rate, the Hon'ble Member knows, anything can be said.

Sri T. MARIAPPA.—Sir, the proposal to form Zonal Councils is itself an attempt to limit the powers of the Centre.

Sri Mulka GOVINDA REDDY.—They have suggested certain amendments to the Constitution and therefore we must press our views.

Mr. SPEAKER.—You can suggest relevant amendments.

Sri Mulka GOVINDA REDDY.—Sir, I am suggesting that there should be decentralisation of powers. The local units should be given their powers. If the primary units or local units, like the Panchayats and the Municipal Councils or District Boards are given more statutory powers to function in the State, there may not be any room for many of the Members to go to the

(SRI MULKA GOVINDA REDDY.)

Government direct. Some of the local defects may be attended to; for instance, asking for a post office or a telephone centre and so on. Today even for such small things we have to look to Delhi, make petitions and representations and wait for months. I am of opinion that such a system should cease. All such powers could be delegated to the States.

Sir, Zonal Councils have been proposed—one for four States in the South. As it is, the present Zonal Council may not be of much use, because no powers have been given to it. If non-official members are associated in the Zonal Council, it would be more useful and the interests concerning the States of the South may be better solved.

Coming to the last point, Sir, many Hon'ble Members were supporting the formation of bilingual States. Some of them opposed the suggestion and quoted the instance of Madras. Madras was not a purely bilingual State as envisaged under the present scheme. There were Telugu people scattered in Mysore, Madhya Pradesh, Hyderabad and Madras, when there was Madras State including Andhra. Therefore, all the Telugu speaking people were not under one Government nor in one State. What has been proposed is that a bilingual State may be formed with all Telugu speaking and all Kannada speaking people joining together, and coming under one administration. For that bi-lingual State two languages may be recognised as official languages. The general administration may be carried on in the language of that particular region. In the Vishala Mysore or Greater Mysore, administration may be carried on through Kannada and in the Vishala Andhra, administration may be carried on through Telugu. For the purpose of Assembly, some may say that it will be difficult for some members to follow the speeches of other members. But, under the Parliamentary Democracy it is the party with programmes and policies that controls the destiny of the people. So, whatever small handicaps there might be, they are going to be set right by the political parties under the Parliamentary Democratic system. It is possible to find out a devise where there can be a common script for Telugu and Kannada. Sir, this bi-lingual State has been welcomed by the Chief Minister of Hyderabad Shri Burugala Ramakrishna Rao and Dr. Channa Reddy and several others. It is not as though that nobody outside Mysore has sponsored or welcomed this idea. I therefore urge that the formation of a bi-lingual State consisting of Vishala Andhra and Vishala Mysore is worth pursuing. By this, all the troubles that we are having today, the injustice that is done to the Telugu people in Mysore State, the injustice done to the people of Bellary, the common interest that we have between Andhra and Mysore could be easily solved. We are all aware that there is a 500 mile border line between Andhra and Mysore. There are so many river valley projects that will have to be taken jointly by these two States. For solving all these problems smoothly and in the interest of the people, we should welcome the formation of a bi-lingual State consisting of Vishala Andhra and Vishala Mysore with Bangalore and Hyderabad as capitals. Thank you, Sir.

MR. SPEAKER.—Now the House will rise and meet at 12 o'clock tomorrow and the general discussion on the S. R. Bill will continue for some time tomorrow also.

The House adjourned at Eighteen Minutes past Six of the Clock to meet at Twelve of the Clock on Tuesday, 3rd April 1956.